ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಸೆಪ್ಟೆಂಬರ್ 2020 ಬೆಲೆ ರೂ. 5/-

ಸ್ವಾಮಿಯವರ ಬ್ರಹ್ಮೋತ್ಸವದ
ವಿಶೇಷ ಸಂಚಿಕೆ




23-09-2020
ಬುಧವಾರ
ರಾತ್ರಿ: ಗರುಡವಾಹನ

ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ವಾರ್ಷಿಕ ಬ್ರಹ್ಮೋತ್ಸವಗಳು
2020 ಸೆಪ್ಟೆಂಬರ್ 19 ರಿಂದ 27 ರ ವರೆಗೆ

ತಿರುಮಲೆ
ಶ್ರೀ ವೆಂಕಟೇಶ್ವರ ಸ್ವಾಮಿಯವರ
ಬ್ರಹ್ಮೋತ್ಸವ
2020 ಸೆಪ್ಟೆಂಬರ್
19 ರಿಂದ 27 ರ ವರೆಗೆ



ತಿರುಮಲೆ ತಿರುಪತಿ ದೇವಸ್ಥಾನಗಳು



19-09-2020 ಶನಿವಾರ
ಹಗಲು: ಧ್ವಜಾರೋಹಣ



19-09-2020 ಶನಿವಾರ
ರಾತ್ರಿ: ದೊಡ್ಡಶೇಷವಾಹನ



20-09-2020 ಭಾನುವಾರ
ಹಗಲು: ಚಿಕ್ಕಶೇಷವಾಹನ



designpsivaprasad

# ಭಗವದ್ಗೀತೆ

ತತಃ ಶ್ವೇತೈರ್ಹಯೈರ್ಯುಕ್ತೇ
ಮಹತಿ ಸ್ಯಂದನೇ ಸ್ಥಿತೌ ॥
ಮಾಧವಃ ಪಾಂಡವಶ್ಚೈವ
ದಿವ್ಯೌಶಂಖೌ ಪ್ರದಧ್ಮುತುಃ ॥

(ಶ್ರೀ ಮದ್ಭಗವದ್ಗೀತೆ - ಅಧ್ಯಾಯ - 1, ಶ್ಲೋಕ -14)



ಆ ಮೇಲೆ ಬಿಳೀ ಕುದುರೆಗಳನ್ನು ಹೂಡಿದ ದೊಡ್ಡ ತೇರಿನ ಮೇಲೆ ಕುಳಿತಿದ್ದ ಕೃಷ್ಣನೂ ಅರ್ಜುನನ್ನೂ ಹೆಸರುವಾಸಿಯಾದ ತಮ್ಮ ಶಂಖಗಳನ್ನು ಊದಿದರು.



ಶ್ರೀನಿವಾಸ ನೀನೇ ಪಾಲಿಸೋ। ಶ್ರಿತಜನಪಾಲ ಗಾನಲೋಲ ಮುಕುಂದನೇ
ಧ್ಯಾನ ಮಾಳ್ಪ ಸಜ್ಜನರ ಮಾನದಿಂ ಪರಿಪಾಲಿಪ। ವೇಣು ಗೋಪಾಲ ಮುಕುಂದ
ವೇದ ವೇದ್ಯ ನಿತ್ಯಾನಂದ ಎಂದಿಗೆ ನಿನ್ನ ಪಾದಾಬ್ಜವ ಪೊಂದುವ ಸುಖ।
ಎಂದಿಗೆ ಲಭ್ಯವೋ ಮಾಧವ ॥ ಅಂಧಕಾರಣ್ಯದಲ್ಲಿ ನಿಂದು ತತ್ತರಿಸುತಿಹೆನೋ
ಅಂದದಿಂ ಭವಾಬ್ಧಿಯೊಳು ಮಿಂದುನೊಂದೆನೂ ಮುಕುಂದ ಎಷ್ಟು ದಿನ ಕಷ್ಟ
ಪಡುವುದೊ ಯಶೋದೆ ಕಂದ ದೃಷ್ಟಿಯಿಂದ ನೋಡಲಾಗದೆ ॥
ಮುಟ್ಟಿ ನಿನ್ನ ಭಜಿಸಲಾರೆ ಕೆಟ್ಟ ನರಜನ್ಮದವ ದುಷ್ಟಕಾರ್ಯ ಮಾಡಿದಾಗ್ಯೂ ಇಷ್ಟನಾಗಿ
ಕೈಯ ಪಿಡಿದು ಅನುದಿನ ಅನೇಕ ರೋಗಂಗಳ ಅನುಭವಿಸಿದೆನು॥
ಘನ ಮಹಿಮನೆ ಕೇಳಯ್ಯ ॥ ತನುವಿನಲ್ಲಿ ಬಲವಿಲ್ಲ ನೆನೆದ ಮಾತ್ರ ಸಲಹುವ।
ಹನುಮದೀಶ ಪುರಂದರವಿಠಲನೇ ಕೈಯ ಪಿಡಿದು

- ಶ್ರೀ ಪುರಂದರದಾಸರು

(ಐದನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

ದೈವಾತ್ಪ್ರಾಪ್ತೇ ವೃಷಗಿರಿತಟಂ ದೇಹಿನಿ ತ್ವನ್ನಿದಾನಾತ್ ಸ್ವಾಮಿನ್ ಪಾಹೀತ್ಯವಶವಚನೇ ವಿಂದತಿ ಸ್ವಾಪಮಂತ್ಯಮ್।
ದೇವಃ ಶ್ರೀಮಾನ್ ದಿಶತಿಕರುಣೇ ದೃಷ್ಟಿ ಮಿಚ್ಛಂ ಸ್ತ್ವದೀಯಾಂ ಉದ್ಘಾತೇನ ಶ್ರುತಿಪರಿಷದಾ ಮುತ್ತರೇಣಾಭಿಮುಖ್ಯಮ್ ॥ ೪೮ ॥

ಹಿಂದಿನ ಪದ್ಯದಲ್ಲಿ ಪರಮಾತ್ಮನು ತನ್ನ ಲೀಲಾ ನಿರ್ವಹಣಕ್ಕಾಗಿಯೇ ಮಾಯಾ ಶಾಸ್ತ್ರಗಳನ್ನೂ ನಿರ್ಮಿಸಿದನೆಂದು ತಿಳಿಸಿ, ಈ ಪದ್ಯದಲ್ಲಿ ೩೭ ನೇ ಪದ್ಯದಲ್ಲಿ ತಿಳಿಸಿರುವಂತೆ ದಿವ್ಯದೇಶವಾಸದ ಪ್ರಭಾವವನ್ನು ತಿಳಿಸುವುದರೊಡನೆ ಜೀವನಿಗೆ ಅಂತಿಮಸ್ಮೃತಿಯುಂಟಾಗುವುದಕ್ಕೆ ದಯೆಯೇ ಕಾರಣವೆಂಬುದನ್ನು ನಿರೂಪಿಸುತ್ತಾರೆ.

ದೇಹಿಯು ವೇಂಕಟಾಚಲಕ್ಕೆ ಆಕಸ್ಮಿಕವಾಗಿ ಹೋಗುವುದೇ ಆಗಲಿ, ಅಲ್ಲಿಗೆ ಹೋದಮೇಲೂ ತನ್ನನ್ನು ರಕ್ಷಿಸಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸಿಕೊಳ್ಳಬೇಕೆಂದು ಅವನಿಗೆ ಮನಸ್ಸು ಉಂಟಾಗುವುದೂ, ಕೇಳಿಕೊಳ್ಳುವಷ್ಟರಲ್ಲಿಯೇ ಅವನಿಗೆ ಮಾತನಾಡುವ ಶಕ್ತಿಯೂ ನಶಿಸಿಹೋದರೂ ಚಿತ್ತಶುದ್ಧಿಯುಂಟಾಗಿ ಅಂತಿಮಸ್ಮೃತಿಯುಂಟಾಗುವುದೂ - ಇವೆಲ್ಲಕ್ಕೂ ಎಲೈ ದಯೆಯೇ! ನೀನೇ ಮೂಲಕಾರಣ. ಪರಮಪುರುಷನಾದ ಶ್ರೀನಿವಾಸನು ತನ್ನ ಲೀಲೆಗಾಗಿಯೇ ತ್ರಿವರ್ಗಗಳನ್ನು ಪ್ರತಿಪಾದಿಸುವ ವೇದದ ಪೂರ್ವಭಾಗ (ಕರ್ಮಕಾಂಡ) ವನ್ನು ಪ್ರಕಟಗೊಳಿಸಿದ್ದರೂ ಸಹ, ಸ್ವಾಭಾವಿಕವಾಗಿಯೇ ಚೇತನೋಜ್ಜೀವನದಲ್ಲಿ ಆಸಕ್ತಳಾಗಿರುವ ನಿನ್ನ (ದಯೆಯ) ಅಪಾಂಗವನ್ನು ಗಮನಿಸಿ ಬಹು ತ್ವರೆಯಿಂದ ಚೇತನನಿಗೆ ವೇದದ ಉತ್ತರ ಭಾಗವಾದ ಜ್ಞಾನವನ್ನು - ಅಂತಿಮಸ್ಮೃತಿಯನ್ನು ಕರುಣಿಸುವನು. ಅಂದರೆ, ಪರಮಕಾರುಣಿನಾದ ಶ್ರೀನಿವಾಸನು - ಚೇತನನು ತಿಳಿದೇ ಆಗಲಿ, ತಿಳಿಯದೆಯೇ ಆಗಲಿ ಪರಮಾತ್ಮನಲ್ಲಿ ಪ್ರಪನ್ನನಾದರೆ - ಅತ್ಯಂತ ತ್ವರೆಯಿಂದ ಅವನನ್ನು ಉದ್ಧರಿಸುವನೆಂದು ಪರಮಾರ್ಥ.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವ್ರೋ ನ ಭೂತೋ ನ ಭವಿಷ್ಯತಿ




ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀ ಶಾರ್ವರಿನಾಮ ಸಂವತ್ಸರ ಭಾದ್ರಪದ - ಅಧಿಕ ಆಶ್ವಯುಜ ಮಾಸ ಸಂಚಿಕೆ

ಸಂಪುಟ - 51 **ಸೆಪ್ಟೆಂಬರ್ 2020** ಸಂಚಿಕೆ - 4


## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ಬ್ರಹ್ಮಾಂಡನಾಯಕನ ಬ್ರಹ್ಮೋತ್ಸವ | - ವೆಂಕಟರಾಘವನ್ .ಎಸ್. | 7 |
| ಹರಿದಾಸರ ದೃಷ್ಟಿಯಲ್ಲಿ ಶೇಷಗಿರಿವಾಸ ಶ್ರೀನಿವಾಸ | - ಡಾ|| ಲಕ್ಷ್ಮೀಕಾಂತ ವಿ. ಮೋಹರೀರ | 14 |
| ತಿರುಮಲೆಯ ಆಲಯ ಮೂರ್ತಿಗಳು | - ಶ್ರೀಮತಿ. ಎಸ್.ವಿ. ಹೇಮಾವತಿ | 19 |
| ದಾಸಕೇಂದ್ರ “ತಿರುಪತಿ” | - ಡಾ|| ವಾಸುದೇವ ಅಗ್ನಿಹೋತ್ರಿ | 22 |
| ಭಕ್ತಿ ಪಕ್ವತೆಯ ಸಾಧನ ಅಧಿಕ ಅಶ್ವಯುಜ ಮಾಸ | - ಡಾ|| ಗುರುರಾಜ ಪೋಶೆಟ್ಟಿಹಳ್ಳಿ | 31 |
| ಶ್ರೀ ಮಧ್ವಪತಿ ವಿಠಲದಾಸರು | - ಡಾ|| ರಾಮಚಂದ್ರದಾಸ್ ಸಿ.ಜೆ. | 37 |
| ವಿಜಯನಗರ ಕಾಲದಲ್ಲಿ ಬ್ರಹ್ಮೋತ್ಸವ | - ದಿ || ಬಿ.ಎನ್.ಶ್ರೀನಿವಾಸನ್ | 39 |
| ತಿರುಮಲೆ | - ಬಿ.ಎನ್.ಎಸ್. | 46 |
| ತಿರುಮಲೆಯ ಮಹಾಪ್ರಸಾದಗಳು | - ಪ್ರೊ|| ಸಿ. ಗೋವಿಂದಾಚಾರ್ | 51 |


ಮುಖಚಿತ್ರ - ಸ್ವಾಮಿಯವರ ಗರುಡೋತ್ಸವ (ತಿರುಮಲೆ)
ಹಿಂಬದಿಚಿತ್ರ - ಸ್ವಾಮಿಯವರ ಚಕ್ರಸ್ನಾನ (ತಿರುಮಲೆ )


**ಗೌರವ ಸಂಪಾದಕರು**
ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಆಚಾರ್ಯ.ಕೆ.ರಾಜಗೋಪಾಲನ್, ಪಿ.ಎಚ್.ಡಿ.

**ಸಂಪಾದಕರು**
ಡಾ|| ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು ,ಎಮ್.ಎ.
ವಿಶೇಷಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ-ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org


ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು **www.tirumala.org** ಮೂಲಕ ವೀಕ್ಷಿಸಬಹುದು.

| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |


ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

ಸಂಪಾದಕೀಯ

# ಬ್ರಹ್ಮಾಂಡನಾಯಕನ ಬ್ರಹ್ಮೋತ್ಸವ

ಸಾಕ್ಷಾತ್ತು ಬ್ರಹ್ಮದೇವನೇ ಪ್ರಾರಂಭಿಸಿದ ಉತ್ಸವವಾದ್ದರಿಂದ ಬ್ರಹ್ಮೋತ್ಸವ ಎಂದು ಕರೆಯಲ್ಪಡುತ್ತಿದೆ. ಪುರಾಣಕಾಲದಿಂದಲೂ ಪ್ರಸಿದ್ಧಿಯಲ್ಲಿರುವ ಉತ್ಸವಗಳಲ್ಲಿ ಪ್ರಮುಖವಾದುದು ಈ ಬ್ರಹ್ಮೋತ್ಸವ ಬ್ರಹ್ಮನ ಆದೇಶದಂತೆ ತೊಂಡಮಾನ ಚಕ್ರವರ್ತಿಯು ವಿಶ್ವಕರ್ಮನ ಸಹಾಯದಿಂದ ಉತ್ಸವಗಳಿಗೆ ವಾಹನವನ್ನು ತಯಾರುಮಾಡಿಸಿ, ಪ್ರತೀ ದಿನವೂ ಎರಡು ವಾಹನಗಳ ಮೇಲೆ ಶ್ರೀ ಹರಿಯ ಮೆರವಣಿಗೆಯನ್ನು ಮಾಡಿಸಿ ಎರಡು ಮೆರವಣಿಗೆಗಳ ನಡುವೆ ಸ್ನಪನ ತಿರುಮಂಜನ (ಅಭಿಷೇಕ) ಏರ್ಪಡಿಸಿದ. ಅಂಕುರಾರ್ಪಣೆಯಿಂದ ಆರಂಭವಾಗಿ ಧ್ವಜಾರೋಹಣ. ಸ್ನಪನ ತಿರುಮಂಜನ . ಪ್ರತಿ ನಿತ್ಯ ವಾಹನ ಸೇವೆಗಳು ನಂತರ ಚಕ್ರಸ್ನಾನ , ಧ್ವಜಾವರೋಹಣೆಗಳಿಂದ 9 ದಿನಗಳ ಉತ್ಸವಗಳು ನಡೆಯುವಂತೆ ಮಾಡಿದ ಇಂದಿಗೂ ಈ ಪದ್ಧತಿಗಳು ಅನೂಚಾನವಾಗಿ ನಡೆದುಕೊಂಡು ಬರುತ್ತಿದೆ.

ಈ ಬ್ರಹ್ಮೋತ್ಸವಗಳ ವಿಶೇಷ ಅಮೋಘವಾದುದು. ಬ್ರಹ್ಮನೇ ಮುಂದೆ ನಿಂತು ನಡೆಸುವ ಉತ್ಸವ ಆದಕ್ಕೆ ಮೆರವಣಿಗೆಯ ಮುಂದೆ ಬ್ರಹ್ಮರಥ ಇರುತ್ತದೆ ಬ್ರಹ್ಮದೇವನೆ ಸ್ವತಃ ಇಲ್ಲಿಗೆ ಬಂದರೆ ಇನ್ನೂ ಉಳಿದ ದೇವತೆಗಳು ಬಾರದೇ ಇರುವರೇ? ಅವರೊಂದಿಗೆ ತಿರುಮಲೆ ಗಿರಿಯಲ್ಲಿದ್ದು ತಪಸ್ಸು ಮಾಡುತ್ತಿರುವ ದೇವತೆಗಳು, ಋಷಿಗಳು, ಸಿದ್ಧಪುರುಷರು ಎಲ್ಲರೂ ಈ ಬ್ರಹ್ಮೋತ್ಸವದಲ್ಲಿ ಪಾಲ್ಗೊಳ್ಳುತ್ತಾರೆಂದು ಪ್ರತೀತಿ. ಕಾರಣವೇನೆಂದರೆ ಸ್ವತಹಾ ವೈಕುಂಠಪತಿಯೇ ತನ್ನ ಸತಿಯರಾದ ಶ್ರೀದೇವಿ, ಭೂದೇವಿಯರೊಂದಿಗೆ ಮೆರವಣಿಗೆಯಲ್ಲಿ ಬರುವನೆಂಬ ನಂಬಿಕೆ. ಅದಕ್ಕೆ ಅನೇಕರು ಬ್ರಹ್ಮೋತ್ಸವಗಳಲ್ಲಿ ದೇವಾಲಯದ ಒಳಗೆ ಹೋಗಿ ದೇವರ ದರ್ಶನ ಮಾಡುವ ಬದಲು ಮೆರವಣಿಗೆಯಲ್ಲಿ ಬರುವ ಶ್ರೀಹರಿಯನ್ನು ನೋಡಿದರೆ ಮೂಲ ಮೂರ್ತಿಯನ್ನು ನೋಡಿದಷ್ಟೇ ಪುಣ್ಯ ಎಂದು ಭಾವಿಸುತ್ತಾರೆ. ಜೊತೆಗೆ ಆ ದರ್ಶನದಿಂದ ಸರ್ವಪಾಪ ಪರಿಹಾರವಾಗುವುದರಲ್ಲಿ ಸಂಶಯವಿಲ್ಲ.

ವಿಜಯನಗರದ ಅರಸರ ಕಾಲದಲ್ಲಿ ವರ್ಷಕ್ಕೆ ಏಳು ಬ್ರಹ್ಮೋತ್ಸವಗಳು ನಡೆಯುತ್ತಿದ್ದುವಂತೆ. ತಿರುಪತಿಯ ಗೋವಿಂದರಾಜ ಸ್ವಾಮಿ ಆಲಯದಲ್ಲಿ ಎರಡು ಬ್ರಹ್ಮೋತ್ಸವಗಳು ನಡೆಯುತ್ತಿದ್ದುವಂತೆ. ಈಗ ಅಧಿಕ ಮಾಸದಲ್ಲಿ ಮಾತ್ರ ಎರಡು ಬ್ರಹ್ಮೋತ್ಸವಗಳನ್ನು ನಡೆಸುತ್ತಾರೆ.

ನಂತರದ ಕಾಲದಲ್ಲಿ ಆಳ್ವಾರರುಗಳಾದ ತಿರುಮಲನಂಬಿ, ರಾಮಾನುಜಾಚಾರ್ಯರು , ಅನಂತಾಳ್ವಾರರು ಮೊದಲಾದವರು ವಿಶಿಷ್ಟರೀತಿಯಲ್ಲಿ ಶ್ರೀನಿವಾಸನಿಗೆ ಸೇವೆಯನ್ನು ಸಲ್ಲಿಸಿ ಆತನ ಅನುಗ್ರಹಕ್ಕೆ ಪಾತ್ರರಾದರು. ಇಂದಿಗೂ ಬ್ರಹ್ಮೋತ್ಸವದ ಸಂದರ್ಭದಲ್ಲಿ ದೇವಸ್ಥಾನದ ದಕ್ಷಿಣ ಸನ್ನಿಧಿ ಬೀದಿಯಲ್ಲಿರುವ ತಿರುಮಲನಂಬಿ ಗುಡಿಯ ಮುಂದೆ ದೇವರ ಮೆರವಣಿಗೆಯನ್ನು ನಿಲ್ಲಿಸಿ ತಮಿಳಿನ ಪ್ರಭಂಧಗಳನ್ನು ಪಠಿಸಿ ದೇವರಿಗೆ ಆರತಿ ಮಾಡಿ ನಂತರ ಮೆರವಣಿಗೆಯನ್ನು ಮುಂದುವರೆಸುವ ವಾಡಿಕೆ ಇದೆ.

ಅದೇ ರೀತಿ ಪರಮಭಕ್ತರುಗಳಾದ ಅನ್ನಮಯ್ಯ ತರಿಗೊಂಡ ವೆಂಗಮಾಂಬ ಆ ಶ್ರೀ ಹರಿಯ ಸೇವೆಯಲ್ಲೇ ತಮ್ಮ ಜೀವನವನ್ನು ಧನ್ಯವನ್ನಾಗಿಸಿಕೊಂಡರು.ಒಮ್ಮೆ ಬ್ರಹ್ಮೋತ್ಸವದಲ್ಲಿ ವೆಂಗಮಾಂಬಳ ಆರತಿಯನ್ನು ಸ್ವೀಕರಿಸಿದ ನಂತರವೇ ಶ್ರೀ ಹರಿಯ ರಥವು ಮುಂದಕ್ಕೆ ಕದಲಿತಂತೆ. ಇನ್ನೂ ಹರಿದಾಸರುಗಳ ಭಕ್ತಿ ವರ್ಣಿಸಲಸಾಧ್ಯವಾದದ್ದು. ಪುರಂದರದಾಸರು, ಕನಕದಾಸರು, ವಿಜಯದಾಸರು, ಗೋಪಾಲದಾಸರು ಮೊದಲಾದವರು ತಪ್ಪದೇ ಬ್ರಹ್ಮೋತ್ಸವದಲ್ಲಿ ಭಾಗವಹಿಸಿ ಅವರ ಗಾನ ಮಾಧುರ್ಯದಿಂದ, ಮೆರವಣಿಗೆಯ ಮುಂದೆ ಭಕ್ತಿಯಿಂದ ಹಾಡುತ್ತಾ ಆ ಪರವಶತೆಯಲ್ಲಿ ನಾಟ್ಯ ಮಾಡುತ್ತಾ ಶ್ರೀನಿವಾಸನ ಮನವೊಲಿಸುತ್ತಾರಂತೆ.

ಒಮ್ಮೆ ವಿಜಯದಾಸರು ಬ್ರಹ್ಮೋತ್ಸವಕ್ಕೆ ಬಂದಾಗ ಅವರನ್ನು ಮೆರವಣಿಗೆಯ ಬಳಿ ಅನುಮತಿಸಲಿಲ್ಲವಂತೆ ಆಗ ಅವರು ಒಂದೆಡೆ ಹತಾಶರಾಗಿ ಕುಳಿತಿದ್ದಾಗ ಯಾರು ಅವರನ್ನು ಅನುಮತಿಸಲಿಲ್ಲವೋ ಅವರೇ ಬಂದು ಮೆರವಣಿಗೆಯ ಬಳಿ ಬರಬೇಕೆಂದು ಕೇಳಿಕೊಂಡರಂತೆ ಏಕೆಂದರೆ ರಥ ಮುಂದಕ್ಕೆ ಸಾಗುತ್ತಿರಲಿಲ್ಲ. , ಕೂಡಲೇ ಓಡೋಡಿ ಬಂದ ವಿಜಯದಾಸರು ಸಾಗಿ ಬಾರಯ್ಯಾ ವೈಕುಂಠಪತಿರಾಯ ನೋಡುವೆ ಮನದಣಿಯಾ ಎಂದು ಹಾಡಿದರಂತೆ. ಕೂಡಲೇ ರಥವು ಸರಸರನೆ ಮುಂದುರುಳಿತಂತೆ. ಇಂತಹ ಮಹಿಮಾನ್ವಿತರು ಮಹಿತಾತ್ಮರುಗಳು ನಡೆದಾಡಿದ ಅತ್ಯಂತ ಪವಿತ್ರ ಭೂಮಿ ತಿರುಮಲೆ, ಸ್ವತಃ ಭೂ ವೈಕುಂಠ ಅಂತಹಾ ಭೂಮಿಯಲ್ಲಿ, ಅದರಲ್ಲೂ ದೇವಸ್ಥಾನದ ನಾಲ್ಕು ಸನ್ನಿಧಿ ಬೀದಿಗಳಲ್ಲಿ ಯಾರು ಪಾದರಕ್ಷೆಗಳನ್ನು ಧರಿಸಿ ತಿರುಗಾಡಬಾರದೆಂಬ ನಿಯಮವಿದೆ.

ಈ ವರ್ಷದ ಬ್ರಹ್ಮೋತ್ಸವಗಳು ಸೆಪ್ಟೆಂಬರ್ 19 ರಿಂದ ಆರಂಭವಾಗಲಿದ್ದು, ಎಲ್ಲೆಡೆ 'ಕರೋನಾ' ಸೊಂಕು ಹರಡುತ್ತಿರುವ ಹಿನ್ನೆಲೆಯಲ್ಲಿ ಭಕ್ತರುಗಳ ಆರೋಗ್ಯದ ದೃಷ್ಟ್ಯಾ ಎಲ್ಲಾ ಉತ್ಸವಗಳನ್ನು ಏಕಾಂತವಾಗಿ ನಡೆಸಬೇಕೆಂದು ತಿ.ತಿ. ದೇ ನಿರ್ಧರಿಸಿದೆ. ಆದಷ್ಟು ಬೇಗ 'ಭವ ರೋಗವೈದ್ಯನಾದ, ಧನ್ವಂತರೀ ರೂಪಿಯಾದ ಶ್ರೀ ಹರಿಯೇ ಈ ರೋಗವನ್ನು ನಾಶ ಮಾಡಿ ನಮ್ಮ ದೇಶವನ್ನಷ್ಟೇ ಅಲ್ಲದೇ ಇಡೀ ಪ್ರಪಂಚವನ್ನೇ ರಕ್ಷಿಸಬೇಕೆಂದು ಒಂದೇ ಮನಸ್ಸಿನಿಂದ ಒಕ್ಕೊರಲಿನಿಂದ ಪ್ರಾರ್ಥಿಸೋಣ. ಎಲ್ಲರೂ ಗೋವಿಂದ ನಾಮಸ್ಮರಣೆ ಮಾಡಿ ಗೋವಿಂದನ ಕೃಪೆಗೆ ಪಾತ್ರರಾಗೋಣ

ಗೋವಿಂದಾ ! ಗೋವಿಂದಾ !



# ಬ್ರಹ್ಮಾಂಡ ನಾಯಕನ ಬ್ರಹ್ಮೋತ್ಸವ!

- ವೆಂಕಟ ರಾಘವನ್.ಎಸ್



ಉತ್ಸವ ನೋಡಲು ಸುಂದರ ರಮಣನ
ಅಚ್ಯುತಾನಂತ ಆನಂದನಿಲಯವಾಸ ।
ಕಲಿಯುಗ ಕಲ್ಪತರು ವರ ಚಿಂತಾಮಣಿ
ವೆಂಕಟೇಶನ ವೈಭವ ಬ್ರಹ್ಮೋತ್ಸವ ॥
ಅವತಾರ ಪುರುಷ ಆದಿ ನಾರಾಯಣ
ನರಹರಿ ರೂಪವು ಇವರೇ ಶ್ರೀಹರಿ ।
ಗರುಡಗಮನ ವೈಕುಂಠಪತಿ ನೆಲಸಿದರಯ್ಯ
ಸಪ್ತಗಿರಿಯಲ್ಲಿ ಶ್ರೀ ವೆಂಕಟಾಚಲಪತಿಯಾಗಿ ॥
ವೈಕುಂಠಪತಿ ಆದಿ ಶೇಷ ವಾಹನದಿ,
ಹದಿನಾಲ್ಕು ಲೋಕದ ಒಡೆಯ ಹಂಸ ವಾಹನದಿ ।
ನರಸಿಂಹರೂಪ ಸಿಂಹವಾಹನದಲ್ಲಿ
ಸೂರ್ಯಕೋಟಿ ತೇಜ ಧವಳ ಮುತ್ತಿನ ರಥದಲ್ಲಿ ।
ಕೇಳಿದವರ ಕೊಡುವ ಕಲ್ಪವೃಕ್ಷ ವಾಹನದಲಿ,
ಸರ್ವಾಂತರ್ಯಾಮಿ ಸರ್ವಭೂಪಾಲವಾಹನದಿ ।
ಅಮೃತ ಹಂಚಿದ ಸುಂದರ ಮೋಹಿನಿ ಅವತಾರ,
ಗೋವರ್ಧನಗಿರಿಧಾರಿ ಗರುಡ ವಾಹನದಿ ।
ರಾಮ ಭಕ್ತಿ ಮೆಚ್ಚಿ ಹನುಮಂತ ವಾಹನದಿ,
ಗಜೇಂದ್ರನಿಗೆ ಮೋಕ್ಷಕೊಟ್ಟ ಗಜ ವಾಹನದಿ ।
ಕೋಟಿಸೂರ್ಯ ತೇಜೋರೂಪಿ ಸೂರ್ಯವಾಹನದಿ,
ರಾಮಚಂದ್ರ ಬಂದ ಚಂದ್ರ ವಾಹನದಿ ।
ಶ್ರೀನಿವಾಸ ಬಂದ ಸ್ವರ್ಣ ರಥದಲಿ ಪರಮಪುರುಷ
ಕಲ್ಕಿರೂಪ ಶ್ರೀ ಹರಿ ಅಶ್ವವಾಹನದಿ ।
ಪುಂಡರೀಕಾಕ್ಷನ ದರುಶನ ಪಾವನ ಪಲ್ಲಕಿ
ಸೇವೆಯಲಿ ಸಕಲ ಪಾಪನಾಶ ಚಕ್ರ ಸ್ನಾನದಿ ।
ವೇದೋದ್ಧಾರಕ ವಿವಿಧ ವಾಹನದಲ್ಲಿ
ಕೊಡುವ ದರುಶನ ಭಾಗ್ಯ ವೆಂಕಟಾಚಲದಲ್ಲಿ ।
ಶ್ರೀದೇವಿ ಭೂದೇವಿ ಸಮೇತ ತಿರುವೆಂಕಟೇಶ
ನಮಿಸಲು ಪದ್ಮಾವತಿ ರಮಣನ ಜನ್ಮ ಧನ್ಯವಯ್ಯಾ ॥

ಕಲಿಯುಗದ ವೈಕುಂಠ ಸಪ್ತಗಿರಿಧಾಮ. ಶ್ರೀಹರಿಯ ನಿವಾಸ. ಶ್ರೀಹರಿ ಅವತಾರ ಪುರುಷ.ಧರ್ಮ ಪರಿರಕ್ಷಣೆಗಾಗಿ ಅವತಾರಗಳಿಂದ ಶಿಷ್ಟ ರಕ್ಷಣೆ ದುಷ್ಟ ಶಿಕ್ಷಣೆ ಮಾಡಿ ಧರ್ಮದ ಉದ್ಧಾರ ಮಾಡುವ ಪುರುಷೋತ್ತಮ ಶ್ರೀಹರಿ.ಭೃಗುಕೋಪದಿ ಭುವಿಯಲಿ ವೈಕುಂಠ. ವೇದ ಸಂರಕ್ಷಣೆ ಮಾಡಲು ಧರ್ಮವ ಉಳಿಸಲು ಯುಗ ಯುಗದಲ್ಲಿ ಅವತರಿಸಿದರು. ಒಂದೊಂದು ಅವತಾರಗಳಿಗೆ ವಿಶಿಷ್ಟತೆ ಇದೆ. ಶ್ರೀಹರಿಯನ್ನು ಪರಮಪುರುಷ, ಅವತಾರ ಪುರುಷ ಎಂದು ಪುರಾಣಗಳು ಕೊಂಡಾಡುವವು.

### ಕಲಿಯುಗದಲ್ಲಿ ರಕ್ಷಣೆ

ಕಶ್ಯಪಾದಿ ಮಹರ್ಷಿಗಳು ಕಲಿಯುಗದ ರಕ್ಷಣೆಗಾಗಿ ಯಜ್ಞ ಯಾಗ ನಿರ್ವಹಿಸಲು, ಧರ್ಮ ರಕ್ಷಣ ಹೊಣೆ ಮತ್ತು ಭಕ್ತರ ಉದ್ಧಾರಕ್ಕಾಗಿ ಚರ್ಚೆ ಮಾಡುತ್ತಿದ್ದರು. ಇಷ್ಟರಲ್ಲಿ ಶ್ರೀ ನಾರದ ಮಹಾಮುನಿ ಅಲ್ಲಿಗೆ ಆಗಮಿಸಿದರು. ಮಹರ್ಷಿಗಳೆಲ್ಲ ನಾರದರನ್ನು ಆಹ್ವಾನಿಸಿ ಕಲಿಯುಗದ ರಕ್ಷಣೆಗಾಗಿ ಯಾಗ, ಯಜ್ಞ ನಿರ್ವಹಣೆಯ ಬಗ್ಗೆ ತಿಳಿಸಿದರು. ನಾರದ ಮಹಾಮುನಿ ಈ ಯಜ್ಞ ಭೋಕ್ತ ಯಾರು? ಕಲಿಯುಗದ ರಕ್ಷಣೆ, ಭಕ್ತರ ಉದ್ಧಾರ ಮಾಡುವವರು ಯಾರು? ಎಂದು ಪ್ರಶ್ನಿಸಿದರು. ಮುನಿಗಳೆಲ್ಲ ನಾರದರನ್ನು ಸೂಚಿಸಲು ಕೇಳಿದರು. ನಾರದ ಮಹಾಮುನಿ ಭೃಗುಮಹರ್ಷಿ ಪರೀಕ್ಷೆ ಮಾಡಿ ತ್ರಿಮೂರ್ತಿಗಳಲ್ಲಿ ಒಬ್ಬರನ್ನು ನಿಯಾಮಕ ಮಾಡಲು ಬೇಡಿದರು. ಭೃಗು ಮಹರ್ಷಿ ಪಾದದಲ್ಲಿ ನೇತ್ರ ಉಳ್ಳವರು. ತಪಃ ಶಕ್ತಿ ಸಂಪನ್ನರು, ತ್ರಿಮೂರ್ತಿಗಳನ್ನು ಪರೀಕ್ಷೆ ಮಾಡಿ ಕಲಿಯುಗದ ರಕ್ಷಣೆ ಭಾರ ಯಾರದು ಎಂದು ನಿರ್ಣಯಿಸಲು ಭೃಗು ಮಹರ್ಷಿಯನ್ನು ಕೇಳಿದರು. ಸತ್ಯಲೋಕಕೆ ತೆರಳಿ ಬ್ರಹ್ಮದೇವರನ್ನು ಪ್ರಾರ್ಥನೆ ಮಾಡಿದರು. ಸೃಷ್ಟಿಕರ್ತ ಕಾರ್ಯದಲ್ಲಿ ನಿಮಗ್ನರಾಗಿ ಭೃಗುವನ್ನು ಗಮನಿಸಲಿಲ್ಲ. ತನ್ನನ್ನು ನೋಡದೆ, ಪ್ರಾರ್ಥನೆ ಕೇಳದಿರಲು ಭೂಲೋಕದಲ್ಲಿ ಬ್ರಹ್ಮದೇವರಿಗೆ ದೇವಸ್ಥಾನ, ಪೂಜೆ ಇರುವುದಿಲ್ಲ ಎಂದು ಶಾಪವ ಕೊಟ್ಟು ಕೈಲಾಸಕ್ಕೆ ತೆರಳಿದರು. ಕೈಲಾಸದಲ್ಲಿ ಪಾರ್ವತೀ ಪರಮೇಶ್ವರ ಅರ್ಧನಾರೀಶ್ವರರಾಗಿ ಭೃಗುವನ್ನು ಗಮನಿಸಲಿಲ್ಲ. ಆಗ್ರಹಗೊಂಡ ಮುನಿ ಪರಮೇಶ್ವರನಿಗೆ ಕೇವಲ ಪಾಷಾಣ ಲಿಂಗಕ್ಕೆ ಪೂಜೆ ಆಗಲಿ ಎಂದು ಶಾಪವನಿತ್ತರು. ದೇವಿ ಪಾರ್ವತಿ ಆಗ್ರಹಗೊಂಡರು. ಭೃಗು ಲೋಕ ಕಲ್ಯಾಣಕ್ಕಾಗಿ ಆರ್ಥಿಸಲು ಬಂದಿರುವರು! ಕ್ಷಮಿಸಬೇಕು ಎಂದು ಶಾಂತಪಡಿಸಿದರು ಪರಮೇಶ್ವರ. ಭೃಗು ಕೋಪದಿಂದ ತೆರಳಿ ವೈಕುಂಠಕೆ ಆಗಮಿಸಿದರು. ಶ್ರೀ ಹರಿ ಆದಿಶೇಷನ ಮೇಲೆ ಮಲಗಿದ್ದರು. ಶ್ರೀ ಮಹಾಲಕ್ಷ್ಮಿ ಶ್ರೀ ಹರಿಯ ಪಾದ ಸೇವೆ ಮಾಡುತಲಿದ್ದರು. ಭೃಗು ಲೋಕ ಕಲ್ಯಾಣಕ್ಕೆ ಬಂದಿರುವೆನು, ನನ್ನ ಪ್ರಾರ್ಥನೆ ಕೇಳಿ ಎಂದು ಸ್ತುತಿಸಿದರು. ತಮ್ಮ ಪ್ರಾರ್ಥನೆ ಕೇಳದಿರಲು ತ್ರಿಮೂರ್ತಿಯರಲ್ಲಿ ಯಾರೂ ನನ್ನನ್ನು ಗಮನಿಸಿಲ್ಲ, ಆಗ್ರಹದಿಂದ ಶ್ರೀ ಹರಿಯ ಎದೆ ಮೇಲೆ ಕಾಲಿನಿಂದ ಹೊಡೆದರು. ನಡೆದ ಘಟನೆಯಿಂದ ಶ್ರೀ ಹರಿ ಮತ್ತು ಶ್ರೀ ಮಹಾ ಲಕ್ಷ್ಮಿ ಆಶ್ಚರ್ಯಗೊಂಡರು. ಶ್ರೀ ದೇವಿಗೆ ತುಂಬಾ ಆಗ್ರಹವಾಯಿತು. ಶ್ರೀ ಹರಿ ಭೃಗುವನ್ನು ನೋಡುತ್ತ ನನ್ನ ವಜ್ರ ಕವಚವಿರುವ ಎದೆಯನ್ನು ಹೊಡೆದಿರುವೆ! ನೋವಾಯಿತೇ? ಎಂದು ಪಾದ ಸೇವೆ ಮಾಡಲು ಮುನಿಯಪಾದ ಒತ್ತುತ್ತಾ ಮೂರನೇ ಕಣ್ಣನ್ನು ಒತ್ತಿದ್ದರು. ಭೃಗು ಮುನಿಯ ಅಹಂಕಾರ ನಾಶವಾಯಿತು. ತನ್ನ ತಪ್ಪನ್ನು ಮನ್ನಿಸಿ, ಕಲಿಯುಗದ ರಕ್ಷಣೆ, ಲೋಕ ಕಲ್ಯಾಣಕೆ ಶ್ರೀ ಹರಿಯೇ ಸಮರ್ಥರು, ಭೂಲೋಕದಲ್ಲಿ ಧರ್ಮ ರಕ್ಷಣೆ, ಭಕ್ತರ ಪೋಷಕರಾಗಿ ಅವತರಿಸಬೇಕು ಎಂದು ಬೇಡಿಕೊಂಡರು. ಶ್ರೀ ಹರಿ ವೆಂಕಟೇಶ್ವರನಾಗಿ ಸ್ವರ್ಣಮುಖಿ ಪ್ರಾಂತದಲ್ಲಿ ನೆಲೆಸಿರುವ ಸಪ್ತಗಿರಿಯಲ್ಲಿ ಅರ್ಚನಾ ಮೂರ್ತಿಯಾಗಿ ನೆಲೆಸುವೆ ಎಂದು ಅಭಯ ಕೊಟ್ಟರು. ಭೃಗು ಮಹರ್ಷಿ ವೆಂಕಟೇಶ ಪಾಹಿಮಾಂ, ವೆಂಕಟೇಶ ರಕ್ಷಮಾಂ! ಎಂದು ಸ್ಮರಿಸುತ್ತ ವೈಕುಂಠದಿಂದ ತೆರಳಿದರು. ಶ್ರೀ ಮಹಾಲಕ್ಷ್ಮಿ ಆಗ್ರಹಗೊಂಡು ವೈಕುಂಠ ಬಿಟ್ಟು ಕರವೀರಪುರಂ (ಇಂದಿನ ಕೋಲ್ಹಾಪುರ) ತೆರಳಿ ತಪಸ್ಸನ್ನು ಆರಂಭಿಸಿದರು. ಶ್ರೀ ಹರಿ ವೈಕುಂಠ ಬಿಟ್ಟು ತಿರುಮಲೆಯ ಸಪ್ತಗಿರಿಯಲ್ಲಿ ಪರಮ ಪವಿತ್ರಪಾದವನ್ನಿಟ್ಟರು.

### ಶ್ರೀನಿವಾಸ - ಪದ್ಮಾವತಿ ಕಲ್ಯಾಣ

ಶ್ರೀ ಹರಿ ವಕುಳ ಆಶ್ರಮಕೆ ತೆರಳಿದರು. ವಕುಳ ದೇವಿ ದ್ವಾಪರಯುಗದಲ್ಲಿ ತಾಯಿ ಯಶೋದೆ! ಬಂದ ಕೃಷ್ಣ ಪರಮಾತ್ಮನನ್ನು ನೋಡಿ ಆನಂದವಾಯಿತು. ಶ್ರೀ ಹರಿಗೆ ಶ್ರೀನಿವಾಸ ಎಂದು ನಾಮಕರಣ ಮಾಡಿದರು. ನಂತರ ಆಕಾಶರಾಜ ಪುತ್ರಿ ಶ್ರೀ ಪದ್ಮಾವತೀ ದೇವಿಯ ಜೊತೆ ವೈಭವೋಪೇತವಾಗಿ ಕಲ್ಯಾಣ ನಡೆಯಿತು. ತ್ರೇತಾಯುಗದಲ್ಲಿ ಶ್ರೀವೇದವತಿಯೇ ಶ್ರೀ ಪದ್ಮಾವತಿ ದೇವಿ.ಸೀತಾ ಮಾತೆ ಅಗ್ನಿ ಪರೀಕ್ಷೆಯ ನಂತರ ವೇದವತಿ ಶ್ರೀ ಹರಿಯನ್ನು ಪರಿಣಯವಾಗಲು ಕೇಳಿಕೊಂಡರು. ಶ್ರೀ ಹರಿ ಕಲಿಯುಗದಲ್ಲಿ ಬೇಡಿಕೆ ಪೂರೈಸುವವನು ಎಂದು ವರ ಕೊಟ್ಟರು. ನಂತರ ಶ್ರೀ ಹರಿ ಅರ್ಚನಾಮೂರ್ತಿಯಾಗಿ ಸ್ವಯಂಭೂ ಸಾಲಗ್ರಾಮಮಯವಾಗಿ ತಿರುಮಲೆ ಸಪ್ತಗಿರಿಯ ಮೇಲೆ ನೆಲೆಸಿದರು. ಶ್ರೀದೇವಿ, ಭೂದೇವಿ ಸ್ವಾಮಿಯ ವೃಕ್ಷಸ್ಥಲದಲ್ಲಿ, ತಾಯಿ ವಕುಳದೇವಿ ಹೂಮಾಲೆಯಾಗಿ ಶ್ರೀನಿವಾಸನ ಸೇರಿದರು.

### ಬ್ರಹ್ಮೋತ್ಸವ ವೈಭವ:

ದೇವರ ಆಲಯದಲ್ಲಿ ಉತ್ಸವ ಮೂರ್ತಿಯನ್ನು ರಥದಲ್ಲಿ ಆಲಯ ಪ್ರಾಂಗಣದ ಸುತ್ತ ಭಜನೆ ಮಾಡುತ್ತ ಭಕ್ತರಿಗೆ ದರುಶನ ಕೊಡುವಭಾಗ್ಯ. ರಥದಲ್ಲಿ ಉತ್ಸವಮೂರ್ತಿ ಪ್ರಾಂಗಣ ಪ್ರದಕ್ಷಿಣೆಯನ್ನು ರಥೋತ್ಸವ ಎಂದು ಕರೆಯುವರು. ಶ್ರೀನಿವಾಸ ದೇವರಿಗೂ ಉತ್ಸವ ರಂಗ ರಂಗ ವೈಭವದಿಂದ ನಡೆಯುವುದು. ನಿತ್ಯ ಕಲ್ಯಾಣ ಹಸಿರು ತೋರಣ, ಭುವಿಯಲ್ಲಿ ಕಲಿಯುಗದ ವೈಕುಂಠ ವೆಂಕಟಾಚಲ! ಬ್ರಹ್ಮೋತ್ಸವಕ್ಕೆ ತುಂಬ ವಿಶಿಷ್ಟತೆ ಇದೆ. ಶ್ರೀನಿವಾಸ ದೇವರಿಗೆ ಸೃಷ್ಟಿ ಕರ್ತರಾದ ಬ್ರಹ್ಮ ದೇವರೇ ಮೊದಲನೆಯ

ಬಾರಿ ನಡೆಸಿರುವುದನ್ನು ಪುರಾಣದಲ್ಲಿ ವರ್ಣಿಸಲಾಗಿದೆ. ಬ್ರಹ್ಮದೇವರಿಂದ ಉತ್ಸವ ಸೇವೆ ನಡೆದಿದ್ದರಿಂದ ಶ್ರೀನಿವಾಸ ದೇವರ ಉತ್ಸವ ಬ್ರಹ್ಮೋತ್ಸವ ಎಂದು ಕರೆಯುವರು.

ಅರ್ಪಯಾಮಾಸ ದೇವಾಯ ಶ್ರೀನಿವಾಸಾಯ ವಿಷ್ಣವೇ ।
ಉತ್ಸವಂ ಶ್ರೀನಿವಾಸಸ್ಯ ವಿಧಿರ್ಯಾತ್ರಾಂ ಮಹೋತ್ಸವೇ ॥

ಶ್ರೀನಿವಾಸ ದೇವರ ಬ್ರಹ್ಮೋತ್ಸವ ಒಂಬತ್ತು ದಿನಗಳು ವೈಭೋಪೇತವಾಗಿ ನಡೆಯುವವು. ಶ್ರೀನಿವಾಸ ದೇವರ ಬ್ರಹ್ಮೋತ್ಸವ ಅಂಕುರಾರ್ಪಣದಿಂದ ಪ್ರಾರಂಭ ಆಗುವುದು. ಶುಭಕಾರ್ಯ ಆರಂಭ ಮಾಡುವಾಗ ಪಾಳಿಕೆಯಲ್ಲಿ ಮೃತಿಕೆ (ಪವಿತ್ರ ಮಣ್ಣು) ತುಂಬಿ ನವ ಧಾನ್ಯಗಳನ್ನು ಕಲಿಸಿ, ನೀರು ಹಾಕಿ ಆಲಯ ಪ್ರಾಂಗಣದಲ್ಲಿ ಭದ್ರ ಪಡಿಸುವರು. ಶ್ರೀ ವೆಂಕಟೇಶ್ವರ ಬ್ರಹ್ಮೋತ್ಸವ ಪ್ರತಿ ವರ್ಷ ಸೂರ್ಯ ಕನ್ಯಾರಾಶಿಯಲ್ಲಿ ಇದ್ದಾಗ ಅಶ್ವಯುಜ ಶುದ್ಧ ಪಾಡ್ಯಮಿ ದಿನ ಆರಂಭವಾಗುವುದು. ಮುಂದಿನ ದಿನ ಮೃತ್ತಿಕಾ ಗ್ರಹಣ ಮಾಡುವರು. ಮೃತ್ತಿಕೆಯನ್ನು ಪಾಳಿಕೆಯಲ್ಲಿ ತುಂಬಿ ಧಾನ್ಯವ ಬೆರೆಸಿ ನೀರು ಹಾಕಿ ಇಡುವರು. ಪ್ರತಿ ದಿನವೂ ನೀರು ತುಂಬಿ ಪಾಳಿಕೆಯಲ್ಲಿ ಧಾನ್ಯಗಳು ಬೆಳೆಯುವ ಹಾಗೆ ಜಾಗರೂಕತೆ ವಹಿಸುವರು. ಮಿಕ್ಕ ಮೃತಿಕೆಯನ್ನು ಯಾಗ ಕುಂಡಕೆ ಬಳಸಲಾಗುವುದು. ಇದನ್ನೇ ಅಂಕುರಾರ್ಪಣ ಎಂದು ಕರೆಯುವರು. ನಂತರ ಪೂರ್ಣ ಕುಂಭ ಪ್ರತಿಷ್ಠೆ ನಡೆಯುವುದು. ಬ್ರಹ್ಮೋತ್ಸವ ಕಾರ್ಯಕ್ರಮವನ್ನು ಶ್ರೀ ಹರಿಯ ಸೇನಾಧಿಪತಿ ವಿಶ್ವಕ್ಸೇನರು ಸ್ವಯಂ ಪರೀಕ್ಷಣೆ ಮಾಡುವರು.

### ಧ್ವಜಾರೋಹಣ

#### ಧ್ವಜಸ್ತಂಭ

ಬ್ರಹ್ಮೋತ್ಸವ ಆರಂಭಗೊಂಡ ಮೊದಲನೆಯ ದಿನ ನಡೆಯುವುದು ಧ್ವಜಾರೋಹಣ, ಪುರಾಣಗಳಲ್ಲಿ ಶ್ರೀನಿವಾಸ ದೇವರ ಬ್ರಹ್ಮೋತ್ಸವದ ವರ್ಣನೆ:

ಕಾರಯಾಮಾಸ ವೈವೇಧಾಃ ಧ್ವಜಾರೋಹಣ ಪೂರ್ವಕಂ ॥
ಸಾಯಂಕಾಲೇ ಚ ಪೂರ್ವೇದ್ಯುಃ ಧ್ವಜಾರೋಹಣ ವಾಸರಾತ್॥
ಅಂಕುರಾರ್ಪಣ ಮಾತೇನುಃ ಸಹರ್ಷ ಪುಲಕಾಂಕುರಾಃ ।
ತತೋ ಪರೇದ್ಯುರಷಿಸಿ ಧ್ವಜಾರೋಹಮಹೋತ್ಸವಂ ॥

ಧ್ವಜಾರೋಹಣ,ಅಂಕುರಾರ್ಪಣ ಪ್ರತಿಪಾದನೆ ಸ್ಪಷ್ಟವಾಗಿ ತಿಳಿಸಲಾಗಿದೆ. ಸುಪ್ರಭಾತ ಸೇವೆ, ತೋಮಾಲ ಸೇವೆ ನಡೆದ ನಂತರ ಶ್ರೀದೇವಿ ಭೂದೇವಿ ಸಮೇತ ಶ್ರೀ ಮಲೆಯಪ್ಪ ಸ್ವಾಮಿಗೆ ನೈವೇದ್ಯ ಸಮರ್ಪಿಸುವರು. ಆಲಯದಲ್ಲಿರುವ ಧ್ವಜಸ್ತಂಭ ಮೇಲೆ ಪತಾಕ ಆವಿಷ್ಕರಣ ಮಾಡುವರು. ಶ್ರೀ ಹರಿಯ ವಾಹನ ಗರುಡ. ಹೊಸ ವಸ್ತ್ರದಲ್ಲಿ ಗರುಡನ ಚಿಹ್ನೆ ಬರೆದು, ಆಲಯದ ಸುತ್ತ ಪ್ರದಕ್ಷಿಣೆಯಾದ ನಂತರ, ಧ್ವಜಸ್ತಂಭ ಬಳಿ ಬಂದು ಉತ್ಸವ ಮೂರ್ತಿಗಳಾದ ಭೋಗ ಶ್ರೀನಿವಾಸ ದೇವರು, ಮಾತ ಶ್ರೀದೇವಿ, ಮಾತ ಭೂದೇವಿ ಸಮಕ್ಷದಲ್ಲಿ ಗೋಧೂಳಿ ಲಗ್ನದಲ್ಲಿ ಗರುಡ ಪತಾಕವನ್ನು ಹಾರಿಸುವರು. ಧ್ವಜಸ್ತಂಭದಲ್ಲಿ ಹಾರುವ ಗರುಡ ಪತಾಕವೇ ಸಕಲ ದೇವತೆಗಳಿಗೆ ಬ್ರಹ್ಮೋತ್ಸವದ ಆಹ್ವಾನ, ಆಹ್ವಾನದ ನಂತರ ಆಗಮಿಸುವ ದೇವತೆಗಳು, ಯಕ್ಷ, ಗಂಧರ್ವ

## ತಿರುಮಲೆಯಲ್ಲಿ ಶ್ರೀನಿವಾಸನ ಉತ್ಸವಗಳು



ತಿರುಮಲೆಯಲ್ಲಿ ಪ್ರತಿದಿನ ಬೆಳಗಿನ ಜಾವದಲ್ಲಿ ಸುಪ್ರಭಾತದಿಂದ ಮೊದಲುಗೊಂಡು ರಾತ್ರಿ ಏಕಾಂತಸೇವೆವರೆಗೂ ಸ್ವಾಮಿಯವರಿಗೆ ಎಷ್ಟೋ ಸೇವೆಗಳು, ಉತ್ಸವಗಳು ನಡೆಯುವುದ್ದಕ್ಕೆ "ನಿತ್ಯೋತ್ಸವ" ಎನ್ನುತ್ತಾರೆ.

## ನಿತ್ಯೋತ್ಸವಗಳು

ತಿರುಮಲೆ ಶ್ರೀನಿವಾಸ ಸ್ವಾಮಿಗೆ ವರ್ಷದುದ್ದಕ್ಕೂ 1.ನಿತ್ಯೋತ್ಸವಗಳು 2.ವಾರೋತ್ಸವಗಳು 3.ಮಾಸೋತ್ಸವಗಳು 4.ವಾರ್ಷಿಕೋತ್ಸವಗಳು ಇಲ್ಲವೇ ಸಂವತ್ಸರೋತ್ಸವಗಳು. ಹೀಗೆ ನಾಲ್ಕು ವಿಧದಲ್ಲಿ ಅತ್ಯಂತ ವೈಭವವಾಗಿ ನಡೆಯುತ್ತದೆ.

ಪ್ರತಿಪುಟದಲ್ಲಿರುವ ಶ್ರೀನಿವಾಸನ ಉತ್ಸವ ವಿವರಗಳನ್ನು ಜೂಲಕಂಟಿ ಬಾಲಸುಬ್ರಮ್ಮಣ್ಯರವರ "ಶ್ರೀ ವೆಂಕಟೇಶ್ವರ ಸ್ವಾಮಿ ಉತ್ಸವಗಳು" (ತಿ.ತಿ.ದೇ.)ಎಂಬ ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ. ಮತ್ತು

ಈ ಉತ್ಸವ ವಿವರಗಳ ಚಿತ್ರಗಳನ್ನು ತಿರುಪತಿಯಲ್ಲಿರುವ ನಮೂನಾಲಯದಲ್ಲಿ ನಡೆದ ವೈಭವೋತ್ಸವದಿಂದ ಆಯ್ದುಕೊಳ್ಳಲಾಗಿದೆ.



ರಿಗೆಲ್ಲ ನಿರ್ಣಿತವಾದ ಸ್ಥಾನ ಸೂಚಿಸಿ, ನೈವೇದ್ಯ ರೂಪದಲ್ಲಿ ಬಲಿ ಸಮರ್ಪಿಸುವರು. ಇಲ್ಲಿಂದ ಬ್ರಹ್ಮೋತ್ಸವ ಆರಂಭ. ಪುರಾಣಗಳಲ್ಲಿ ಶ್ರೀನಿವಾಸ ದೇವರ ಬ್ರಹ್ಮೋತ್ಸವದ ಮತ್ತು ವಾಹನ ಸೇವೆಯ ಬಗ್ಗೆ ವರ್ಣನೆ:

ತಸ್ಮಿನ್ ಮಹೋತ್ಸವೇ ವಿಷ್ಣೋಃ ಧ್ವಜಾರೋಹಣವಾಸರೇ।
ಪ್ರಥಮೇ ಪ್ರಥಮಂಯಾನಂ ಮನುಷ್ಯಾಂದೋಳಿಕಾ ಭವತ್॥
ದ್ವಿತೀಯಂಚ ತಥಾ ರಾತ್ರೌ ಅಭವಚ್ಛೇಷವಾಹನಂ ।
ಶೇಷೇ ಶಯನಶೀಲಸ್ಯ ಶೇಷಾಚಲ ನಿವಾಸಿನಃ ॥
ಸದಾ ಶೇಷಪ್ರಿಯಯಸ್ಯಾಸ್ಯ ಶ್ರೀನಿವಾಸಸ್ಯ ಶಾಲಿಣಃ ॥
ದ್ವಿತೀಯಾದಿವನೇ ಚಾದ್ಯಂ ಭೂಯೋ ಭೂಚ್ಚೇಷವಾಹನಂ ॥
ದ್ವಿತೀಯಂ ತಥಾ ರಾತ್ರೌ ಅಭವದ್ದಂಸವಾಹನಮ್ ।
ತೃತೀಯ ದಿವಸೇ ಚಾದ್ಯಂ ಅಭವತ್ಸಿಂಹವಾಹನಂ ॥
ದ್ವಿತೀಯಂ ಚ ತಥಾ ಯಾನಂ ರಾತ್ರೌ ಮೌಕ್ತಿಕ ಮಂಡಪಂ।
ಚತುರ್ಥದಿವಸೇ ಯಾನಂ ಆದಿಮಂ ಕಲ್ಪಭೂರುಹಃ ॥

### ಮೊದಲನೆಯ ದಿನ :

ಧ್ವಜಾರೋಹಣದ ನಂತರ ಶ್ರೀ ದೇವಿ, ಭೂದೇವಿ ಸಮೇತ ಶ್ರೀ ಮಲೆಯಪ್ಪಸ್ವಾಮಿಯವರನ್ನು ಪುಷ್ಪಮಾಲೆಯಿಂದ ಅಲಂಕರಿಸಿ ದೊಡ್ಡಶೇಷ ವಾಹನದಲ್ಲಿ ಸ್ಥಾಪಿಸಿ ಮಾಡಬೀದಿಗಳಲ್ಲಿ ಮೆರವಣಿಗೆ ಮಾಡಿ ಭಕ್ತರಿಗೆ ದರುಶನ ಭಾಗ್ಯ ಕೊಡುವರು. ಶ್ರೀನಿವಾಸ ದೇವರ ಆಲಯ ಪ್ರಾಂಗಣದ ಸುತ್ತ ಇರುವ ಸ್ಥಳವನ್ನು ಮಾಡಬೀದಿ ಎಂದು ಕರೆಯುವರು. ಪುರಾಣದ ಕಥನ ಪ್ರಕಾರ ಕ್ಷೀರ ಸಾಗರದಲ್ಲಿ ಶ್ರೀಹರಿ ಶಯನಿಸುವ ಶೇಷಾತಲ್ಪವೇ ಆದಿಶೇಷ. ಕಶ್ಯಪ ಪ್ರಜಾಪತಿ, ಕದ್ರುವಿನ ಜೇಷ್ಠ ಪುತ್ರ. ಮಹಾ ತಪಃ ಶಕ್ತಿ ಇಂದ ಬ್ರಹ್ಮದೇವರ ವರ ಪಡೆದು ಭೂ ಭಾರವ ಹೊರುವ ಶಕ್ತಿ ಪಡೆದವರು ಆದಿಶೇಷ. ಶ್ರೀಹರಿಯ ಸದಾ ಸೇವಕ, ತನ್ನ ಶರೀರವನ್ನು ಸುತ್ತು ಸುತ್ತಿ ಹಾಸಿಗೆಯಾಗಿ ಶ್ರೀಹರಿಗೆ ಸೇವೆ ಮಾಡುವರು ಆದಿಶೇಷ. ಇವರ ಅಂಶಯೇ ರಾಮಾಯಣದಲ್ಲಿ ಲಕ್ಷ್ಮಣ ಸ್ವಾಮಿ.

### ಎರಡನೆಯ ದಿನ:

ಉತ್ಸವ ಮೂರ್ತಿಯನ್ನು ಐದು ತಲೆ ಇರುವ ಚಿಕ್ಕ ಶೇಷವಾಹನದಲ್ಲಿ ಪ್ರತಿಷ್ಠಿಸಿ ಮೆರವಣಿಗೆ ನಡೆಸುವರು. ದೊಡ್ಡ ಶೇಷವಾಹನ ಆದಿ ಶೇಷನ ಪ್ರತೀಕ, ಚಿಕ್ಕ ಶೇಷ ವಾಹನ ವಾಸುಕಿ ಎಂದು ಪರಿಗಣಿಸಲಾಗಿದೆ. ಇಂದಿನ ಸಾಯಂಕಾಲ ಸ್ವಾಮಿ ಹಂಸವಾಹನ ಅಧೀಷ್ಠಿಸುವರು ಹಂಸ ವಾಹನದಲ್ಲಿ ಶ್ರೀನಿವಾಸದೇವರು ವಿದ್ಯಾ ಲಕ್ಷ್ಮೀಯಾಗಿ ದರುಶನ ಕೊಡುವುದು ವಿಶೇಷ.









**ಮೂರನೆಯದಿನ:**

ಭಗವದ್ಗೀತೆಯಲ್ಲಿ ಶ್ರೀ ಕೃಷ್ಣಪರಮಾತ್ಮ ಮೃಗಗಳಲ್ಲಿ ಸಿಂಹ ನಾನು ಎಂದು ನುಡಿದಿದ್ದಾರೆ. ಹಿರಣ್ಯಕಶಿಪನು ವಧಿಸಲು ನರಸಿಂಹರೂಪದಲ್ಲಿ ಅವತರಿಸಿ ದಾನವನ ಅಂತ್ಯ ಮಾಡಿ ಶ್ರೀ ಪ್ರಹ್ಲಾದರ ರಕ್ಷಿಸಿ, ನಂಬಿದವರಿಗೆ ಸದಾ ಶ್ರೀಹರಿಯ ಕೃಪಾಕಟಾಕ್ಷ ಇರುವುದು ಎಂದು ನಿರೂಪಿಸಿದರು. ಸಾಯಂಕಾಲ ಸ್ವಾಮಿ ಉಭಯ ದೇವೇರಿ ಸಹಿತ ಭೋಗ ಶ್ರೀನಿವಾಸ ಮೂರ್ತಿಯಾಗಿ ಮುತ್ತಿನ ಮಂಟಪ ವಾಹನದಲ್ಲಿ  ದರುಶನ ಭಾಗ್ಯ ಕೊಡುವರು.

**ನಾಲ್ಕನೆಯ ದಿನ :**

ಮುಂಜಾನೆ ಸ್ವಾಮಿ ಕಲ್ಪವೃಕ್ಷ ವಾಹನದಲ್ಲಿ ಭಕ್ತರಿಗೆ ದರುಶನ ಕೊಡುವರು. ಭಕ್ತರಿಗೆ ಕಾಮಿತಾರ್ಥ ಪ್ರದಾಯಿನಿ, ವರಗಳ ಚಿಂತಾಮಣಿ ಎಂದು ದರುಶನ ಭಾಗ್ಯ ಕೊಡುವರು ಶ್ರೀನಿವಾಸ ದೇವರು.

ಸಂಧ್ಯಾಕಾಲದಲ್ಲಿ  ಸ್ವಾಮಿ ಸರ್ವಭೂಪಾಲ ವಾಹನದಲ್ಲಿ ಭಕ್ತರಿಗೆ ಆನಂದಮಯವಾದ, ಸುಂದರ ರಮಣೀಯ ದರುಶನ ಭಾಗ್ಯ ಕೊಡುವರು.

**ಐದನೆಯ ದಿನ :**

ಕ್ಷೀರಸಾಗರ ಮಥನ ನಂತರ ಅಮೃತ ಹಂಚಲು ಸ್ವಾಮಿ ತೋರಿದ ಅವತಾರ ಮೋಹಿನಿಅವತಾರ. ಸಕಲ ಸೌಂದರ್ಯರಾಶಿ ಮೋಹಿನಿಅವತಾರ. ಶ್ರೀಹರಿಯನ್ನು ಅವತಾರ ಪುರುಷ ಎಂದು ಕರೆಯಲು ಇದೊಂದು ನಿದರ್ಶನ. ಗರುತ್ಮಂತ  ಶ್ರೀಹರಿಯ ವಾಹನ. ತಾಯಿಯ ದಾಸ್ಯ ವಿಮುಕ್ತಿ  ಮಾಡಿ ಶ್ರೀಹರಿಯನ್ನು ದಾಸ್ಯವ ಕೋರಿದ ಮಹಾಭಕ್ತ  ಮಹಾ ಬಲಶಾಲಿ ಗರುತ್ಮಂತ. ಸದಾ ಶ್ರೀಹರಿಯ ಸೇವೆ ಮಾಡುತ್ತ ಇರುವರು. ಶ್ರೀಹರಿಯನ್ನು ಪಕ್ಷಿವಾಹನ ಎಂದು ಕರೆಯುವುದು ಗರುಡ ಶ್ರೀಹರಿಯ ವಾಹನವಾಗಿದ್ದ ಕಾರಣ. ಗರುಡವಾಹನ ಸೇವಯಲ್ಲಿ ಮಕರಕಂಠಿ, ಲಕ್ಷ್ಮೀಹಾರ, ಸಹಸ್ರನಾಮ ಮಾಲೆಯನ್ನು ಶ್ರೀನಿವಾಸದೇವರಿಗೆ ಅಲಂಕರಿಸುವರು.







**ಆರನೆಯ ದಿನ:**

ತ್ರೇತಾಯುಗದಲ್ಲಿ ಶ್ರೀರಾಮ ಸೇವಕ ಹನುಮ. ಸದಾ ಶ್ರೀರಾಮ ಸೇವೆ ಮಾಡುತ್ತ ಯುಗ ಯುಗಗಳಲ್ಲಿ ಶ್ರೀ ಹರಿಯ ಸೇವಕ ಹನುಮ ದೇವರು. ಸಂಜೀವಿನಿ ತಂದು, ಸಾಗರ ದಾಟಿ ಸೀತಾ ಮಾತೆಯನ್ನು ಕಂಡು, ರಾಮ ಮುದ್ರಿಕೆ ಕೊಟ್ಟು ವಾನರ ಸೈನ್ಯ ಜೊತೆಗೂಡಿ ದುಷ್ಟ ರಾವಣ ಸೇನೆಯನ್ನು ಎದುರಿಸಿದ ಮಹಾ ಭಕ್ತ ಹನುಮ. ಹನುಮಂತವಾಹನ ಶ್ರೀನಿವಾಸದೇವರ ರಾಮಾವತಾರ ನೆನಪು ಮಾಡುವ ಸನ್ನಿವೇಶ, ಹನುಮ ಭಕ್ತಿ, ಸ್ವಾಮಿ ನಿಷ್ಠೆ ತೋರುವ ಸುಂದರ ದೃಶ್ಯ. ತಿರುಮಲೆ ಶ್ರೀನಿವಾಸ ದೇವರ ಗೋಪುರದ ಎದುರು ಬೇಡಿ ಆಂಜನೇಯ ಸ್ವಾಮಿ ದೇವಸ್ಥಾನವಿದೆ. ನಮೋ ಹನುಮ, ನಮೋ ವೆಂಕಟೇಶ. ರಾತ್ರಿ ಸ್ವಾಮಿ ಗಜವಾಹನದಲ್ಲಿ ದರುಶನ ಕೊಡುವರು. ಗಜೇಂದ್ರನಿಗೆ ಮೋಕ್ಷ ಕೊಟ್ಟ ಶ್ರೀ ಹರಿ ಗಜವನೇರಿ ಭಕ್ತರಿಗೆ ದರುಶನ ಭಾಗ್ಯ ಕೊಡುವರು. ನೀರಲಿ ಮೊಸಳೆಬಾಯಿಗೆ ಸಿಕ್ಕಿ ತನ್ನ ಶಕ್ತಿ ಎಲ್ಲಾ ಕಳೆದು ಕೊನೆಗೆ ಶ್ರೀಹರಿ ನೀನೇ ದಿಕ್ಕು! ಆದಿ ನಾರಾಯಣ ಎಂದು ಸ್ತುತಿಸಿದಾಗ ಶ್ರೀಹರಿ ವೈಕುಂಠವ ಬಿಟ್ಟು ಗರುಡಾರೂಢರಾಗಿ ಸುದರ್ಶನ ಚಕ್ರ ಪ್ರಯೋಗದಿಂದ ಮೊಸಳೆ ದೇಹ ತುಂಡಾಯಿತು. ಗಜರಾಜಗೆ ವಿಮುಕ್ತಿ ಭಾಗವತ ಪುರಾಣದಲ್ಲಿ ಇದೇ ಗಜೇಂದ್ರ ಮೋಕ್ಷ ಸ್ತುತಿಯನ್ನು ವರ್ಣಿಸಲಾಗಿದೆ.

**ಏಳನೆಯ ದಿನ:**

ಹಗಲಲ್ಲಿ ಸೂರ್ಯ ಕಿರಣ ರಾತ್ರಿಯಲ್ಲಿ ಚಂದ್ರಕಿರಣ, ಹಗಲಿರುಳು ಶ್ರೀನಿವಾಸದೇವರೇ ರಕ್ಷೆ ಎಂಬುವ ಭಾವ. ಬ್ರಹ್ಮಾಂಡನಾಯಕ, ಭುವಿಗೆ ಸೂರ್ಯಚಂದ್ರರು ಜೀವನಾಧಾರ. ಅಂತಹ ಆಧಾರವೂ ಶ್ರೀನಿವಾಸ ದೇವರೇ ಎನ್ನುವ ಸೂಚನೆ ಸೂರ್ಯ ಮತ್ತು ಚಂದ್ರರ ವಾಹನ ಸೇವೆ! ಶ್ರೀನಿವಾಸ ದೇವರ ರಥಕ್ಕೆ ಅನೂರ ಆದಿತ್ಯ ರೂಪದಲ್ಲಿ ರಥ ಸಾರಥ್ಯವಹಿಸುವರು. ಚಂದ್ರಪ್ರಭ ವಾಹನದಲ್ಲಿ ಶ್ರೀನಿವಾಸ ದೇವರು ಪ್ರತೀಕವಾದ ಬಿಳಿವಸ್ತ್ರ, ಬಿಳಿ ಪುಷ್ಪ, ಬಿಳಿ ಮಾಲೆಗಳ ಅಲಂಕಾರ ವಿಶೇಷ.

**ಎಂಟನೆಯ ದಿನ:**

ಮುಂಜಾನೆ ಸ್ವಾಮಿಯು ರಥೋತ್ಸವ. ಸುಂದರ ಹೂವಿನ ಅಲಂಕಾರ, ಸ್ವರ್ಣ, ವಜ್ರ ವೈಢೂರ್ಯ ಹಾರಗಳು ಅಲಂಕಾರದೊಡೆ ಶ್ರೀನಿವಾಸ ದೇವರು ದರುಶನ ಕೊಡುವರು. ಶ್ರೀ ಹರಿಯ ಹತ್ತನೇ ಅವತಾರ ಕಲ್ಕಿ ರೂಪ ಬಿಳಿಯ ಕುದುರೆಯ ಏರಿ ಧರ್ಮ ಸಂರಕ್ಷಣೆ ಮಾಡಲು ಬರುವರು ಎಂದು ಪುರಾಣ ಕಥನ. ಸ್ವಾಮಿ ಅಶ್ವಾರೂಢರಾಗಿ ಭಕ್ತಕೋಟಿಗೆ ದರುಶನ ಭಾಗ್ಯ.

**ಒಂಭತ್ತನೆಯ ದಿನ :**

ಮುಂಜಾನೆ ಪಲ್ಲಕಿ ಸೇವೆನಂತರ ಚಕ್ರಸ್ನಾನ. ಶ್ರೀ ಹರಿಯ ಆಯುಧ ಸುದರ್ಶನ ಚಕ್ರ. ಮೊದಲು ಶ್ರೀದೇವಿ ಭೂದೇವಿ ಸಮೇತ ವೆಂಕಟೇಶ ದೇವರಿಗೆ ವರಾಹಸ್ವಾಮಿ ಆಲಯ ಪ್ರಾಂಗಣದಲ್ಲಿ ಅಭಿಷೇಕ ಮಾಡುವರು. ನಂತರ ಪುಷ್ಕರಿಣಿಗೆ ವೇದ ಮಂತ್ರ ಘೋಷಿಸುತ್ತ ಪಂಡಿತರು ಸುದರ್ಶನ ಚಕ್ರವನ್ನು ಪುಷ್ಕರಿಣಿಯಲ್ಲಿ ಮೂರು ಸಲ ಮುಳುಗಿಸಿ ಪೂಜೆ ಮಾಡಿ ತಿರುಗಿ ದೇವಸ್ಥಾನಕ್ಕೆ ತರುವರು. ಚಕ್ರಸ್ನಾನ ನಡೆಯುವಾಗ ಪುಷ್ಕರಿಣಿಯಲ್ಲಿ ಸ್ನಾನ ಮಾಡಿದರೆ ಸರ್ವ

## ತೋಮಾಲೆ ಸೇವೆ




ತಿರುಮಲೆಯ ಆನಂದ ನಿಲಯದಲ್ಲಿ ಶ್ರೀವೆಂಕಟೇಶ್ವರ ಸ್ವಾಮಿಯವರ ಮೂಲ ವಿರಾಟ್‌ಗೂ ಉತ್ಸವ ಮೂರ್ತಿಗಳಿಗೂ..... ಇನ್ನು ಬೇರೆ ವಿಗ್ರಹಗಳಿಗೂ ಹೂವಿನ ಮಾಲೆಗಳಿಂದ, ತುಲಸಿ ಮಾಲೆಗಳಿಂದ ಅಲಂಕರಿಸುವ ಕಾರ್ಯ ಕ್ರಮವನ್ನು "ತೋಮಾಲೆ ಸೇವೆ" ಅನ್ನುತ್ತಾರೆ. ಭುಜದ ಮೇಲಿನಿಂದ ನೇತಾಡುವಂತೆ ಅಲಂಕರಿಸುವ ಸ್ವಾಮಿಯ ಪುಷ್ಪಾಲಂಕರಣ ವಿಧಾನವನ್ನು "ತೋಳ್ ಮಾಲೈ" ಎನ್ನುತ್ತಾರೆ. ಅದೇ "ತೋಮಾಲೆ" ಯಾಗಿ ಬದಲಾಗಿದೆ ಅನ್ನುತ್ತಾರೆ. ತೋಳ್ ಎಂದರೆ ಭುಜ ಎಂದರ್ಥ.

ಶುಲ್ಕ ಸಲ್ಲಿಸಿದ ಭಕ್ತರೂ ಕೂಡ ಈ ಸೇವೆಯಲ್ಲಿ ಪಾಲ್ಗೊಂಡು ದರ್ಶನ ಪಡೆಯಬಹುದು. ಆದರೆ ಸಾಯಂಕಾಲದ ಹೊತ್ತು ನಡೆಯುವ ತೋಮಾಲೆಸೇವೆ ಮಾತ್ರ ಏಕಾಂತವಾಗಿ ನಡೆಯುತ್ತದೆ.

ಏಕಾಂಗಿಗಳು ಇಲ್ಲವೇ ಜೀಯಂಗಾರರು ಹೂವಿನ ಅರೆಯಿಂದ ಸಿದ್ಧಪಡಿಸಿದ ಹೂಮಾಲೆಯನ್ನು ತೆಗೆದುಕೊಂಡು ಬಂದು ಅರ್ಚಕರಿಗೆ ಕೊಡುತ್ತಿರುವಾಗ ಅರ್ಚಕರು ಸ್ವಾಮಿಯ ಎತ್ತರವಾದ (ನಿಲುವೆತ್ತು) ವಿಗ್ರಹಕ್ಕೆ ಹೂ ಮಾಲೆಯನ್ನು ಅಲಂಕರಿಸುತ್ತಾರೆ.





ಪಾಪ ನಾಶವಾಗಿ ಆಯುರ್ವೃದ್ಧಿ ಆಗುವುದು ಎಂದು ಭಕ್ತರ ನಂಬಿಕೆ. ಕೊನೆಯ ದಿನ ಸಂಜೆ ಧ್ವಜಾವರೋಹಣ ಮಾಡಿ ಒಂಬತ್ತು ದಿನಗಳ ಬ್ರಹ್ಮೋತ್ಸವ ಮುಗಿಯುವುದು. ರಂಗ ರಂಗ ವೈಭವದಿಂದ ಒಂಬತ್ತು ದಿನ ಶ್ರೀದೇವಿ, ಭೂದೇವಿ ಸಮೇತ ಶ್ರೀನಿವಾಸ ದೇವರು ಸಕಲ ಭಕ್ತರಿಗೂ ದರುಶನ ಭಾಗ್ಯ ಕೊಡುವ ಮಹಾ ಉತ್ಸವ ಬ್ರಹ್ಮೋತ್ಸವ. ಭಕ್ತರ ತಂಡೋಪತಂಡ ಶ್ರೀಹರಿಗೆ ಸೇವೆ ಮಾಡಲು ಭಜನೆ, ಮಂತ್ರ ಉಚ್ಚಾರಣೆ ಕೀರ್ತನೆ ನೃತ್ಯ ವೇಷಧಾರಣೆ ಮಾಡಿ ಸ್ವಾಮಿಯ ವಾಹನ ಮತ್ತು ರಥದಮುಂದೆ ಗೋವಿಂದ! ಗೋವಿಂದಾ! ಎಂದು ಭಕ್ತಿ ಪರವಶದಿಂದ ಸ್ವಾಮಿಯ ಸೇವೆ ಮಾಡುವ ದೃಶ್ಯ ರಮಣೀಯ.

'ಕಲೌ ವೆಂಕಟ ನಾಯಕಃ" ಕಲಿಯುಗದಲ್ಲಿ ಬೇರೆ ದಿಕ್ಕಿಲ್ಲ !

ಆಪತ್ಬಾಂಧವ ಶ್ರೀ ಹರಿ ಶ್ರೀ ಶ್ರೀನಿವಾಸ!

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ

ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ

ವೇಂಕಟಾಚಲ ಸಮವಾದ ಸ್ಥಳ ಬ್ರಹ್ಮಾಂಡದಲ್ಲಿ ಇಲ್ಲ! ವೆಂಕಟೇಶ

ದೇವರ ಸರಿ ಸಮ ಹಿಂದೆ ಇಲ್ಲ, ಮುಂದೆ ಇರುವುದಿಲ್ಲ!

ರಮಣೀಯ ದೇವರ ಉತ್ಸವ ನೋಡಿ ಗೋವಿಂದ ನಾಮ

ಘೋಷಣೆಯಿಂದ ಶ್ರೀ ಹರಿಯ ಸೇವೆ ಮಾಡಿ ಪುನೀತರಾಗೋಣ!

ಶ್ರೀಯಃ ಕಾಂತಾಯ ಕಲ್ಯಾಣ ನಿಧಯೇ ನಿಧಯೇರ್ಥಿನಾಂ

ಶ್ರೀ ವೇಂಕಟ ನಿವಾಸಾಯ ಶ್ರೀನಿವಾಸಾಯ ಮಂಗಳಂ

ಗೋವಿಂದ ! ಗೋವಿಂದಾ ! ಹರೇ ಶ್ರೀನಿವಾಸ....



# ಹರಿದಾಸರ ದೃಷ್ಟಿಯಲ್ಲಿ ಶೇಷಗಿರಿವಾಸ ಶ್ರೀನಿವಾಸ

– ಡಾ॥ ಲಕ್ಷ್ಮೀಕಾಂತ. ವಿ. ಮೊಹರೀರ

ದಾಸಸಾಹಿತ್ಯವು ವಿಶ್ವಸಾಹಿತ್ಯ ಕಂಡ ವಿನೂತನ ಬಗೆಯ ಸಾಹಿತ್ಯ ಪ್ರಕಾರ. ಸಾಹಿತ್ಯದ ಶೈಲಿಯಲ್ಲಿ ಸಂಗೀತ ಮಾಧ್ಯಮದ ಮೂಲಕ ತತ್ತ್ವ ಪ್ರಸಾರಕ್ಕೆ ತೊಡಗಿದ್ದು ಇದರ ವೈಶಿಷ್ಟ್ಯ. ಇಂತಹ ವಿಶಿಷ್ಟ ಸಾಹಿತ್ಯ ಪ್ರಕಾರವನ್ನು ಜನರ ಮನಗಳಿಗೆ ತರುವ ಮಹೋದ್ದೇಶ ಕಾರ್ಯ ಮಾಡುವುದರ ಜೊತೆಗೆ, ಜಗನ್ನಾಥನ ಚಿಂತೆಯೂ ಜೀವನದ ಅತ್ಯಂತ ಪ್ರಮುಖ ಅಂಗವೆಂಬುದಾಗಿ ಜಗದ ಜನರಿಗೆ ತಿಳಿಸಿ, ಮಹದುಪಕಾರ ಮಾಡಿದ ಸರ್ವ ಶ್ರೇಯಸ್ಸು ಹರಿದಾಸರಿಗೆ ಸಲ್ಲುತ್ತದೆ.

ಶ್ರೀಮನ್ನಾರಾಯಣನಲ್ಲಿ ಸಾಮಾನ್ಯರಿಗೆ ನಂಬಿಕೆ, ಭಕ್ತಿ ಶ್ರದ್ಧೆ, ಪ್ರೀತಿ ಬೆಳಸಬೇಕೆಂಬ ಮಹದಾಸೆ ಹರಿದಾಸರಲ್ಲಿತ್ತು. ಕರ್ನಾಟಕದ ಹರಿದಾಸ ಪರಂಪರೆಯಲ್ಲಿ ಈ ತನಕ ಸುಮಾರು ೩೦೦ ಜನಕ್ಕೂ ಹೆಚ್ಚಾಗಿ ಹರಿದಾಸರು ತಮ್ಮ ಸೇವೆಯನ್ನು ಶ್ರೀ ಹರಿಯ ಚರಣಕ್ಕೆ ಸಮರ್ಪಣೆ ಮಾಡಿ ಹೋಗಿದ್ದಾರೆ.

ಈ ಕಲಿಯುಗದಲ್ಲಿ ಕ್ಷಮಾ ಸಮಾಧಾನದ ಭಕ್ತಪ್ರಿಯನಾದ ಶ್ರೀ ಶ್ರೀನಿವಾಸ ತನಗೆ ಅವತಾರವಿಲ್ಲದಿದ್ದರೂ ಸುಜೀವಿಗಳು ಧರ್ಮ ಮಾರ್ಗದಿಂದ ಚ್ಯುತರಾಗದಂತೆ ನಿರಂತರ ರಕ್ಷಿಸಲು ಭೂ ವೈಕುಂಠವಾದ ವೆಂಕಟಾದ್ರಿಯಲ್ಲಿ ಬಂದು ನಿಂತಿದ್ದಾನೆ. ಇಂತಹ ಸ್ವಾಮಿಯ ಸೇವೆಯಿಂದ ತಮ್ಮ ಜನ್ಮ ಸಾರ್ಥಕ ಪಡಿಸಿಕೊಳ್ಳುತ್ತಾ ಜಗತ್ತಿಗೆ ಬೆಳಕು ನೀಡಿದ ಹರಿದಾಸರನೇಕರು. ಅವರಲ್ಲಿ ವಿಶೇಷವಾಗಿ ಶ್ರೀ ಪಾದರಾಜರು. ಶ್ರೀ ವ್ಯಾಸರಾಜರು, ಶ್ರೀ ವಾದಿರಾಜರು,ಶ್ರೀ ಜಗನ್ನಾಥದಾಸರು ಶ್ರೀ ಪುರಂದರದಾಸರು, ಶ್ರೀ ಕನಕದಾಸರು, ಶ್ರೀವಿಜಯದಾಸರು, ಶ್ರೀಗೋಪಾಲದಾಸರು, ಶ್ರೀಜಗನ್ನಾಥದಾಸರು ಅಗ್ರಗಣ್ಯರು. ಕಲಿಯುಗದಲ್ಲಿ ಭಗವಂತನ ಅನುಗ್ರಹ ಪಡೆಯಲು ಭಕ್ತಿಯಿಂದ ಶ್ರೀ ಹರಿಯ ಗುಣಗಳನ್ನು ಹೊಗಳಿ ಹಾಡುವುದೇ ಸುಲಭ ಮಾರ್ಗ ಎಂದು ಸಾರಿದರು.

ಭೂವೈಕುಂಠವೆಂದೇ ಹೆಸರಾದ ತಿರುಪತಿಯ ವೆಂಕಟಾದ್ರಿಯಲ್ಲಿ ನೆಲೆನಿಂತ ಶ್ರೀನಿವಾಸ ಕಲಿಯುಗದ ಆದಿದೈವವೆಂದೇ ಪ್ರಸಿದ್ಧವಾಗಿದ್ದಾನೆ.

"ವೆಂಕಟಾದ್ರಿ ಸಮಂಸ್ಥಾನಂ ಬ್ರಹ್ಮಾಂಡೆ ನಾಸ್ತಿ ಕಿಂಚನ।
ವೆಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ ॥"

ಎಂಬ ಬ್ರಹ್ಮ ಪುರಾಣದ ಸಾಲು ಶ್ರೀನಿವಾಸನ ವೆಂಕಟಾದ್ರಿಯ ವೈಶಿಷ್ಟ್ಯಗಳನ್ನು ಎತ್ತಿ ಹಿಡಿಯುತ್ತದೆ. ಭಕ್ತಿ ಸಾಹಿತ್ಯದ ಧಾರೆಯಾಗಿ ಹರಿದು ಬಂದ ದಾಸಸಾಹಿತ್ಯ ವಾಹಿನಿ ಮೂಲಕ ಹರಿದಾಸರು ಶ್ರೀನಿವಾಸನ ಪಾದಗಳಿಗೆ ಅಭಿಷೇಕ ಮಾಡಿ ಪುನೀತರಾಗಿದ್ದಾರೆ. ಸಾರ್ಥಕ ಸುಜೀವಿಗಳಾಗಿದ್ದಾರೆ. ಧನ್ಯರಾಗಿ ಮಾನ್ಯರಾಗಿ ಮೆರೆದಿದ್ದಾರೆ. ಶ್ರೀನಿವಾಸನ ಕರುಣೆಯಿಂದಲೇ ಹೊಮ್ಮಿದ ಕೃತಿಗಳನ್ನುಶ್ರೀನಿವಾಸನ ಬಣ್ಣನೆಗೆ ಸಾಧನೆಗಳಾಗಿಸಿಕೊಂಡರು, ಸಾಧಕ ಜೀವಿಗಳಾದರು.

ಹರಿದಾಸ ಸಾಹಿತ್ಯವು ಮಧ್ವಸಿದ್ಧಾಂತವನ್ನು ಯಥಾವತ್ತಾಗಿ ಕನ್ನಡ ಭಾಷೆಯಲ್ಲಿ ಆವಿಷ್ಕರಿಸಿದ ಅಪೂರ್ವ ಸಾಹಿತ್ಯ. ಅದರಿಂದಾಗಿ ದಾಸರ ಕೃತಿಗಳಲ್ಲಿ ಸಾಮಾಜಿಕ ಚಿಂತನೆಗಳೊಂದಿಗೆ ಆಳವಾದ ತಾತ್ವಿಕ ಚಿಂತನೆ ಎದ್ದು ಕಾಣುತ್ತದೆ. ಹಾಗಾಗಿಯೇ ಹರಿದಾಸ ಸಾಹಿತ್ಯವು ವಿಶಿಷ್ಟ ಬಗೆಯ ಭಕ್ತಿ ಸಾಹಿತ್ಯ





# ಸುಪ್ರಭಾತ

ತಿರುಮಲೆಯಲ್ಲಿ ಸ್ವಾಮಿಯವರಿಗೆ ನಡೆಯುವ ಮೊದಲ ಸೇವೆ ಸುಪ್ರಭಾತ. ಶಯನ ಮಂಟಪದಲ್ಲಿ ರೇಷ್ಮೆ ಹಾಸಿಗೆಯ ಮೇಲೆ ಮಲಗಿರುವ ಶ್ರೀನಿವಾಸ ಪ್ರಭುವನ್ನು ಎಬ್ಬಿಸುವುದಕ್ಕೆ ಸುಪ್ರಭಾತ ಎನ್ನುತ್ತಾರೆ. ಪ್ರತಿದಿನ ಬೆಳಗಿನ ಜಾವದಲ್ಲಿ ಚಿನ್ನದ (ಬಂಗಾರದ) ಬಾಗಿಲ ಮುಂದೆ ಆಚಾರ್ಯ ಪುರುಷರು "ಕೌಸಲ್ಯಾ ಸುಪ್ರಜಾ ರಾಮ......" ಎಂದು ಸುಪ್ರಭಾತ ಶ್ಲೋಕಗಳನ್ನು ಹೇಳುತ್ತಿರುವಾಗ ಅದೇ ಸಮಯದಲ್ಲಿ ತಾಳ್ಳಪಾಕ ಅನ್ನಮಯ್ಯ ವಂಶಸ್ಥರು ಒಬ್ಬರು 'ಮೇಲುಕೋ ಶೃಂಗಾರರಾಯ........' ಅನ್ನುತ್ತಾ ಮೇಲುಕೊಲುವು (ಎಬ್ಬಿಸುವ) ಹಾಡುತ್ತಾರೆ.

ಈ ಸಮಯದಲ್ಲಿ ಅರ್ಚಕರು, ಜಿಯ್ಯರ್, ಆಲಯ ಅಧಿಕಾರಿಗಳು ಸುಪ್ರಭಾತ ಸೇವೆಗೆ ಟಿಕೆಟ್ ಪಡೆದ ಭಕ್ತರೆಲ್ಲರೂ ಬಂಗಾರದ ಬಾಗಿಲ ಮುಂದೆ ಸೇರಿ ಯಾವಾಗ ಚಿನ್ನದ ಬಾಗಿಲು ತೆರೆಯುತ್ತಾರೆ ಎಂದು ನಿರೀಕ್ಷಿಸುತ್ತಾರೆ.

ಬಂಗಾರದ ಬಾಗಿಲ ಮುಂದೆ ಆಚಾರ್ಯರು ಸುಪ್ರಭಾತವನ್ನು ಪೂರ್ತಿಮಾಡಿದ ನಂತರ ಬಂಗಾರದ ಬಾಗಿಲು ತೆರೆಯುತ್ತಾರೆ. ಎಲ್ಲರೂ ಒಬ್ಬರ ನಂತರ ಒಬ್ಬರು ಹೋಗಿ ಸ್ವಾಮಿಯ ದರ್ಶನ ಆರತಿ, ತೀರ್ಥ ಶಠಾರಿಗಳನ್ನು ಸ್ವೀಕರಿಸುತ್ತಾರೆ. ಕೊನೆಯದಾಗಿ ಟಿಕೆಟ್ ಪಡೆದ ಭಕ್ತರು ಹೋಗಿ ಶ್ರೀಸ್ವಾಮಿಯವರನ್ನು ದರ್ಶಿಸುತ್ತಾರೆ. ಸುಪ್ರಭಾತ ಸೇವೆಯಲ್ಲಿ ಸಿಗುವ ಶ್ರೀ ಹರಿಯ ಆಪಾದಮಸ್ತಕ ದರ್ಶನವನ್ನು "ವಿಶ್ವರೂಪ ಸಂದರ್ಶನ" ಎನ್ನುತ್ತಾರೆ. ಈ ದರ್ಶನದಲ್ಲಿ ಸಿಗುವ ಸ್ವಾಮಿಯ ಪಾದದರ್ಶನ ಮಾಡಿದರೆ ಸಾಕು ಪಾಪಗಳೆಲ್ಲಾ ತೊಲಗುತ್ತವೆ. ಆದ್ದರಿಂದಲೇ "ಪಾದದರ್ಶನಂ ಪಾಪ ವಿಮೋಚನಂ" ಎಂದು ಪ್ರಸಿದ್ಧಿ ಹೊಂದಿದೆ.


ನಮೂನಾಲಯ

ಪರಮಾತ್ಮನ ಹಂಬಲವಿರುವ, ಜೀವಾತ್ಮನ ಅಂತಃ ಕರಣದಲ್ಲಿ ಹುಟ್ಟಿದ ಪ್ರೇಮದ ಹೊನಲೇ ಭಕ್ತಿ, ಶಾಂತ ದಾಸ್ಯ, ಸಖ್ಯ, ವಾತ್ಸಲ್ಯ ಹಾಗೂ ಮಧುರ ಇವು ಭಕ್ತಿ ಶಾಸ್ತ್ರದ ಐದು ವಿಧಗಳಾದರೆ, ಶ್ರವಣ, ಕೀರ್ತನೆ, ಸ್ಮರಣೆ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ ಆತ್ಮ ನಿವೇದನೆ ಇವು ಭಕ್ತಿಯ ನವ ವಿಧಗಳು. ಭಕ್ತಿಯ ವಿವಿಧ ಬಗೆಗಳನ್ನು ವಿವಿಧ ದಾಸರುಗಳು ಅನೇಕ ತೆರನಾಗಿ ಚಿತ್ರಿಸಿದ್ದಾರೆ.

ದಾಸಶ್ರೇಷ್ಠರಾದ ಶ್ರೀ ಪುರಂದರದಾಸರು ಶ್ರೀನಿವಾಸನನ್ನು ಕುರಿತು ಅನನ್ಯವಾಗಿ ಸ್ತುತಿಸಿದ್ದಾರೆ. ಭಕ್ತರಿಗೆ ಎಲ್ಲವೂ ಆಗಿರುವ ಶ್ರೀನಿವಾಸನನ್ನು ವರ್ಣಿಸಿದ ಬಗೆ ಹೀಗಿದೆ.

"ನಿನ್ನಂಥ ತಂದೆ ಎನಗುಂಟು ನಿನಗಿಲ್ಲ
ನಿನ್ನಂಥ ಸ್ವಾಮಿ ಎನಗುಂಟು ನಿನಗಿಲ್ಲ
ನಿನ್ನಂಥ ದೊರೆ ಎನಗುಂಟು ನಿನಗಿಲ್ಲ
ನೀನೆ ಪರದೇಶಿ ನಾನೇ ಸ್ವದೇಶಿ
ನಿನ್ನ ಅರಸಿ ಲಕ್ಷ್ಮೀ ಎನಗೆ ತಾಯಿಯುಂಟು
ಎನಗಿದ್ದ ತಾಯಿ ತಂದೆ ನಿನಗ್ಯಾರು
ತೋರೋ ಪುರಂದರವಿಠಲ"

ನಮ್ಮ ಹರಿದಾಸರಿಗೆ ಶೇಷಾಚಲ ವಾಸಿಯಾದ ಶ್ರೀನಿವಾಸನೆಂದರೆ ಪರಮೋತ್ಕೃಷ್ಟ ಅವನ ವರ್ಣನೆಗೆ ಅದೆಷ್ಟು ಪದ, ಸುಳಾದಿ, ಉಗಾಭೋಗ, ಮುಂಡಿಗೆಯೋ? ಅಷ್ಟಾದರು ಅವನ ಅಚಿಂತ್ಯಾದ್ಭುತ ಮಹಿಮೆಯನ್ನು ವರ್ಣಿಸಲು ಸಾಧ್ಯವೇ? ಕುಲ ಕೋಟಿ ಉದ್ಧರಿಸುವ ಅವರ ದಿವ್ಯನಾಮಗಳು, ಸಾಲಿಗ್ರಾಮ ಶಿಲಾರೂಪದಲ್ಲಿ ಸ್ವಯಂವ್ಯಕ್ತನಾಗಿ ನಿಂತ ಅವನ ಭಂಗಿ, ಸೂರ್ಯಕೋಟಿ ಪ್ರಭೆಯಿಂದ ಪ್ರಜ್ವಲಿಸುವ ಮುಖ ಕಮಲ, ಅವನ ಕಲ್ಯಾಣದ ವೈಭೋಗ, ತನ್ನ ವಾಸಕ್ಕಾಗಿ ಈ ಪ್ರದೇಶವನ್ನು ಆಯ್ಕೆ ಮಾಡಿದ ಹಿನ್ನಲೆ, ಈ ಪ್ರದೇಶದ ಪೌರಾಣಿಕ ಹಿನ್ನೆಲೆ, ಅವನ ಉತ್ಸವಗಳು, ಅವನ ಭಕ್ತರ ಭಕ್ತಿ ವೈಚಿತ್ರ್ಯ. ಕಲ್ಪನೆಗೆ ಎಟುಕದ ಅವನ ಅಸದೃಶ ಪವಾಡಗಳು.. ಹೀಗೆ ಹತ್ತು ಹಲವು ಕಾರಣಗಳಿಂದ ಇಂದು ಈ ಕ್ಷೇತ್ರವು ಅದ್ವಿತೀಯ ಭೂವೈಕುಂಠವೆಂದೇ ಖ್ಯಾತವಾಗಿದೆ.

ದಾಸ ಶ್ರೇಷ್ಠರಾದ ಪುರಂದರದಾಸರು ತಮ್ಮ ಕೃತಿಯಲ್ಲಿ 'ವೇಣುನಾದ ಬಾರೋ ಶ್ರೀ ವೆಂಕಟರಮಣನೆ ಬಾರೋ ದಾಸರೋಳು ದಾಸನಾದ ಪುರಂದರವಿಠಲ ಬಾರೋ' ಶ್ರೀನಿವಾಸನು ಸಾಕ್ಷಾತ್ ಕೃಷ್ಣನೇ ಎಂದು ಸ್ಪಷ್ಟ ಪಡಿಸಿ ದಾಸರೋಳು

ವಾಸನಾದ ಎಂಬ ಪದದಿಂದ ದಾಸರಿಗೆ ಭಗವಂತ ಒಲಿಯುವ ರೀತಿ ಬಣ್ಣಿಸಿದ್ದಾರೆ.

'ವೆಂಕಟರಮಣನೆ ಬಾರೋ' ಎಂಬ ಕೃತಿಯಲ್ಲಿ 'ಕಾಮನಯ್ಯ ಕರುಣಾಳು ಶ್ಯಾಮಲ ವರ್ಣನೆ ಬಾರೋ ಕೋಮಲಾಂಗ ಶ್ರೀ ಪುರಂದರ ವಿಠಲನೆ' ಎಂದು ಭಗವಂತನ ಕರುಣೆ ಹಾಗೂ ರೂಪ ಸಂಪತ್ತನ್ನು ತಿಳಿಸಿದ್ದಾರೆ. ತಿರುಪತಿ ವೆಂಕಟರಮಣ ಎಂಬ ಹಾಡಿನಲ್ಲಿ 'ಅಳಗಿರಿಯಿಂದಲಿ ಬಂದ ಸ್ವಾಮಿ ಅಚಿಜನಗಿರಿಯಲಿ ನಿಂದ' ಎಂದು ತಿಳಿಸಿ ಸ್ವಾಮಿಯು ಬಂದ ಹಿನ್ನೆಲೆ ವರ್ಣಿಸಿ ದಾಸರಕೊಡೆ ಗೋವಿಂದ ಅಲ್ಲಿ ದಾರಿ ನಡೆವುದೆ ಚಂದ ಎಂದು ದಾಸರ ಜೊತೆಯಲ್ಲಿ ಭಗವಂತನ ಸನ್ನಿಧಾನವನ್ನು ಉಲ್ಲೇಖಿಸಿದ್ದಾರೆ. ಕಾಶಿ ರಾಮೇಶ್ವರದಿಂದ ಅಲ್ಲಿ ಕಾಣಿಕೆ ಬರುವುದು ಚಂದ ಎಂದು ಅವನ ವೈಭವ ವರ್ಣಿಸಿದ್ದಾರೆ.

ಕನ್ನಡದಲ್ಲಿ ಭಕ್ತಿ ವಾಙ್ಮಯಕ್ಕೆ ಸೂಕ್ತ ಸ್ಥಾನ ಕಲ್ಪಿಸಿಕೊಟ್ಟ ಹರಿದಾಸರು, ತಿಳಿಗನ್ನಡದಲ್ಲಿ ರಚಿಸಿದ ಕೀರ್ತನೆ, ಸುಳಾದಿ, ಉಗಾಭೋಗಗಳನ್ನು ರಾಗಬದ್ಧವಾಗಿ ಹಾಡಿ ಸಂಗೀತವನ್ನು ಪ್ರಸಿದ್ಧಿಗೆ ತಂದರು. ಹರಿದಾಸ ಸಂಸ್ಕೃತಿಯನ್ನು ಉಚ್ಛಮಟ್ಟಕ್ಕೆ ತಂದಂತಹ ಈ ಹರಿದಾಸರು ರಚಿಸಿದ ಕೀರ್ತನಾದಿ ಪ್ರಕಾರಗಳಲ್ಲಿ ಮೂಡಿ ಬಂದ ಶ್ರೀನಿವಾಸನ ವರ್ಣನೆಯು ಶ್ರವಣ ಮನಕಾನಂದವೀವುದು ಎಂಬುವುಷ್ಟರ ಮಟ್ಟಿಗೆ ಜಾಜ್ವಲ್ಯ ಸಾಹಿತ್ಯದಿಂದ ಪರಿಶೋಭಿಸುತ್ತಿವೆ.

ಕೀರ್ತನಾದಿಗಳೆಂಬ ಆಣಿಮುತ್ತುಗಳನ್ನೆಲ್ಲ ಈ ಭೂಮಿಕೆಯಲ್ಲಿ ಹೆಣೆದು ಹರಿದಾಸರ ಅಂತರಂಗದಲ್ಲಿ ಹುದುಗಿದ ಶ್ರೀನಿವಾಸನ ಕುರಿತಾದ ಭಕ್ತಿ ಸ್ವರೂಪವನ್ನು ಇಲ್ಲಿ ಪಡಿಮೂಡಿಸಲಾಗಿದೆ.

ದಾಸಸಾಹಿತ್ಯ ಸಾಮ್ರಾಜ್ಯ ಸ್ಥಾಪಕರಾದ 'ಶ್ರೀ ಪಾದರಾಜರು' "ಹರೇವೇಂಕಟೇಶವಲ್ಲಭ" ದಲ್ಲಿನ 'ಮಂಗಳಾಂಗ ಮಹನೀಯ ಗುಣಾರ್ಣವ ಗಂಗೋದಕ ಪಾದ' ಎಂಬಂತಹ ಸಾಲುಗಳು ಸರಳವಾಗಿ ಪ್ರಾಸಬದ್ಧವಾಗಿ ಸಾಗುತ್ತಲೇ ಮನವನ್ನು ಸಮ್ಮೋಹಕಗೊಳಿಸುತ್ತವೆ.

ತಿರುಮಲೆಯೆಲ್ಲಿ ನೆಲೆನಿಂತ ಶ್ರೀನಿವಾಸನನ್ನು ಕುರಿತಾಗಿ ಹಾಡಿಪೊಗಳುವುದೆಂದರೆ ಶ್ರೀ ಪಾದರಾಜರಿಗೆ ಎಲ್ಲಿಲ್ಲದ ಸಂತಸ. ನವವಿಧ ಭಕ್ತಿಯಲ್ಲೊಂದಾದ ಶ್ರವಣ ಭಕ್ತಿಯ ಕುರಿತಾಗಿ ಇಲ್ಲಿ ವಿವರಿಸಲಾಗಿದೆ.

ಭಗವಂತನಿಗೆ ಸಂಬಂಧಿಸಿದ ವಿಷಯಗಳನ್ನು ಅವನ ಅನಂತ ಗುಣಗಳನ್ನು, ಅವನ ಚೆಲುವಿನ ವರ್ಣನೆಗಳನ್ನು ಶ್ರದ್ಧೆಯಿಂದ ಕೇಳುವುದು "ಶ್ರವಣ ಭಕ್ತಿ". ಹಾಗಾಗಿಯೇ ಹರಿದಾಸರೆಲ್ಲರಿಗೂ ಶ್ರವಣ ಭಕ್ತಿಯ ಮಹಿಮೆಯ ಅರಿವಿದೆ. ಈ ಹಿನ್ನೆಲೆಯಲ್ಲಿ ಇವರು ಶ್ರೀ ಪಾದರಾಯರು ಶ್ರವಣ ಭಕ್ತಿಯ ಹಿರಿಮೆಯನ್ನು .......

"ಭೂಷಣಕೆ ಭೂಷಣ ಇದು ಭೂಷಣ
ಶೇಷಗಿರಿವಾಸ ವರ ವೆಂಕಟೇಶ"
ರಂಗನನು - ನೋಡುವುದೇ ಕಂಗಳಿಗೆ ಭೂಷಣ
ಮಂಗಳಾಂಗಗೆ ಮಣಿವ ಶಿರ ಭೂಷಣ
ಶೃಂಗಾರ ತುಳಸಿ ಮಣಿ ಕೊರಳಿಗೆ ಭೂಷಣ
ರಂಗ ವಿಠಲ ನಿಮ್ಮ ನಾಮ ಅತಿ ಭೂಷಣ."

ಎಂಬ ಕೀರ್ತನೆಯಲ್ಲಿ ಕಿವಿಗೆ ಭೂಷಣ ವಿಷ್ಣು ಕಥೆಯೆಂದು ಸ್ಪಷ್ಟಪಡಿಸುವುದರ ಮೂಲಕ ತೋರಿಸಿ ಕೊಟ್ಟಿದ್ದಾರೆ. ಇನ್ನೊಂದು ಪರಿ ಇಂತಿದೆ.

"ಸ್ಮರಿಸಿದವರನು ಕಾಯ್ವ ನಮ್ಮ
ಸೂರ್ಯಾನೇಕ ಪ್ರಭಾವ
ಸುರಮುನಿಗಳ ಸಂಜೀವ
ಶ್ರೀ ವೆಂಕಟ ನಮ್ಮನು ಪೊರೆವ
ವೈಕುಂಠದಿಂದ ಬಂದು ಶೇಷಾಚಲದಲಿ ನಿಂದು
ಭಕ್ತರ ಪಾಲಿಪೆನೆಂದು ಅಭಯದಯಾಕರ ಸಿಂಧು
ಜಯತು ಜನಶರ್ಧನ ಜಗನ್ಮೋಹನ ವೇಷ
ಜಯ ರಂಗ ವಿಠಲಕರುಣಾ ವಿಲಾಸಾ॥"

ಎಂಬುವುದಾಗಿ ಸುಂದರ ಸುಲಲಿತವಾಗಿ ವರ್ಣಿಸಿದ್ದಾರೆ. ಶೇಶಾದ್ರಿವಾಸನಾದ ತಿರುಮಲೇಶನ ಕುರಿತಾಗಿ ಶ್ರೀ ವಾದಿರಾಜರು.

"ಸಾರಿದೆನೋ ನಾನಿನ್ನ - ವೆಂಕಟರನ್ನ
ನೀರಜನಯನನೇ ನಿರ್ಮಲಗುಣ ಪೂರ್ಣ ।;

ವೆಂಕಟರಮಣನನ್ನು ಅನನ್ಯ ಮನಸ್ಸಿನಿಂದ ಸ್ತುತಿಸುತ್ತ

"ಅನಾಥನು ನಾನು - ಎನಗೆ ಬಂಧುವು ನೀನು
ನಿನ್ನವನೆಂದು ನೋಡೋ - ನಿನಾಗಿ ದಯಮಾಡೋ "

ಎಂಬುವುದಾಗಿ ದಯಾರ್ದ ಹೃದಯದಿಂದ ಬೇಡಿಕೊಂಡ ಕೀರ್ತನೆಯ ಕೊನೆಯಲ್ಲಿ

"ದೇಶ ದೇಶದವರ - ಪೊರೆವಂತೆ ಪೊರೆಯನ್ನ
ಶೇಷಾಚಲ ಘನ್ನ - ಶ್ರೀ ಶಹಯವದನ"

ಎಂಬುದಾಗಿ ತಮ್ಮ ಅಂತರಂಗದ ಅಳಲನ್ನು ಹೊರ ತೋರ್ಪಡಿಸಿದ್ದಾರೆ. ಪಂಚವಿಧ ಭಾವಗಳಲ್ಲೊಂದಾದ ಶಾಂತ ಭಾವಕ್ಕೆ ಹೊಂದಿಕೊಳ್ಳುವ ಶ್ರೀ ವಾದಿರಾಜರ ಒಂದು ಕೃತಿಯ ಸಾಲು ಇಂತಿದೆ.

"ಅರಳಿದ ಕೆಂದಾವರೆಯ ಇರವಧಿಕ್ಕರಿಸುವ
ಗಿರಿಯ ತಿಮ್ಮ ರಾಯನ ಚರಣಗಳ ಕಂಡೆ ನಾ
ಅರುಣ ತಳದಲ್ಲಿಪ್ಪ ಅಂಕುಶಧ್ವಜವಜ್ರಾದಿ
ಸುರುಚಿರ ರೇಖೆಗಳ ಸೊಬಗನು ಕಂಡೆ ನಾ"

ಎಂಬುದಾಗಿ ನುಡಿದು ತಿರುಪತಿ ತಿಮ್ಮಪ್ಪನ ಚರಣಗಳನ್ನು ಕಂಡು ಆನಂದ ತುಂದಲರಾಗುತ್ತಾರೆ. ಈ ಕೃತಿಯಲ್ಲಿ ವಾದಿರಾಜರು ಭಗವಂತನ ಪುಟ್ಟಪಾದಗಳ ಹಿರಿಮೆ ಸೌಂದರ್ಯವನ್ನು ತನ್ಮಯರಾಗಿ ಬಣ್ಣಿಸಿದ್ದಾರೆ. ಇಲ್ಲಿ ಶಾಂತ ಭಾವವು ಓತಪ್ರೋತವಾಗಿ ಮೂಡಿಬಂದಿದೆ.

ಹರಿದಾಸರೆಲ್ಲರಿಗೂ ಶೇಶಾದ್ರಿವಾಸನಾದ ಶ್ರೀ ತಿರುಮಲೇಶನನ್ನು ಹಾಡಿಹೊಗಳಿದ್ದಾರೆ."ಕಲಿಯುಗದ ಇಷ್ಟ ದೈವವಾದ ತಿರುಪತಿ ವೆಂಕಟರಮಣ ಸ್ವಾಮಿಯನ್ನು ಕಣ್ತುಂಬ ನೋಡಿ, ಮನದನಿಯ ಹಾಡಿ,ಆನಂದ ಪಟ್ಟಿದ್ದಾರೆ."

ಕರ್ನಾಟಕದ ಸಂಗೀತ ಪಿತಾಮಹರೆಂದೆನಿಸಿದ ಪುರಂದರದಾಸರು ತಿರುಪತಿಯ ತಿಮ್ಮಪ್ಪನ ಕುರಿತಾಗಿ ಅನೇಕ ಕೃತಿಗಳನ್ನು ರಚಿಸಿದ್ದಾರೆ.

"ಬಂದು ನಿಂತಿಹನು ನೋಡೆ ಭೂತಳದಿ ವೆಂಕಟ
ಇಂದಿರೆಯೊಡಗೂಡಿ ಒಪ್ಪುವ ನಿರಂತರ
ಪೊಂದಿ ಭಜನೆಯ ಮಾಡಿ ಆನಂದವ ಬೇಡಿ"

ಎಂದು ತಿರುಮಲಾಧೀಶರನ್ನು ಪರಿಚಯಿಸುತ್ತಾರೆ. ಪ್ರತಿ ಶುಕ್ರವಾರಕ್ಕೊಮ್ಮೆ ತೊಡಿಸುವ ಹಾರ ಮುಕುಟಾಭರಣ ಕುಂಡಲಾದಿಗಳಿಂದ ಅಲಂಕೃತನಾಗಿದ್ದ ತಿರುಮಲೇಶನನ್ನು

"ವಾರವಾರಕೆ ಪೂಜೆಗೊಂಬುವ
ಹಾರ ಮುಕುಟಾಭರಣ ಕುಂಡಲ
ಧಾರಿ ಭುಜಕೇಯೂರ ಭೂಷಿತ
ಮಾರಪಿತ ಗುಣ ಮೋಹನಾಂಗ"।

ಎಂಬುವುದಾಗಿ ಗುಣಗಾನ ಮಾಡಿದ್ದಾರೆ. ಭಗವಂತನ ಚಾರುಪೀತಾಂಬರ ಕಟಿ, ಕರವೀರ ಕಲ್ಹಾರಾದಿ ಹೂಗಳಿಂದ ಶೋಭಿಸುವ ಕೊರಳು, ಅವನ ನಗುಮುಖಗಳನ್ನು ಕಣ್ತುಂಬಿ ನೋಡಿ, ತೃಪ್ತಿಯಿಂದ ಬಣ್ಣಿಸಿದ್ದಾರೆ. ಆದಿಮಧ್ಯಾಂತರಹಿತನೂ ಸ್ವಾಮಿ ಪುಷ್ಕರಣೀತೀರನೂ ಆದ ತಿರುಮಲೇಶ, ಬ್ರಹ್ಮೋತ್ಸವದ ವೈಭವಗಳಿಂದ ಮೆರೆಯುತ್ತಿರುವನೆನ್ನುತ್ತಾರೆ. ಅಂದರೆ ಪುರಂದರದಾಸರು ತಿರುಪತಿಯ ಬ್ರಹ್ಮೋತ್ಸವ ಕಾಲದಲ್ಲಿ ತಿಮ್ಮಪ್ಪನ ದರ್ಶನಕ್ಕೆ ಹೋಗಿದ್ದರೆಂದು ಕಾಣುತ್ತದೆ. ತಿರುಮಲೇಶನ ಮೂರ್ತಿಯನ್ನು ಕಂಡ ಅವರ ಸಂತೃಪ್ತಿ ಕೀರ್ತನೆ ರೂಪದಲ್ಲಿ ಹೊರಹೊಮ್ಮಿದೆ.

ಹಾಗೆಯೇ ಶೇಷಾಚಲ ನಿವಾಸನಾದ ಶ್ರೀನಿವಾಸನ ದಾಸನಾಗುವ ತಮ್ಮ ಮನದ ಇಂಗಿತವನ್ನು ಹೊರಹಾಕುತ್ತ

"ದಾಸನ ಮಾಡಿಕೋ ಎನ್ನ
ಸಾಸಿರನಾಮದ ವೆಂಕಟರಮಣ
ದುರಿತರಾಶಿಗಳೆಲ್ಲ ತರಿದು ಸ್ವಾಮಿ
ಪುರಂದರವಿಠಲ ಕರುಣದಿ ಕರೆದು"

ಎಂಬುವುದಾಗಿ ಆ ಭಗವಂತನಲ್ಲಿ ಮೊರೆಯಿಟ್ಟಿದ್ದಾರೆ. ಕನಕದಾಸರು ತಿರುಮಲೇಶನನ್ನು ಮನಸಾರೆಯಾಗಿ ಸ್ಮರಿಸುತ್ತಾ

"ಶೇಷಾಚಲ ಕಾಗಿನೆಲೆಯಾದಿಕೇಶವ
ದಾಸರ ದಾಸರ ದಾಸರ ಮನೆಯ
ಬಂಟನಾಗಿ ಬಾಗಿಲ ಕಾಯ್ವೆ"

ಎಂಬುದಾಗಿ ನುಡಿದಿದ್ದಾರೆ. ಇವರು ತಮ್ಮ ಮತ್ತೊಂದು ಕೃತಿಯಲ್ಲಿ ತಿರುಮಲೇಶನನ್ನು ಕುರಿತು.

"ಸಾಕು ಸಾಕು ಮನುಜ ಸೇವೆಯು
ರಂಗಯ್ಯ ಇನ್ನು ಒಡೆಯ ವೆಂಕಟಾದ್ರಿ ಮಾಧವಾ"

ಎಂಬುವುದಾಗಿ ನುಡಿದಿದ್ದಾರೆ. ಪುರಂದರದಾಸರಂತೆಯೇ ವಿಜಯದಾಸರು ತಿರುಮಲೇಶನನ್ನು

"ಸಾಗಿ ಬಾರಯ್ಯ ನೀನಿ ಗೋವಿಂದ
ವೆಂಕಟ ಸಾಗಿ ಬಾರಯ್ಯ ಭವರೋಗ ವೈದ್ಯನೇ"

ಎಂಬುವುದಾಗಿ ಮನತುಂಬಿ ಕರೆದಿದ್ದಾರೆ ಹಾಗೆಯೇ

"ಬಾ ಬಾ ಭಕುತರ ಹೃದಯ ಮಂದಿರ
ಬಾ ಬಾ ಜಗದೋದ್ಧಾರ
ಬಾ ಬಾನೇಕಾವತಾರ - ಧೀರ"

ಎಂಬುದಾಗಿ ಮತ್ತೊಂದು ಕೃತಿಯಲ್ಲಿ ನಿವೇದಿಸಿದ್ದಾರೆ.

"ನಿನ್ನ ದರುಶನಕೆ ಬಂದವನಲ್ಲವೋ ಮಹಾ
ಪುಣ್ಯವಂತರ ದಿವ್ಯಚರಣವ ನೋಡಲಿ ಬಂದೆ
ಭಳಿಗೆ ತಿರುಮಲಾರಾಯ ನಿನ್ನ ಕರುಣಾರಸಕೆ
ನೆಲೆಗಾಣೆ ನೆಲೆಗಾಣೆ ನೆರೆ ಹೊರೆಯೋಳು
ಒಲಿದು ಭಕುತರಿಗಾಗಿ ಮದುವೆ ಹಮ್ಮಿಕೊಂಡೆ
ಸುಲಭ ದೇವರದೇವ ವಿಜಯ ವಿಠಲವೆಂಕಟಾ"

ಎಂಬುದಾಗಿ ಅನನ್ಯ ಮನಸ್ಸಿನಿಂದ ನುಡಿಯುವ ವಿಜಯದಾಸರ ಈ ಕೀರ್ತನೆಯಲ್ಲಿ 'ನಿಂದಾಸ್ತುತಿಯ ಭಾವ ವ್ಯಕ್ತವಾಗಿದೆ. ವಿಜಯದಾಸರಂತೆ ಅವರ ಶಿಷ್ಯರಾದ ಗೋಪಾಲದಾಸರು ತಿರುಪತಿಯ ಸ್ವಾಮಿಯ ದರ್ಶನ ಮಾಡಿದವರೆ,

"ಬಂದೆ ಬಂದೇ ಸ್ವಾಮಿಯೇ ಬಂದೇ ಬಂದೆ
ಇಂದಿರೇಶ ಶ್ರೀ ವೆಂಕಟ ನಿನ್ನ
ಸಂದರುಶನಕೆ ಸಾಗಿ ನಾನಿಲ್ಲ "

ಎಂದು ಆನಂದಾತಿರೇಕದಿಂದ ಹಾಡಿದ್ದಾರೆ. ಹಾಗೆಯೇ ಶ್ರೀ ಗೋಪಾಲದಾಸರು ಶ್ರೀನಿವಾಸನನ್ನು ಕುರಿತು -

ನಡೆದು ಬಾರಯ್ಯ ನೀನು
ನಡೆದು ಬಾರಯ್ಯ ಭವಕಡಲಿಗೆ ಕುಂಭ ಸಂಭವ
ಸಡಗರದಿಂದಲಿ ಮೆಲ್ಲನಡಿಯನಿಡುತ ಬೇಗ
ಎಡಬಲದಲಿ ನಿನ್ನ ಮಡದೇರಿಂದೊಪ್ಪುತ
ತಡಮಾಡದೆ ಬಾ ಮೃಡಸಖ ವೆಂಕಟ"

ಎಂಬುವುದಾಗಿ ಸ್ತುತಿಸಿ ಹೊಗಳಿದರೆ, ಇದೇ ಪದ್ಯದ ಕೊನೆಯ ಪಂಕ್ತಿಯಲ್ಲಿ -

"ಶರಣಾಗತ ರಕ್ಷಾಮಣ ಎನ್ನುವ
ಬಿರುದು ಬೇಕಾದರೆ ಸರಸರ ಬಾರಯ್ಯ"

ಎಂಬುವುದಾಗಿ ಸಖ್ಯಭಾವವನ್ನು ಮೆರೆದು ಮತ್ತೆ -

"ಗುರುಡಗಮನ ಗೋಪಾಲ ವಿಠ್ಠಲರೇಯ
ಕರುವಿನ ಮೊರೆ ಗಾವು ನೆರೆದಂತೆ ಪೊರೆಯಲು"

ಎಂಬುವುದಾಗಿ ನುಡಿದ್ದಾರೆ. ಪರಮಾತ್ಮನನ್ನು ಹಾಡಿ ಹೊಗಳುವ ಪರಿ ಗೋಪಾಲದಾಸರಲ್ಲಿ ಮೈದಳೆದಿತ್ತು ಎಂಬುವುದು ಗೋಚರವಾಗುತ್ತದೆ.

ಶ್ರೀ ಗೋಪಾಲದಾಸರ ಶಿಷ್ಯರಾದ ಶ್ರೀ ಜಗನ್ನಾಥದಾಸರು ತಿರುಮಲೇಶನ ಅನನ್ಯ ಭಕ್ತರು, ವೆಂಕಟೇಶನ ಮೂರ್ತಿಯನ್ನು ತಮ್ಮ ಮನೋಮಂದಿರದಲ್ಲಿ ಇರಿಸುವ ಕಾತರವುಳ್ಳವರಾಗಿ - "ಬಾ ವೆಂಕಟಶೈಲಾಧಿಪ ಮನ್ಮನಕೆ ತಡಮಾಡುವುದೇನೆ" ಎಂದು ಕರೆಯುತ್ತಾರೆ. ತಮ್ಮನ್ನು ರಕ್ಷಿಸಬೇಕೆಂದು ಬೇಡಿಕೊಳ್ಳುತ್ತ-

"ಶ್ರೀನಿಕೇತನ ಪಾಲಯ ಮಾಂ ಶ್ರೀನಿಕೇತನ
ಪನ್ನಗಾಚಲನಿವಾಸ ಪ್ರಪನ್ನ ವತ್ಸಲ
ಬಿನ್ನಪಕೇಳೋ ಜಗನ್ನಾಥ ವಿಠ್ಠಲ
ಧನ್ಯನ ಮಾಡೋ ಶರಣ್ಯ ಶರಣನ "
ಎಂಬುದಾಗಿ ಪ್ರಾರ್ಥಿಸಿದ್ದಾರೆ.

ಜಗನ್ನಾಥದಾಸರಂತೆಯೇ ಶ್ರೀ ಪ್ರಸನ್ನ ವೆಂಕಟದಾಸರು ಶ್ರೀನಿವಾಸನ ಅನನ್ಯ ಭಕ್ತರು ಹಾಗೂ ಅವರ ಇಷ್ಟದೈವವೇ ವೆಂಕಟರಮಣ ಸ್ವಾಮಿ ಅಂತೆಯೇ ಅವರ ಅಂಕಿತ ಪ್ರಸನ್ನ ವೆಂಕಟ.

"ದೇವದೇವೇಶ ವೆಂಕಟೇಶ
ಶ್ರೀ ವಿಧಾತಾವಂಧ್ಯ ಭೂವೈಕುಂಟೇಶ"

ಎಂಬುದಾಗಿ ಸ್ತುತಿಸಿದ್ದಾರೆ. ಇನ್ನೊಂದು ಕೃತಿಯಲ್ಲಿ -

"ತಪ್ಪುಗಳೆಲ್ಲ ಪರಿಹರಿಸುವ
ನಮ್ಮಪ್ಪನಲ್ಲವೇ ನೀನೂ"

ಎಂದು ಶ್ರೀನಿವಾಸನನ್ನು ಕೊಂಡಾಡಿದ್ದಾರೆ. ಮತ್ತೊಂದು ಕೃತಿಯಲ್ಲಿ -

"ಬಿಡೆನೋ ನಿನ್ನಂಘ್ರಿ ಶ್ರೀನಿವಾಸಾ
ಎನ್ನ ದುಡಿಸಿಕೊಳ್ಳಲೋ ಶ್ರೀನಿವಾಸಾ
ನಿನ್ನುಡಿಯೇಬಿತೆಲ್ಲೋ ಶ್ರೀನಿವಾಸಾ ನನ್ನ
ನಡೆತಪ್ಪು ಕಾಯೋ ಶ್ರೀನಿವಾಸಾ "

ಎಂಬುದಾಗಿ ಅನನ್ಯವಾಗಿ ಸ್ತುತಿಸಿ, ಕೊನೆಯ ಪಂಕ್ತಿಯಲ್ಲಿ -


"ನಿನ್ನವ ನಿನ್ನವ ಶ್ರೀನಿವಾಸಾ ನಾ
ನನ್ಯವನರಿಯೇನು ಶ್ರೀನಿವಾಸಾ ಅಯ್ಯಾ
ಮನ್ನಿಸೋ ತಾಯ್ತಂದೆ
ಶ್ರೀನಿವಾಸಾ ಪ್ರಸನ್ನ ವೆಂಕಟಾದ್ರಿ ಶ್ರೀನಿವಾಸಾ"

ಎಂಬುದಾಗಿ ತಮ್ಮ ಮನಸ್ಸಿನ ಬೇಗುದಿಯನ್ನು ಈ ಕೀರ್ತನೆಯ ಮೂಲಕ ಹೊರತೋರ್ಪಡಿಸಿದ್ದಾರೆ. ಹೀಗೆ ಶ್ರೀಪಾದರಾಜರು, ವಾದಿರಾಜರು, ಪುರಂದರದಾಸರು, ಕನಕದಾಸರು, ಶ್ರೀ ಜಗನ್ನಾಥದಾಸರು, ಪ್ರಸನ್ನ ವೆಂಕಟದಾಸರು ಎಲ್ಲರೂ ಸ್ವತಃ ವೆಂಕಟಾಚಲಪತಿಯ ದರ್ಶನ ಸೌಭಾಗ್ಯವನ್ನು ಪಡೆದವರೆಂಬುದು ಅವರ ಕೃತಿಗಳಿಂದಲೇ ವೇದ್ಯವಾಗುತ್ತದೆ. ಹರಿದಾಸ ಸಾಹಿತ್ಯದ ಮುಖ್ಯ ತತ್ವ ಭಕ್ತಿ 'ಮೂಲ ಸತ್ಯ ಭಗವಂತ ' ಈ ಸತ್ಯದ ಹುಡುಕಾಟ ಭಕ್ತಿಯ ಹಾದಿಯಲ್ಲಿ ಸಾಗಿದೆ. ಭಕ್ತಿಯ ವಿವಿಧಾನುಭವದ ಆಲಿಂಗನದಲ್ಲಿ ಭಕ್ತ - ಭಗವಂತನ ಸೂಕ್ಷ್ಮ ಸಂಬಂಧ ಹತ್ತೆಂಟು ಭಾವ ಭಂಗಿಗಳಲ್ಲಿ ಪ್ರಕಟವಾಗಿವೆ.

ಶ್ರೀನಿವಾಸನು ಹರಿದಾಸರಿಗೆ ಒಡೆಯನಾಗಿ, ಒಡನಾಡಿಯಾಗಿ, ಇನಿಯನಾಗಿ, ತನಯನಾಗಿ ಕಂಡಿದ್ದಾನೆ, ಕಾಡಿದ್ದಾನೆ. ಭಕ್ತಿಯ ಪಂಚ ಭಾವಗಳಲ್ಲಿ ಹರಿದಾಸರು ಹರಿಯನ್ನು ಕಾಡುವ ಬೇಡುವ, ಮೋಹಿಸುವ, ಹೊಗಳುವ , ನಿಂದಿಸುವ, ಚೇಡಿಸುವ, ಅಭಿವ್ಯಕ್ತಿಸುವ ಪರಿ ಅನನ್ಯವಾಗಿ ಮೂಡಿ ಬಂದಿದೆ. ನವವಿಧ ಭಕ್ತಿಯ ಮೂಲಕವು ಹರಿದಾಸರು ಶ್ರೀನಿವಾಸನನ್ನು ಹಾಡಿ ಹೊಗಳಿದ್ದಾರೆ. ಕೆಲವರು ತಮ್ಮನ್ನು ಕಾಪಾಡಬೇಕೆಂದು ಮೊರೆಯಿಟ್ಟರೆ, ಮತ್ತೆ ಕೆಲವರು ಅವನ ದರ್ಶನದಿಂದ ತಮಗಾದ ಅಪಾರವಾದ ಆನಂದವನ್ನು ವ್ಯಕ್ತಪಡಿಸುತ್ತಾರೆ. ತಿರುಪತಿಯ ಬ್ರಹ್ಮೋತ್ಸವ, ರಥೋತ್ಸವ, ಪಲ್ಲಕ್ಕಿ ಉತ್ಸವ, ಶ್ರೀನಿವಾಸ ಕಲ್ಯಾಣ ಇತ್ಯಾದಿಗಳ ಪ್ರಸ್ತಾಪ ಮಾಡಿದ್ದಾರಲ್ಲದೇ ವೆಂಕಟನ ಚರಣ ಕಮಲಗಳಿಗೆ ವಂದಿಸಿ ತಮ್ಮ ಸೇವೆಯನ್ನು ಅರ್ಪಿಸಿದ್ದಾರೆ.

"ಹರಿದಾಸರ ಹೃತ್ಕಮಲ ನಿವಾಸಿಯಾದ ಶ್ರೀನಿವಾಸನು ನಮ್ಮನ್ನೆಲ್ಲ ಪೊರೆಯಲಿ; ಏಳು ಗಿರಿಗಳ ಒಡೆಯನಾದ ಶ್ರೀನಿವಾಸನು ನಮ್ಮ ಮನದ ಇಚ್ಛೆಗಳನ್ನು ಪೂರ್ಣ ಮಾಡಲಿ."





# ತಿರುಮಲೆಯ ಆಲಯ ಮೂರ್ತಿಗಳು

**ಶ್ರೀಮತಿ. ಎಸ್.ವಿ. ಹೇಮಾವತಿ**

ಕೃತೇತು ನರಸಿಂಹೋಽಭೂತ್
ತ್ರೇತಾಯಾಂ ರಘುನಂದನಃ
ದ್ವಾಪರೇ ವಾಸುದೇವಶ್ಚ
ಕಲೌ ವೇಂಕಟನಾಯಕಾಃ

ಕಲಿಯುಗದಲ್ಲಿ ವೆಂಕಟೇಶ್ವರಸ್ವಾಮಿಯ ರೂಪದಲ್ಲಿ ಸರ್ವೇಶ್ವರನನ್ನು ಪೂಜಿಸಲಾಗುತ್ತಿದೆ ಎಂಬುದು ಇಲ್ಲಿನ ಭಾವದ ಅವಧಾರಣೆ. ವೆಂಕಟೇಶ್ವರಸ್ವಾಮಿ ವೆಂಕಟಾಚಲದಲ್ಲಿ ನಿಂತಿರುವುದು ಸರ್ವ ಪ್ರಸಿದ್ಧ. ಆಳ್ವಾರರ ಕಾಲಕ್ಕೆ ದೂರದಿಂದಲೇ ಈ ಸ್ವಾಮಿಯನ್ನು ನೋಡಬಹುದಾಗಿತ್ತು ಎಂದರೆ ಅಲ್ಲಿ ಇಂದು ಕಂಡು ಬರುವಂತೆ ಗರ್ಭಗುಡಿಯಾಗಲೀ, ವಿಮಾನವಾಗಲೀ ಇರಲಿಲ್ಲವೆಂಬುದು ಪದಾರ್ಥವಾದರೂ ಎಲ್ಲಿ ನಿಂತರೂ ನೋಡಬಹುದು, ಕಾಣುವ ಮನಸ್ಸಿದ್ದಲ್ಲಿ ಎಂಬ ಧ್ವನ್ಯರ್ಥವೂ ಆಗುತ್ತದೆ. ತೊಂಡಮಾನನ ಕಾಲದಲ್ಲಿಯೇ ಇಲ್ಲೊಂದು ಆಲಯ ನಿರ್ಮಾಣವಾಯಿತೆಂಬುದು ಪುರಾಣ ಪ್ರಸಿದ್ಧವಾಗಿದೆ. ದೂರದಲ್ಲೊಂದು ಮಂಟಪದಲ್ಲಿ ನಿಂತಿದ್ದಾನೆ ಎಂಬುದು ಆಳ್ವಾರರ ಮಾತು. ಬಾಗಿಲ ಹೊಸ್ತಿಲ ಮೆಟ್ಟಿಲಾಗಿ ನಿನ್ನ ಮುಖವನ್ನು ಸದಾ ನೋಡುತ್ತಿರುವ ಆಸೆ ಎನ್ನುವ ಕುಲಶೇಖರ ಆಳ್ವಾರರ ಮಾತಿನಿಂದ ಇಲ್ಲೊಂದು ಗರ್ಭಗುಡಿ ಇದೆ ಎಂಬುದು ಧ್ವನಿತವಾಗುತ್ತದೆ. ನಂತರದ ಇತಿಹಾಸದ ಕಾಲದಲ್ಲಿ ಆಲಯದ ಕಟ್ಟಡ ನಿರ್ಮಾಣಗಳು, ಗೋಪುರದ ಕಲಶ ಸ್ಥಾಪನೆ ಬಂಗಾರದ ಮುಲಾಮೀಕರಣ ಮೊದಲಾದುವೆಲ್ಲಾ ಶಾಸನೋಕ್ತವಾಗಿ ದಾಖಲೆಗಳಾಗಿವೆ. ಹಾಗಾಗಿ ಎಲ್ಲ ಕಡೆ ಇರುವ ಸ್ವಾಮಿಗೆ ಗರ್ಭಗುಡಿ ಎಂಬ ಒಂದು ಆವರಣವನ್ನು ಕಲ್ಪಿಸಿರುವುದು ಸ್ಪಷ್ಟವಾಗಿದೆ. ಈ ಗರ್ಭಗುಡಿಯ ಆವರಣದಲ್ಲಿ ವೆಂಕಟೇಶ್ವರಸ್ವಾಮಿ ಅಲ್ಲದೆ ಸೀತಾರಾಮಲಕ್ಷ್ಮಣ ಆಂಜನೇಯ ಕೃಷ್ಣರುಕ್ಮಿಣಿ ವಿಗ್ರಹಗಳು ಮೊದಲಾದುವೆಲ್ಲಾ ಶಾಸನೋಕ್ತವಾಗಿ ದಾಖಲೆಗಳಾಗಿವೆ. ಜೊತೆಗೆ ಇಲ್ಲಿ ಇತರ ನಾಲ್ಕು ವೆಂಕಟೇಶ್ವರ ಸ್ವಾಮಿಯ ವಿಗ್ರಹಗಲೂ ಇವೆ ಎಂದರೆ ಒಟ್ಟು ಐದು ಮೂರ್ತಿಗಳ - ಪಂಚಬೇರ ಗರ್ಭಗುಡಿಯಿದು.

ವೈಖಾನಸ ಆಗಮ ಶಾಸ್ತ್ರದಂತೆ ಏಕಬೇರ ಮೂರ್ತಿ ಆಲಯದಲ್ಲಿ ಪಂಚಬೇರಗಳಿರುವುದು ಸಹಜ. ಅವುಗಳೆಂದರೆ ಕೌತುಕ, ಸ್ನಪನ, ಉತ್ಸವ, ಬಲಿ ಮೂರ್ತಿಗಳು - ಧ್ರುವಬೇರದೊಂದಿಗೆ ಇರಬೇಕು. ವೆಂಕಟೇಶ್ವರಸ್ವಾಮಿ ಆಲಯದಲ್ಲಿ ಕೌತುಕ ಸ್ನಪನಬೇರಗಳು ಒಂದಾಗಿ ಬಲಿಬೇರವು ಓಲಗ ಮೂರ್ತಿಯಾಗಿ ಉತ್ಸವ ಬೇರವು ಮಲೆಯಪ್ಪ, ಉಗ್ರ ಶ್ರೀನಿವಾಸರಾಗಿ ಒಟ್ಟು ಐದು ಆಗಿದೆ.

**ಮೂಲದೇವರು :**

ಶ್ರೀವೆಂಕಟೇಶ್ವರಸ್ವಾಮಿ ಸ್ವಯಂಭು ಆಗಿ ಇಲ್ಲಿ ನೆಲೆಸಿರುವುದು ಪುರಾಣ ಪ್ರಸಿದ್ಧವಾಗಿದೆ. ಕಪ್ಪು ಬಣ್ಣದ ಸುಮಾರು 10 ಅಡಿ ಎತ್ತರದ ನಿಂತ ನಿಲುವಿನ ಭಂಗಿಯ ನಾಲ್ಕು ಕೈಗಳ ಮುಗುಳ್ನಗೆಯ ಮುಖದ ಪುರಾಣ ಪುರುಷ ಈತ. ಹಣೆಯಲ್ಲಿ ಕಸ್ತೂರಿ ತಿಲಕವೂ ಪಚ್ಚಕರ್ಪೂರದ ಬಿಳಿನಾಮವೂ ಉಂಟು. ಮೇಲಿನ ಎರಡು ಕೈಗಳಿಗೆ ಶಂಖ ಚಕ್ರಗಳನ್ನು ರಾಮಾನುಜರು ತೊಡಿಸಿದರೆಂದು ಹೇಳಲಾಗಿದೆ. ಪುರಾಣಗಳ ಹೇಳಿಕೆಯಂತೆ ಚಕ್ರವರ್ತಿಗೆ ಯುದ್ಧದಲ್ಲಿ ನೆರವೀಯಲೆಂದು ಶಂಖ ಚಕ್ರಗಳನ್ನು ನೀಡಿದ ಶ್ರೀನಿವಾಸನು ಮೇಲಿನ ಎರಡೂ ಕೈಗಳನ್ನು ಬರಿದು ಮಾಡಿಕೊಂಡು ನಿಂತ. ಬರಿಗೈಗಳನ್ನು ರಾಮಾನುಜರು ಶಂಖ ಚಕ್ರಗಳಿಂದ ತುಂಬಿಸಿದರು. ಎಡಕೆಳಗೈ ಕಟಿಹಸ್ತವಾಗಿಯೂ ಬಲದ ಕೆಳಗೈ ವರದ ಹಸ್ತವಾಗಿಯೂ ಕಂಡುಬರುವುದು. ಎದೆಯಲ್ಲಿ ಶ್ರೀವತ್ಸ ಚಿಹ್ನೆಯೂ ಪದ್ಮಾವತಿ ದೇವಿಯೂ ಉಂಟು. ಹಾಗಾಗಿ ಶುಕ್ರವಾರಾಭಿಷೇಕವೆಂದೇ ಪ್ರಸಿದ್ಧಿ. ಆಲಯದಲ್ಲಿ ನಡೆಯುವ ಎಲ್ಲ ಹರಿದಾಸರೂ ಹಾಡಿಹೊಗಳಿದ್ದಾರೆ. ಸಾಕ್ಷಾತ್ ಮನ್ಮಥ - ಮನ್ಮಥ ಎಂಬುದು ಸುಪ್ರಭಾತದಲ್ಲಿ ಬರುವ ಮಾತು. ಮನ್ಮಥನ ತಂದೆಯೇ ಆಗಿರುವಾಗ ಇನ್ನು ಹೇಗೆ ತಾನೇ ಇರಲು ಸಾಧ್ಯ. ಇವನನ್ನು ನೋಡಲೆಂದೇ ದೂರದ ಊರುಗಳಿಂದ ಜನ ಬರುವುದು. ಎಲ್ಲ ಊರಿನಲ್ಲೂ ವೆಂಕಟೇಶ್ವರಸ್ವಾಮಿ ಇದ್ದರೂ ತಿರುಮಲೆಗೆ ಬರಲು ತವಕದಿಂದ ಸಿದ್ಧತೆಯನ್ನು ನಡೆಸಿಕೊಂಡು ಬರುವುದು, ಸ್ವಾಮಿಯ ದರ್ಶನದ ಕನಸು ಕಾಣುವುದು - ಎಲ್ಲ ದೇವರಿಗಾಗಿಯೇ.









ಆಳ್ವಾರರು ಹೇಳುವಂತೆ ಈ ದೇವರ ದರ್ಶನದ, ಅವಕಾಶ, ಸೇವಾ ಅವಕಾಶ ದೊರೆತಲ್ಲಿ ಮೋಕ್ಷವನ್ನೂ ತೃಣೀಕರಿಸಬಹುದು.

ತಿರುಮಲೆಗೆ ಬಂದು ಆಲಯವನ್ನು ಒಳಹೊಕ್ಕಾಗ ಬಂಗಾರದ ಬಾಗಿಲಿನಿಂದ ದೂರಕ್ಕೂ ಎದ್ದು ಕಾಣುವ ವಿಗ್ರಹ ಶ್ರೀವೆಂಕಟೇಶ್ವರಸ್ವಾಮಿಯದು. ಸೂಜಿಗಲ್ಲಿನತ್ತ ಆಕರ್ಷಿತವಾಗುವ ಕಬ್ಬಿಣದ ಧೂಳಿನಂತೆ ಜನ ಸ್ವಾಮಿಯನ್ನು ಹತ್ತಿರದಿಂದ ನೋಡಲು ಎಷ್ಟು ದೂರದಿಂದಲಾದರೂ ಬರುತ್ತಾರೆ. ಈ ಸ್ವಾಮಿಯನ್ನು ಎಷ್ಟು ಕಣ್ತುಂಬಿಸಿಕೊಂಡರೂ ತೃಪ್ತಿ ಇರದು. ಹಾಗಾಗಿ ಮತ್ತೆ ಮತ್ತೆ ಸ್ವಾಮಿಯನ್ನು ನೋಡುವುದೇ ಒಂದು ಸೇವೆಯಾಗಿ ಜನ ಬರುತ್ತಾರೆ. ಇಲ್ಲಿ ಆಸೆ ಆಕಾಂಕ್ಷೆಗಳು, ಹರಕೆ ಫಲಗಳೂ - ಎಲ್ಲ ನಗಣ್ಯ. ಲಾಭನಷ್ಟಗಳ ಬೇರೀಜು ಬೇರೆ ಕಡೆ ಎಷ್ಟು ಬೇಕಾದರೂ ಇದ್ದೀತು. ಇಲ್ಲಿ ಮಾತ್ರ ಸ್ವಾಮಿಯ ದರ್ಶನವೇ ಲಾಭ. ಅದೇ ಪುರುಷಾರ್ಥ.

## ಭೋಗ ಶ್ರೀನಿವಾಸ :

ಇದೊಂದು ಸ್ವಾಮಿಯ ಬೆಳ್ಳಿ ಪ್ರತಿಮೂರ್ತಿ. ಕ್ರಿ.ಶ. 1963ರಲ್ಲಿ ಉತ್ಸವಗಳಲ್ಲಿ ಹೊರಕ್ಕೆ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಲು ಕಾಡವನ್ ಪೆರುನ್ ದೇವಿ ಸಾಮವೈರಾಣಿ ಈ ವಿಗ್ರಹವನ್ನು ಮಾಡಿಸಿ ಆಲಯಕ್ಕೆ ಕೊಟ್ಟಿದ್ದು ಶಾಸನೋಕ್ತವಾಗಿದೆ. ಈ ವಿಗ್ರಹವನ್ನು ಇಡಲು ಗರ್ಭಗುಡಿಯ ಎದುರು ಒಂದು ಇಳಂ ಕೋಯಿಲ್ ಸಣ್ಣಮಂಟಪವನ್ನು ಮಾಡಿದರೆಂದು ಹೇಳಲಾಗಿದೆ. ಸಾಯಣ ಮಂಟಪ ಇದೇ ಆಗಿರಬೇಕು.ನಂತರ ಎಂದೋ ಈ ವಿಗ್ರಹ ಗರ್ಭಗುಡಿಯನ್ನು ಸೇರಿರಬೇಕು. ಕೌತುಕ ಮೂರ್ತಿ ಎಂದು ಕರೆಯಲಾಗುವ ಈ ವಿಗ್ರಹ ಮೂಲದೇವರೊಡನೆ ಒಂದು ಬಂಗಾರದ ದಾರದಿಂದ ಸಂಬಂಧಿಸಲ್ಪಟ್ಟಿದೆ.ಇದು ಗರ್ಭಗುಡಿಯಿಂದ ತಿರುವಿಳಂಕೋಯಿಲ್‌ನ ಹೊರ ಬಾಗಿಲಿನವರೆಗೆ ಎಂದರೆ ಬಂಗಾರದ ಬಾಗಿಲಿನವರೆಗೆ ಬರುವಷ್ಟು ಉದ್ದವಿದೆ. ಕೌತುಕ ಬೇರವನ್ನು ಭೋಗ ಶ್ರೀನಿವಾಸ ಎಂದೂ ಹೇಳುತ್ತಾರೆ. ಇದಕ್ಕೆ ದಿನವೂ ಬೆಳಗ್ಗೆ ಸ್ನಪನವಾಗಿ ಸಂಜೆ ಸ್ನಪನ ಮಂಟಪದಲ್ಲಿ ಬಂಗಾರದ ಉಯ್ಯಾಲೆಯಲ್ಲಿ ಮಲಗಿಸಿ ಬೆಳಗ್ಗೆ ಎಬ್ಬಿಸಿ ಸುಪ್ರಭಾತ ಹಾಡಿ ಗರ್ಭಗುಡಿಗೆ ಪುನಃ ಸೇರಿಸುತ್ತಾರೆ. ಸಾಮವೈ ಹೇಳುವಂತೆ ಪುರಟ್ಟಾಸಿ ತಿಂಗಳಿನಲ್ಲಿ 9 ದಿನಗಳ ಉತ್ಸವದಲ್ಲಿ ಎಂದರೆ ಬ್ರಹ್ಮೋತ್ಸವದಲ್ಲಿ ದಿನಕ್ಕೆ ಎರಡು ಬಾರಿ ಮೆರವಣಿಗೆ ಮಾಡಲು ಈ ವಿಗ್ರಹವನ್ನು ಬಳುಸುತ್ತಿದ್ದಿರಬೇಕು. ಈಗ ಮಾತ್ರ ಸ್ನಾನ ಏಕಾಂತಸೇವೆಗಳಲ್ಲಿ ಬಳಸಲಾಗುತ್ತದೆ. ಏಕಾಂತ ಸೇವೆಯಲ್ಲಿ ಬಂಗಾರದ ತೊಟ್ಟಿಲಿನಲ್ಲಿ ಮಲಗಿದ ಸ್ವಾಮಿಗೆ ತಾಳ್ಳಪಾಕ ವಂಶದವರ ಸೇವೆಯಾಗಿ ಜೋಗುಳವನ್ನು ಹಾಡಲಾಗುತ್ತದೆ. (ಧನುರ್ಮಾಸದಲ್ಲಿ ಮಾತ್ರ ಏಕಾಂತ ಸೇವೆಯು ಗರ್ಭಗುಡಿಯಲ್ಲಿರುವ ಕೃಷ್ಣಾಸ್ವಾಮಿಗೆ ನಡೆಯುತ್ತದೆ.)

ಭೋಗ ಶ್ರೀನಿವಾಸನ ಬೆಳ್ಳಿಯ ಮೂರ್ತಿಯನ್ನು ಮೂಲಬೇರದ ಕಾಲ ಬಳಿ ಇರುವುದನ್ನು ಕಾಣಬಹುದು. ಮೂಲ ಮೂರ್ತಿಯ ಪ್ರತಿ ಚಿತ್ರವೇ ಆದರೂ ಭೋಗ ಶ್ರೀನಿವಾಸನ ಕೈಯ್ಯಲ್ಲಿರುವ ಚಕ್ರ ಶಂಖಗಳು ಸ್ವಲ್ಪ ತಿರುಗಿದಂತೆ ಕಾಣುತ್ತದೆ ಎಂದರೆ ಇಲ್ಲಿನ ಚಕ್ರ ಪ್ರಯೋಗದ ರೂಪದಲ್ಲಿ ಚಕ್ರದ ಅಲಗು ಮೊನೆಯಾಗಿ ಕಾಣುವುದನ್ನು 'ತಿರುಪತಿ ತಿಮ್ಮಪ್ಪ' ಪುಸ್ತಕದಲ್ಲಿ ಪ್ರಾಚಾರ್ಯ ಎಸ್. ಕೆ. ರಾಮಚಂದ್ರರಾಯರು ಗುರುತಿಸಿದ್ದಾರೆ. ಇಲ್ಲಿನ ಭೋಗ ಶ್ರೀನಿವಾಸನ ಕಾಲ ಕೆಳಗೆ ಷಾಡ್ಗುಣ್ಯ ಯಂತ್ರ ಇರಬೇಕೆಂದು ಹೇಳಲಾಗಿದೆ.

## ಓಲಗ ಶ್ರೀನಿವಾಸ :

ಬಲಿಬೇರ ಎಂತಲೂ ಈ ಮೂರ್ತಿಗೆ ಹೆಸರು ಉಂಟು. ಸ್ವಾಮಿಗೆ ನೈವೇದ್ಯವನ್ನು ನೀಡಿದ ನಂತರ ಪರಿವಾರ ದೇವತೆಗಳಿಗೆ ದಿಗ್ದೇವತೆಗಳಿಗೆ ಬಲಿಯನ್ನು ನೀಡಲು ಹೊರಕ್ಕೆ ಬರುವುದುಂಟು. ಆದರೆ ಇಲ್ಲಿನ ಬಲಿಬೇರ ತಿರುಮಾಮಣಿ ಮಂಟಪದಿಂದ ಹೊರಕ್ಕೆ ಬರುವುದೇ ಇಲ್ಲ. ತಿರುಮಾಮಣಿ ಮಂಟಪದಲ್ಲಿ ದಿನವೂ ಸ್ವಾಮಿಯ ಓಲಗ ನಡೆಯುತ್ತದೆ. ಬೆಳಗಿನ ಅರ್ಚನೆ ತೋಮಾಲೆ ಸೇವೆಗಳು ಮೂಲವರರಿಗೆ ನಡೆದ ನಂತರ ತಿರುಮಾಮಣಿ ಮಂಟಪದಲ್ಲಿ ದಿನವೂ ಆ ಸ್ವಾಮಿಯ ಓಲಗ ನಡೆಯುತ್ತದೆ. ಬೆಳಗಿನ ಅರ್ಚನೆ ತೋಮಾಲೆ ಸೇವೆಗಳು ಮೂಲವರರಿಗೆ ನಡೆದ ನಂತರ ತಿರುಮಾಮಣಿ ಮಂಟಪದಲ್ಲಿ ಚಿನ್ನದ ಸಿಂಹಾಸನದಲ್ಲಿ ಕೊಲುವು ಶ್ರೀನಿವಾಸನನ್ನು ಆಸೀನಗೊಳಿಸಿ ದರ್ಬಾರು, ರಾಜಸಭೆ ನಡೆಯುತ್ತದೆ. ಅಲ್ಲಿ ಚಿನ್ನದ ಕೊಡೆ ಬೆಳ್ಗೊಡೆಗಳ ವೈಭವದಲ್ಲಿ ಓಲಗ. ಶ್ರೀನಿವಾಸನಿಗೆ ಆ ದಿನ ಪಂಚಾಂಗವನ್ನು ವಿವರಿಸಿ ಹಿಂದಿನ ದಿನದ ಆದಾಯ ವೆಚ್ಚಗಳನ್ನು ನಿವೇದಿಸಿ ಆ ದಿನ ಸೇವಾದಾರರನ್ನು ಗೋತ್ರ ನಾಮಗಳಿಂದ ಪರಿಚಯಿಸಿ ಆ ದಿನದ ವಿವಿಧ ನಿವೇದನೆಗಳಿಗೆ ಬೇಕಾಗುವ ದಿತ್ತ ( ಪ್ರಸಾದ ತಯಾರಿಕೆಯ ವಸ್ತುಗಳ ವಿವರ) ವನ್ನು ಸ್ವಾಮಿಗೆ ಅರಿಕೆ ಮಾಡಿಕೊಳ್ಳಲಾಗುತ್ತದೆ. ಒಂದು ರೀತಿಯಲ್ಲಿ ಈ ಸ್ವಾಮಿ ಆಲಯದ ಉಸ್ತುವಾರಿಯ - ನಡಾವಳಿಯ ಮೇಲೆ ಅಧಿಕಾರವನ್ನು ಹೊಂದಿರುವಂತೆ ಭಾವಿಸಬಹುದು.

ತಿರುಮಲೆ ಜನರಿಗೆ ಸುಲಭಗಮ್ಯವಾಗದೆ ತಿರುಚಾನೂರು ಸ್ವಾಮಿಯ ಪ್ರತಿನಿಧಿ ಸ್ಥಳವಾಗಿದ್ದ ಕಾಲದಲ್ಲಿ ಅಲ್ಲಿ ರಾಮಾನುಜ ವಾರ್ತೆಯನ್ನು ವಿಸ್ತರಿಸಲು, ವಿಶಿಷ್ಟಾದ್ವೈತ ತತ್ವವನ್ನು ಪ್ರಸಾರ ಮಾಡಲು, ಶ್ರೀವೈಷ್ಣವ ದೀಕ್ಷೆ ನೀಡಲು ತಿರುಮಂತ್ರ ಸಾಲೆಯೊಂದು ಇದ್ದಿತೆಂಬುದು ಶಾಸನೋಕ್ತವಾಗಿದೆ. ತಿರುಚಾನೂರು ಪ್ರಾಧಾನ್ಯವನ್ನು ಕಳೆದುಕೊಂಡ ನಂತರ ಅಲ್ಲಿನ ವಿಗ್ರಹವನ್ನು ತಂದು ವೆಂಕಟೇಶ್ವರ ಸ್ವಾಮಿಯ ಆಲಯಕ್ಕೆ ಸೇರಿಸಿರಬೇಕೆಂಬ ಅಭಿಪ್ರಾಯವನ್ನು ಆಲಯ ಪ್ರಧಾನ ಪುರುಷರಾಗಿದ್ದ (ಅಂದಿನ) ಟಿ.ಕೆ.ಟಿ. ರಾಘವಾಚಾರ್ಯರು ತಿಳಿಸಿದ್ದಾರೆ.



**ಉಗ್ರಶ್ರೀನಿವಾಸ :**

ಉಗ್ರಶ್ರೀನಿವಾಸ ಉತ್ಸವ ಮೂರ್ತಿಯಾಗಿ ಒಂದು ಕಾಲದಲ್ಲಿ ಆಲಯದಿಂದ ಹೊರಕ್ಕೆ ಮೆರವಣಿಗೆಯಲ್ಲಿ ಇಬ್ಬರು ನಾಯಕಿಯರ (ಶ್ರೀದೇವಿ ಭೂದೇವಿ) ಜೊತೆಗೆ ಬರುತ್ತಿದ್ದಂತೆ ಹೇಳಿಕೆ ಉಂಟು. ಈ ಉತ್ಸವ ಮೂರ್ತಿಯ ಮೆರವಣಿಗೆ ಒಮ್ಮೆ ನಡೆಯುತ್ತಿದ್ದಾಗ ಬೆಂಕಿ ಅನಾಹುತವಾಗಿ ಇದನ್ನು ಸೂರ್ಯನ ಬೆಳಕಿಗೆ ಹೊರಕ್ಕೆ ತರಬಾರದೆಂದು ನಿರ್ಣಯವಾಯಿತು. ಈ ಬೆಂಕಿ ಅನಾಹುತ ನಡೆದುದು ಕ್ರಿ.ಶ . 1330 ರ ಹೊತ್ತಿಗೆ ಎನ್ನುವರು.



ಗರ್ಭಗುಡಿಯಲ್ಲಿ ಇರುವ ಒಂದೂವರೆ ಅಡಿ ಎತ್ತರದ ಈ ಮೂರ್ತಿಗೆ ಎಡ ಬಲಗಡೆಯಲ್ಲಿ ಶ್ರೀದೇವಿ ಭೂದೇವಿಯರು ಇದ್ದಾರೆ. ಮೂಲ ಮೂರ್ತಿಯ ಪ್ರತಿ ಮೂರ್ತಿಯಾಗಿರುವ ಉಗ್ರಶ್ರೀನಿವಾಸ 1330ರ ನಂತರ ರಾತ್ರಿಯ ಹೊತ್ತು ಮಾತ್ರವೇ ಹೊರಬರುವಂತಾಯಿತು. ಕಾರ್ತೀಕ ಮಾಸದ ಉತ್ಥಾನದ್ವಾದಶಿಯಂದು ರಾತ್ರಿ ಮೆರವಣಿಗೆಯಲ್ಲಿ ತಿರುಮಲೆಯ ತೇರು ಬೀದಿಗಳಲ್ಲಿ ನಡೆದು ಸೂರ್ಯ ಹುಟ್ಟುವ ಮೊದಲೇ ಗರ್ಭಗುಡಿಯನ್ನು ಸೇರುತ್ತದೆ. ಈ ವಿಗ್ರಹವನ್ನು ಮುಕ್ಕೋಟಿ ದ್ವಾದಶಿ, ಉತ್ಥಾನದ್ವಾದಶಿ ಮತ್ತು ದ್ವಾದಶ ಆರಾಧನೆಗಳಲ್ಲಿ ಮಾತ್ರವೇ ಈಗ ಬಳಸುತ್ತಾರೆ.

**ಉತ್ಸವ ಶ್ರೀನಿವಾಸ ( ಮಲೆಯಪ್ಪಸ್ವಾಮಿ) :**

ಈಗ ಎಲ್ಲ ಉತ್ಸವಗಳಲ್ಲಿ ಗುಡಿಯಾಚೆಗೆ ಬಂದು ತೇರುಬೀದಿಯಲ್ಲಿ ತಿರುಗಾಡುವ, ಗುಡಿಯೊಳಗೆ ದಿನವೂ ಕಲ್ಯಾಣೋತ್ಸವದಲ್ಲಿ ಭಾಗವಹಿಸಿ ನಂತರ ಡೋಲೋತ್ಸವ, ಬ್ರಹ್ಮೋತ್ಸವಗಳಲ್ಲಿಯೂ ಸಾಯಂಕಾಲ ಸಹಸ್ರ ದೀಪಾಲಂಕಾರ ಸೇವೆಯಲ್ಲಿಯೂ ಸೇವೆಯನ್ನು ಪಡೆಯುವ ಪಂಚಲೋಹ ವಿಗ್ರಹ. ಮೂರಡಿ ಎತ್ತರದ ಈ ವಿಗ್ರಹ ಉಗ್ರ ಶ್ರೀನಿವಾಸನ ವಿಗ್ರಹಕ್ಕಿಂತ ಸ್ವಲ್ಪ ಎತ್ತರವಿದ್ದು ದೂರಕ್ಕೂ ಎದ್ದು ಕಾಣುವುದು. ತಿರುಮಲೆಯ ಆಲಯದ ವರದರಾಜಸ್ವಾಮಿ ಗುಡಿಯ ಉತ್ತರದ ಗೋಡೆಯ ಮೇಲೆ ಎಂದರೆ ಬೆಳ್ಳಿಯ ಬಾಗಿಲನ್ನು ದಾಟಿ ಯಾತ್ರಿಕರು ಒಳಹೊಕ್ಕಾಗ ಎಡಕ್ಕೆ ತಿರುಗುವ ಸ್ಥಳದಲ್ಲಿ ಗೋಡೆಯ ಮೇಲೆ ಒಂದೂ ಶಾಸನ ಇದೆ. 1339 ರಲ್ಲಿ ತ್ರಿಭುವನ ಚಕ್ರವರ್ತಿ ಶ್ರೀರಂಗನಾಥ ಯಾದವರಾಯನ ಕಾಲದ ಶಾಸನ. ಶ್ರೀ ಭೂದೇವಿಯರೊಡನೆ ಇರುವ ಮಲೆಯಪ್ಪ ಸ್ವಾಮಿಯ ( ಮಲೈಕುನಿಯ ನಿನ್ರ ಪೆರುಮಾಳ್) ಉಲ್ಲೇಖ ಪ್ರಥಮ ಬಾರಿಗೆ ಈ ಶಾಸನದಲ್ಲಿ ಕಂಡು ಬರುತ್ತದೆ. ಈ ವಿಗ್ರಹಗಳು ತಿರುಚಾನೂರಿನ ತಿರುವಿಳಂಕೋಯಿಲಿನಲ್ಲಿದ್ದ ಮೂರ್ತಿಗಳೆಂದೂ, ಅವುಗಳನ್ನೇ ಬೆಟ್ಟದ ಒಂದು ಕೊರಕಲಿನಲ್ಲಿ ಕಂಡು ಕೊಳ್ಳಲಾಯಿತೆಂದೂ ವೀರರಾಘವಾಚಾರ್ಯ ಅವರು ಅಭಿಪ್ರಾಯ ಪಟ್ಟಿದ್ದಾರೆ. ಉಗ್ರಶ್ರೀನಿವಾಸನ ಬದಲಿಗೆ ಉತ್ಸವಗಳಲ್ಲಿ ಈ ಮೂರ್ತಿ ಭಾಗವಹಿಸಲು ಆರಂಭವಾಯಿತು. ಬ್ರಹ್ಮೋತ್ಸವದಲ್ಲಿನ ಗರುಡ ಸೇವೆಯಂದು ಮೂಲದೇವರಿಗೆ ಅಲಂಕಾರವಾಗುವ ಲಕ್ಷ್ಮೀಹಾರ, ಕಾಸಿನಹಾರ ಮೊದಲಾದ ಅನರ್ಘ್ಯ ಆಭರಣಗಳು ಈ ದೇವರಿಗೆ ಅಲಂಕಾರವಾಗುತ್ತವೆ. ಹಾಗಾಗಿ ತಿರುಮಲೆಯಲ್ಲಿ ಮೊದಲ ದೈವ ಮೂಲ ವೆಂಕಟೇಶ್ವರ ಸ್ವಾಮಿಯಾದರೆ ಎರಡನೆಯ ಪ್ರಾಧಾನ್ಯ, ಮೂಲ ಸ್ವಾಮಿಯ ಪ್ರತಿನಿಧಿಯಾದ ಪ್ರತಿರೂಪವಾದ ಉತ್ಸವ ಮೂರ್ತಿ ಮಲೆಯಪ್ಪನದು.



ಮೂಲವರನ್ನು ತಿರುವೆಂಗಡ ಮುಡೈಯಾನ್ ಎಂದೂ ಭೋಗ ಶ್ರೀನಿವಾಸನನ್ನು ಮಣವಾಳ ಪೆರುಮಾಳ್ ಎಂದೂ, ಕೊಲುವು ಶ್ರೀನಿವಾಸನನ್ನು ಅಳಗಪ್ಪಿರನಾರ್ ಎಂದೂ ಉಗ್ರ ಶ್ರೀನಿವಾಸನನ್ನು ವೆಂಕಟತ್ತುರೈವಾರ್ ಎಂದೂ ಕರೆಯಲಾಗುತ್ತದೆ. ಉತ್ಸವ ಮೂರ್ತಿಯನ್ನು ಅಥವಾ ಮಲೆಯಪ್ಪಸ್ವಾಮಿ ಎಂದು ಕರೆಯಲಾಗುತ್ತದೆ.

ಹೀಗೆ ಐದು ವಿಧದ ಏಕರೂಪದ ಮೂರ್ತಿಗಳುಳ್ಳ ವೆಂಕಟೇಶ್ವರ ಸ್ವಾಮಿಯ ಗುಡಿಯನ್ನು ಕೋಯಿಲ್ ಆಳ್ವಾರ್ ಎಂದು ಕರೆಯುವುದು ಸಹಜವೇ ಆಗಿದೆ. ಅದೊಂದು ಭಕ್ತಿ ಮಡು, ಭಕ್ತಿ ಸಾಗರ.





# ದಾಸಕೇಂದ್ರ "ತಿರುಪತಿ"

-ಡಾ|| ವಾಸುದೇವ ಅಗ್ನಿಹೋತ್ರಿ

ದಾಸ ಸಾಹಿತ್ಯವು ಕನ್ನಡ ಸಾಹಿತ್ಯದ ತವನಿಧಿ ಇದು ಕನ್ನಡ ಪೌರಾಣಿಕ ಸಂಪತ್ತು, ವೇದಾಗಮೋಪನಿಷತ್ತುಗಳು, ಪ್ರವಚನತ್ರಯಗಳು ಮತ್ತು ಪ್ರಸ್ಥಾನತ್ರಯಗಳನ್ನು ಕನ್ನಡದಲ್ಲಿ ತಿಳಿಯಬೇಕಾದರೆ ದಾಸಸಾಹಿತ್ಯದ ಅಧ್ಯಯನ ಶ್ರವಣ, ಮನನ ನಿಧಿ ಧ್ಯಾಸನವು ಅಗತ್ಯ ಮತ್ತು ಅನಿವಾರ್ಯ, ಶ್ರೀ ಪಾದರಾಜರಿಂದ ಹಿಡಿದು ಗುರುಗೋವಿಂದ ಧ್ಯಾಸನವು ಅಗತ್ಯಮತ್ತು ಅನಿವಾರ್ಯ. ಶ್ರೀ ಪಾದರಾಜರಿಂದ ಹಿಡಿದು ಗುರುಗೋವಿಂದ ವಿಠಲದವರಿಗೆ ಸುಮಾರು ೩೦೦ ಕ್ಕೂ ಹೆಚ್ಚು ಜನ ಹರಿದಾಸರು ಕನ್ನಡದಲ್ಲಿ ಕೀರ್ತನೆ ಸುಳಾದಿ, ಉಗಾ ಭೋಗಗಳನ್ನು ಬರೆದರು. ಅಷ್ಟೇ ಅಲ್ಲದೇ ಆಸೇತು ಹಿಮಾಚಲ ಪರ್ಯಂತ ಯಾತ್ರೆ ಮಾಡಿದರು. ಅದರಲ್ಲೂ ತಿರುಪತಿ, ಪಂಢರಪುರ, ಉಡುಪಿಗಳು, ಕರ್ನಾಟಕದ ಈ ವೈಷ್ಣವ ಭಕ್ತಿ ಪಂಥದ "Charging Centre" ಈ ಮೂರು ಇಂದು ಬೇರೆ ಬೇರೆ ರಾಜ್ಯಗಳಲ್ಲಿವೆಯಾದರೂ ಅಂದು ಭಕ್ತಿಯ ಏಕಸೂತ್ರ ದಲ್ಲಿದ್ದವು. ಜೊತೆಯಲ್ಲಿ ಕರ್ನಾಟಕದ ತೊರವೆ, ಕಾಗಿನೆಲೆ, ಮೋತಕಪಲ್ಲಿ, ಹಂಪಿ ಹಾಗೂ ಇಂದು ಹೊರ ರಾಜ್ಯಗಳಲ್ಲಿರುವ ಪುರಿ, ಬದರಿ, ದ್ವಾರಕಾ ಹೀಗೆ ನೂರಾರು ಕ್ಷೇತ್ರಗಳನ್ನು ಹಾಗೂ ಕ್ಷೇತ್ರದೇವತೆಗಳನ್ನು ಭಕ್ತಿಯಿಂದ ಪ್ರಾರ್ಥಿಸಿದ್ದಾರೆ. ಹೊಗಳಿ ಕೊಂಡಾಡಿದ್ದಾರೆ. ಶ್ರೀ ವಿಜಯದಾಸರಂತೂ ತೀರ್ಥ ಕ್ಷೇತ್ರ ಸುಳಾದಿಗಳಲ್ಲಿ ಎಲ್ಲವನ್ನೂ ವಿವರವಾಗಿ ತಿಳಿಸಿದ್ದಾರೆ.

ಹರಿದಾಸರು ಆಯಾ ಕೇಂದ್ರಗಳಿಗೆ ಹೋದಾಗ ಅಲ್ಲಿನ ಊಟ, ಉಡುಗೆ ತೊಡಿಗೆ, ಭಾಷೆ, ಸಂಸ್ಕೃತಿಯನ್ನು ತಮ್ಮ ಕೀರ್ತನೆಗಳಲ್ಲಿ ಅವುಗಳ ಪ್ರಭಾವದಿಂದ ಮತ್ತು ಕೆಲವು ಕಡೆ ಉದ್ದೇಶ ಪೂರ್ವಕವಾಗಿ ಅಳವಡಿಸಿದ್ದುಂಟು.

ಭಾರತದಲ್ಲಿಯ ಹಲವಾರು ವಿಷ್ಣುಧಾಮಗಳು, ದ್ವಾದಶ ಜ್ಯೋತಿರ್ಲಿಂಗಗಳು, ೫೧ ಶಕ್ತಿ ಪೀಠಗಳು ಜೊತೆಗೆ ಆಯಾ ಸಿದ್ಧಾಂತದ ಯತಿಗಳ ಸಮಾಧಿ, ವೃಂದಾವನ, ಕಟ್ಟೆಗಳು ಸಹಸ್ರಾರು ಇವೆ. ಒಟ್ಟಿನಲ್ಲಿ ಇವೆಲ್ಲವುಗಳ ಸಂದರ್ಶನ ಎಷ್ಟು ಮುಖವೋ ಆಯಾ ಸಾಧಕರ ಸಿದ್ಧಿಯ ಕುರಿತು ಭಜನೆ, ಕೀರ್ತನೆ,ಉತ್ಸವ, ಆರಾಧನೆಗಳ ಸಂದರ್ಭದಲ್ಲಿ ಭಾಗವಹಿಸಿ ಅದನ್ನು ಮುಂದಿನ ಜನಾಂಗಕ್ಕೆ ಸಾಗಿಸುವ ತಲುಪಿಸುವ ಪ್ರಕ್ರಿಯೆಯನ್ನು ಹರಿದಾಸರು ಅಕ್ಷರಶಃ ಮಾಡಿರುವುದು ಅಷ್ಟೇ ಮುಖ್ಯ.

ಅಂತೆಯೇ ಪಾಜಕ, ಮಳಖೇಡ, ಮಂತ್ರಾಲಯ, ನವ ವೃಂದಾವನ, ಚಿಪ್ಪಗಿರಿ,ಮಾನವಿ,ಉತ್ತನೂರು, ಮೊಸರಕಲ್ಲು, ಚೀಕಲಪರವಿ, ಗದ್ವಾಲ, ಅಂಗಸೂಗೂರು ಮುಳಬಾಗಿಲು ಮೊದಲಾದ ಊರಿನ ಹೆಸರುಗಳೇ ಆಯಾ ಯತಿಗಳ, ದಾಸರ ಸಾಧನೆ ಮತ್ತು ಸಂದೇಶವನ್ನು ಕಾಗದದ ಸುರುಳಿ ಬಿಚ್ಚಿದಂತೆ ಸಹಜವಾಗಿ ಬಿಚ್ಚುತ್ತಹೋಗುತ್ತವೆ. ಈ ಕೆಲಸವನ್ನು ಹರಿ ದಾಸರು ಮಾಡದೇ ಇದ್ದರೆ ಇವತ್ತು ನಮಗೆ ಸಾಂಸ್ಕೃತಿಕ ಶ್ರೀಮಂತ, ಜೀವಂತ ಖಜಾನೆ ದೊರಕುತಿರಲಿಲ್ಲ.

ಹಾಗೆಯೇ ೩೦೦ ಜನ ಹರಿದಾಸರು " ಹರಿಸರ್ವೋ ತ್ತಮ, ವಾಯು ಜೀವೋತ್ತಮ" ಎಂದು ನಂಬಿ ನಡೆಯುವುದರ ಮೂಲಕ ಭಾಷೆ, ಸಂಸ್ಕೃತಿ, ಸಾಹಿತ್ಯಕ್ಕೆ ಅನುಗುಣವಾಗುವಂತೆ ಆ ಮಹಾವಿಷ್ಣುವಿನ ಸಹಸ್ರನಾಮಗಳನ್ನು ಹೊಗಳಿ ಕೊಂಡಾ ಡಿದ್ದಾರೆ. ಋತುಮಾನಕ್ಕನುಸಾರವಾಗಿ ಪ್ರವಾಸ ಮಾಡಿದ್ದಾರೆ. ಸಾಮಾಜಿಕ ಬದಲಾವಣೆಗನುಗುಣವಾಗಿ ಕ್ಷೇತ್ರಗಳ ದರ್ಶನ ಮಾಡಿದ್ದಾರೆ. ಸಮಾಜದಲ್ಲಿ ಬದರಿನಾರಾಯಣನ ಧ್ಯಾನ ಸದಾ ಇರುತ್ತಿತ್ತು, ಏಕೆಂದರೆ ಪುರಂದರದಾಸರೇ ಹೇಳಿದಂತೆ.ಭಕ್ತಿ ಪ್ರಧಾನ ಮೌಲ್ಯವಾದಾಗ ಉಡುಪಿಯ ಕೃಷ್ಣನನ್ನು ಪ್ರಾರ್ಥಿ ಸಿದರು,ಸಂಪತ್ತು ಪ್ರಧಾನ ಮೌಲ್ಯವಾದಾಗ ತಿರುಪತಿಯ ತಿಮ್ಮಪ್ಪನಲ್ಲಿಯೇ ಭಕ್ತರ ಹಿಂದೆ ಬಂದರು.ಸಂಗೀತವೇ ಪ್ರಧಾನ ಮೌಲ್ಯವಾದಾಗ ಪಂಢರ ಮತ್ತು ದ್ವಾರಕೆಗೆ ಹೋದರು.

ಹೀಗೆ ಭಾರತದ ವೈಷ್ಣವಧಾಮಗಳಲ್ಲಿ ಇಂದಿಗೂ ಪ್ರಸಿದ್ಧ ವಾದ ಕೇಂದ್ರವೆಂದರೆ ತಿರುಪತಿ. ಇತ್ತೀಚಿನ ದಿನಗಳಲ್ಲಿ ಹರಿ ದಾಸ ವಾಙ್ಮಯದಲ್ಲಿ "ಸುಧಾ ಓದಿ ಪದ ಹೇಳಿದರು" ಮತ್ತು "ದೇವರೆಂದರೆ ತಿರುಪತಿಯ ತಿಮ್ಮಪ್ಪ" "ಗುರುವೆಂದರೆ ಮಂಚಾಲೆ ರಾಘಪ್ಪ" ಎಂಬ ಭಕ್ತಿಯ ನಾಣ್ಣುಡಿಗಳು ಜಾರಿ ಯಲ್ಲಿವೆ. ತಿರುಪತಿಯು ನಾಲ್ಕು ಯುಗಗಳಿಂದ ವೃಷಭಾಚಲ, ಅಂಜನಾಚಲ, ಶೇಷಾಚಲ ಮತ್ತು ವೆಂಕಟಾಚಲ ಎಂಬ ಹೆಸರಿ

ನಿಂದ ಪ್ರಸಿದ್ಧವಿದ್ದು ಈಗ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯಲ್ಲಿರುವ ತಿರುಪತಿ ಈ ದೇಶದ ಸರ್ವಭಕ್ತರ ಪವಿತ್ರ ಸ್ಥಾನ.

ಈಗ ವಿಷಯವೆಂದರೆ ದಾಸಕೇಂದ್ರಗಳು ಮತ್ತು ದಾಸರು. ತಿರುಪತಿಗೆ ಹರಿದಾಸರು ಹೋಗಲು ಪ್ರಾರಂಭಿಸಿದ ಕಾರಣವೇನೇ ಇರಲಿ. ಅದೊಂದು ತಾತ್ಕಾಲಿನ ಸಾಮಾಜಿಕ ಅವಶ್ಯಕತೆ ಹಾಗೂ ಋತುಮಾನದ ಆದ್ಯತೆಯಾಗಿರಬಹುದು. ಉಡುಪಿಯಲ್ಲಿ ಮಧ್ವಾಚಾರ್ಯರಿಗೆ ದೊರೆತ ಕೃಷ್ಣ ಮೂರ್ತಿ ಚಿನ್ನಿಕೃಷ್ಣ. ಪಂಢರಪುರದಲ್ಲಿಯ ವಿಠ್ಠೋಭ ಥಕಾಯಿಸಿ ಸೊಂಟದ ಮೇಲೆ ಕೈಯಿಟ್ಟು ಮೂರ್ತಿ.

ಈ ಎರಡೂ ಕೇಂದ್ರಗಳಲ್ಲಿ ವಿಶೇಷ ಪೂಜೆ ಪುನಸ್ಕಾರಗಳು ಇಲ್ಲ. ವೈರಾಗ್ಯ ಹೆಚ್ಚು ವೈಭವ ಕಡಿಮೆ. ದಕ್ಷಿಣಕ್ಕೆ ಹೋದಂತೆ, ಅಂದರೆ ತಿರುಪತಿಯ ಕಡೆಗೆ ಹೋದಂತೆ ಸುಭಿಕ್ಷೆ ಮತ್ತು ಸಮೃದ್ಧಿ ಹೆಚ್ಚು. ತಿರುಪತಿಯ ತಿಮ್ಮಪ್ಪನಿಗೆ ೫ ಸಲ ನೈವೇದ್ಯ, ಬೆಳಗ್ಗೆಯಿಂದ ರಾತ್ರಿಯವರೆಗೆ ನಾನಾ ರೀತಿಯ ವಸ್ತ್ರಾಲಂಕಾರ ಜೊತೆಗೆ ಪದ್ಮಾವತಿ ಅವರದೇ ಒಂದು ಸಾಮ್ರಾಜ್ಯ. ವಿಶಾಲ ಸುಂದರ ದೇವಸ್ಥಾನ, ಸಂಪೂರ್ಣ ಸಮೃದ್ಧಿಯ ಸಂಕೇತ ಇಲ್ಲಿದೆ. ಸಹಜವಾಗಿ ಹರಿದಾಸರು ಪರಮಾತ್ಮನ ಈ ವೈಭೋಗಕ್ಕೆ ಮನಸೋತು ಈ ಕಡೆ ತಿರುಗಿದರು. ಕೆಲವೊಂದು ಸಲ "ತಿರುಪತಿ ವೆಂಕಟರಮಣ, ನಿನಗ್ಯಾತಕೋ ಬಾರದೊ ಕರುಣ" ಎಂದು ಹಾಡಿದ್ದುಂಟು. ಇಲ್ಲಿ ತಮಿಳುನಾಡಿನ ಆಳ್ವಾರ್ ಸಂಸ್ಕೃತಿಯ ಪೂಜೆ, ಪುರಂದರಾದಿ ಹರಿದಾಸ ಸಂಸ್ಕೃತಿಯ ಭಜನೆ, ಜೊತೆಗೆ ತ್ಯಾಗರಾಜ, ಅನ್ನಮಯ್ಯ ಮೊದಲಾದವರ ಕೀರ್ತನೆಗಳು ಅಲ್ಲಿ ಕೇಳಬಹುದು ಎಂದರೆ ಉಡುಪಿ, ಪಂಢರಪುರಕ್ಕಿಂತ ತಿರುಪತಿಯ ಸತ್ಸಂಗ, ಸುಖಕರವೂ, ಸುಮಧುರವೂ, ಸಂಪದ್ಭರಿತವೂ ಆಗಿರುವುದರಿಂದ ಹರಿದಾಸರು ತಿರುಪತಿಯನ್ನು ತಮ್ಮ ಒಂದು ಪ್ರಮುಖ ದಾಸ ಕೇಂದ್ರವನ್ನಾಗಿ ಮಾಡಿ ಕೊಂಡಿರಬಹುದು.

ಜೊತೆಗೆ ಅಂದಿಗೂ ಇಂದಿಗೂ ತಿರುಪತಿಯಷ್ಟು ಸಮೃದ್ಧವಾದ ಸಸ್ಯ ಮತ್ತು ಜೀವ ಸಂಕುಲ (Flora Fauna) ಬೇರಾವ ದಾಸಕೇಂದ್ರಗಳಿಗೂ ಇಲ್ಲ. ಸ್ವಾಮಿ ಪುಷ್ಕರಣಿಯು ತುಂಬಿ ಹರಿಯುವಾಗ ಇಡೀ ಬೆಟ್ಟಗುಂಟ ಹರಿದು ಬರುವ ಆ ನೀರು Concave Convex ಮಾದರಿಯ Flow ಅಲ್ಲಿಯ Essence (ದೈವಿಘನ ಶಕ್ತಿ ಅಥವಾ ಸತ್ವ) ಹಾಗೂ ದ್ರವ ಸೇಂಜನದಿಂದಲೇ ಸಹಸ್ರ ಸಹಸ್ರ ಜೀವರಾಶಿಗಳು ಪಾವನವಾಗುತ್ತವೆ. ಅದನ್ನು ಇಂದಿಗೂ ಕಾಣಬಹುದು.

ಫಂಢರಪುರ, ಬದರಿ, ದ್ವಾರಕಾ, ಪುರಿ ಮೊದಲಾದ ದಾಸಕೇಂದ್ರದಲ್ಲಿ ಇರುವ ಭಾಷೆಗಳು ದ್ರಾವಿಡ ಜನ್ಮವಾದವುಗಳಲ್ಲ. ದಕ್ಷಿಣದಲ್ಲಿರುವ ತಿರುಪತಿ ಅಲ್ಲಿಯ ದ್ರಾವಿಡ ಜನ್ಯ ಭಾಷೆಯಾದ ತಮಿಳು ಮಿಶ್ರಿತ ತೆಲುಗು, ಕನ್ನಡ ರಾಯಲಸೀಮಾ ಭಾಷೆ ಸಂಕೀರ್ತನೆಗೆ, ವಿಶೇಷವಾಗಿ ಹರಿದಾಸರ ಭಾಷೆ ಮತ್ತು ಭಜನೆಗೆ ಸರಳವಾಗಿ ಒಗ್ಗಿದೆ.

ಪುರಂದರದಾಸರ ಕಾಲದಿಂದ ಇಂದಿನವರೆಗೆ ತಿರುಪತಿಯು ಬೇರೆ ಸಂಸ್ಕೃತಿಯ ರಾಜರ ಆಕ್ರಮಣದಿಂದ ಮುಕ್ತವಾಗಿದ್ದು ವಿಶೇಷವಾಗಿ ಕನ್ನಡ ರಾಜ್ಯ ರಮಾರಮಣ, ಹಿಂದೂ ಸಾಮ್ರಾಟ್ ಶ್ರೀ ಕೃಷ್ಣ ದೇವರಾಯನ ಕಾಲದ ನಂತರವಂತೂ

## ಸಹಸ್ರನಾಮಾರ್ಚನೆ

*ಶ್ರೀ ವೆಂಕಟೇಶ್ವರಸ್ವಾಮಿಯವರ ಮೂಲ ವಿಗ್ರಹಕ್ಕೆ ಪ್ರತಿ ದಿನ ಬೆಳಗ್ಗೆ ತೋಮಾಲೆ ಸೇವೆಯ ನಂತರ ಸಹಸ್ರ ನಾಮಾರ್ಚನೆ ನಡೆಯುತ್ತದೆ. ಜಿಯ್ಯಂಗಾರರು ಕೊಟ್ಟ ತುಲಸಿಯನ್ನು ಸ್ವೀಕರಿಸಿ ಅರ್ಚಕರು, ಶ್ರೀವೆಂಕಟೇಶ್ವರ ಸಹಸ್ರ ನಾಮಾರ್ಚನೆಯನ್ನು ಸ್ವಾಮಿಯ ಪಾದಗಳಿಗೆ ಅರ್ಚನೆ ಮಾಡುತ್ತಾರೆ. ನಂತರ ಅರ್ಚಕರು ಸ್ವಾಮಿಯ ಪಾದಗಳ ಮೇಲಿನ ತುಲಸಿಯನ್ನು ಸ್ವೀಕರಿಸಿ ಸ್ವಾಮಿಯ ವಕ್ಷಸ್ಥಳದ ಮೇಲಿರುವ ಶ್ರೀ ಮಹಾಲಕ್ಷ್ಮಿ ಅಮ್ಮನವರನ್ನು, ಮಹಾಲಕ್ಷ್ಮಿ ಚತುರ್ವಿಂಶತಿ (24) ನಾಮಾಗಳಿಂದ ಅರ್ಚನೆ ಮಾಡುತ್ತಾರೆ.*




*ಇದಲ್ಲದೆ ಪ್ರತಿದಿನ ಸ್ವಾಮಿಗೆ ಎರಡನೆಯ ಮೂರನೆಯ ಅರ್ಚನೆಯಾಗಿ ಮತ್ತು ಎರಡು ಬಾರಿ ಅಷ್ಟೋತ್ತರ ಶತನಾಮಾಳಿಯಲ್ಲಿ ಮಾತ್ರ ಅರ್ಚನೆ ನಡೆಯುತ್ತದೆ. ಈ ಅರ್ಚನೆಯು ಏಕಾಂತವಾಗಿ ನಡೆಯುತ್ತದೆ. ಆದರೆ ಮಂಗಳವಾರ ಮಾತ್ರ ಎರಡನೆ ಅರ್ಚನೆಯಾಗಿ "ಅಷ್ಟದಳ ಪಾದ ಪದ್ಮರಾಧನೆ" ಯಲ್ಲಿ ಅರ್ಜಿತ ಸೇವಾ ಶುಲ್ಕವನ್ನು ಸಲ್ಲಿಸಿದ ಭಕ್ತರು ಪಾಲ್ಗೊಳ್ಳಬಹುದು.*

ಅದು ಶುದ್ಧ ಹಿಂದೂ ವೈಷ್ಣವ ಸಂಸ್ಕೃತಿಯ ಧಾಮವಾಗಿದೆ. ಹೀಗಾಗಿ ದಾಸರ ಭಕ್ತಿಗೆ ಎಂದರೆ ನಾರದರು ಬಿತ್ತಿದ ನಾರಾಯಣ ಎಂಬ ನಾಮದ ಸಂಕೀರ್ತನೆ ಬೀಜವನ್ನು ಹೆಮ್ಮರವಾಗಿಸಲು ಇದು ಅತೀ ಫಲವತ್ತಾದ ಭೂಮಿ ಎಂದು ದಾಸರಿಗೆ ಅನಿಸಿತು.

ಸುಮಾರು ೧೦೦೦ ವರ್ಷ ನಮ್ಮ ದೇಶ ಗುಲಾಮ ಗಿರಿಯಲ್ಲಿದ್ದರೂ ತಿರುಪತಿಯಲ್ಲಿ ಮಾತ್ರ ಭಕ್ತಿಯ ವಾತಾವರಣಕ್ಕೆಂದೂ ಧಕ್ಕೆ ಬಂದಿರಲಿಲ್ಲ. ಅದೊಂದು ಮುಕ್ತ ಭಕ್ತಿಯ ಕೇಂದ್ರವಾಗಿತ್ತು ಈಗಲೂ ಇದೆ.

ಕಲ್ಲಿಯುಗದಲ್ಲಿ ಭಕ್ತಿಯು ದ್ರಾವಿಡದಲ್ಲಿ ಹುಟ್ಟಿತೆಂಬುದಕ್ಕೆ ಕಾರಣ ಏನೇ ಇರಲಿ. ಅದನ್ನು ಬೆಳಸಿದವರು ಕನ್ನಡದ ಹರಿದಾಸರು. ಬದರಿಯಾತ್ರೆ ಯಾವಾಗ ಬೇಕಾದರೂ ಮಾಡುವಂಥದಲ್ಲ. ದ್ವಾರಕೆ ಮತ್ತು ಪುರಿ ಸಮುದ್ರದ ದಂಡೆಯ ಮೇಲಿವೆ. ಹೀಗಾಗಿ ಸುರಕ್ಷಿತ ಹಾಗೂ ಸಮೀಪದ ಕೇಂದ್ರವೇ ತಿರುಪತಿ. ಗಮನಿಸಬೇಕಾದ ಇನ್ನೊಂದು ವಿಷಯವೆಂದರೆ ಶ್ರೀ ಕೃಷ್ಣನ Head Quarter ಉಡುಪಿ ಮಾತ್ರವಲ್ಲ, ದ್ವಾರಕಾ ಮಥುರಾ, ಬೃಂದಾವನ ಇತ್ಯಾದಿ ಆಗಬಹುದು. ಆದರೆ ಜಗತ್ತಿನ ಯಾವುದೇ ಮೂಲೆಯಲ್ಲಿ ವೆಂಕಟೇಶ್ವರನ ದೇವಸ್ಥಾನ ಕಟ್ಟಿದರೆ ಆದರ Head Office ತಿರುಪತಿ ಎಂದು ಹೆಮ್ಮೆಯಿಂದ ಹೇಳಬಹುದು.

ದಾಸಕೇಂದ್ರ-ತಿರುಪತಿ ಎಂದರೆ ಹರಿದಾಸರು ಯಾತ್ರೆಗೆಂದು ತಿರುಪತಿಗೆ ಹೋದಾಗ ಅವರು ಭಕ್ತಿಯಿಂದ ಸಂತೋಷ ತುಂದಿಲರಾಗಿ ಹಾಡಿ, ಹೊಗಳಿದ ಪರಿ ಒಂದು ತೆರನಾದರೆ ತಿರುಪತಿಯ ವೆಂಕಟೇಶ್ವರ ಸ್ವಾಮಿಯನ್ನೇ ತಮ್ಮ ಆರಾಧ್ಯ ದೈವವನನ್ನಾಗಿ ಪಡೆದು ಆ ಹರಿನಾಮವನ್ನೇ ತಮ್ಮ ಅಂಕಿತವೆಂದು ತಿಳಿದು ಹಾಡುವ ಪರಿ ಇನ್ನೊಂದು. ಬಹುತೇಕ ಎಲ್ಲಾ ಹರಿದಾಸರು ಕಲಿಯುಗದ ಭೂವೈಕುಂಠವಾದ ತಿರುಪತಿಯನ್ನು ದರ್ಶನ ಮಾಡಿ ಅದನ್ನು ತಮ್ಮ ಕೇಂದ್ರವನ್ನಾಗಿ ಒಪ್ಪಿ ನೂರಾರು ಜನ ಶಿಷ್ಯರೊಂದಿಗೆ ಭಕ್ತರೊಂದಿಗೆ ಅಲ್ಲಿ ಹರಿದಾಸವಾಹಿನಿ, ಚಳುವಳಿ, ನಡೆಸಿರುವುದುಂಟು. ತಿರುಪತಿಯ ವೆಂಕಟೇಶ್ವರನನ್ನು ಜಿಪುಣನೆಂದು ತಮಗೆ ಪರೀಕ್ಷೆ ತೆಗೆದುಕೊಂಡ ಕಟುಕನೆಂದು, ನಿಷ್ಕರುಣಿಯೆಂದು ಬೇರೆ ಬೇರೆ ರೀತಿಯಿಂದ ಹೇಳಿದ ನಿಂದಾ ಸ್ತುತಿಗಳಿವೆ. ಒಟ್ಟಿನಲ್ಲಿ ತಿರುಪತಿಯ ಆ ವೆಂಕೇಟಶ್ವರಸ್ವಾಮಿ ಗುಡಿ, ಬಂಗಾರದ ಗೋಪುರ, ಅಕ್ಷಯ ಪಾತ್ರೆಯ ಹುಂಡಿ, ಬ್ರಹ್ಮೋತ್ಸವಗಳು, ಶಂಖಚಕ್ರಗಳು, ಕಿರೀಟ, ಪಾದುಕೆ, ವಕ್ಷಸ್ಥಳ, ಮಹಾದ್ವಾರ, ವಿವಿಧ ತೆಪ್ಪೋತ್ಸವ, ತೊಟ್ಟಿಲು ಸೇವೆ, ಪಂಚನೈವೇದ್ಯ, ಹೀಗೆ ಯಾವುದೋ ಒಂದು ಆಸ್ತಿಕ ಘಟನೆ ಅಥವಾ ಪವಿತ್ರ ಸ್ಥಳದಿಂದ ಪ್ರೇರಣೆ ಹೊಂದಿದ ಹರಿದಾಸರ ಅಶು ಗೀತೆಗಳು ತಿರುಪತಿಯನ್ನು ದಾಸಕೇಂದ್ರವನ್ನಾಗಿ ಗುರುತಿಸಿದವು. ಈ ವಿಶಾಲ ಪ್ರದೇಶ ವೈವಿಧ್ಯಮಯ ನಿಸರ್ಗರಮ್ಯ ಪರಿಸರ ಉಡುಪಿ, ಪಂಡರಪುರ ಅಥವಾ ಈ ಇನ್ನಾವುದೇ ಕೇಂದ್ರಕ್ಕೆ ಲಭ್ಯವಿಲ್ಲದೆ ಇರುವುದರಿಂದ ತಿರುಪತಿಯು ಒಂದು ಹರಿದಾಸ ಕೇಂದ್ರವಾಗಿ ಬೆಳೆಯುತ್ತ ಬಂದಿತು. ಇಂದಿಗೂ ಕಾಲುನಡಿಗೆಯಲ್ಲಿಯೇ ಬೆಟ್ಟ ಹತ್ತುವ ಸಂಪ್ರದಾಯ ಜೀವಂತವಾಗಿದೆ. "ಗೋವಿಂದ ಗೋವಿಂದ" ಎನ್ನುತ್ತ ಸಹಸ್ರಾರು ಜನ ಹಗಲು ರಾತ್ರಿಯನ್ನದೇ ಇಡೀ ವರ್ಷ ಹೋಗಿ ಬರುತ್ತಲೇ ಇರುತ್ತಾರೆ. ಒಂದರ್ಥದಲ್ಲಿ ಹೇಳುವುದಾದರೆ ಇಡೀ ವರ್ಷ ಅತೀ ಹೆಚ್ಚು ಸಂಖ್ಯೆಯಲ್ಲಿ ಭಕ್ತರನ್ನು ದಾಸರನ್ನು ಆಕರ್ಷಿಸುವ ಕೇಂದ್ರವೆಂದರೆ ತಿರುಪತಿ. ಆದ್ದರಿಂದ ಇದು ಅಂದಿಗೂ ಇಂದಿಗೂ ಎಂದೆಂದಿಗೂ ಹರಿದಾಸ ಕೇಂದ್ರವಾಗಿದೆ.

ಕರ್ನಾಟಕದ ಹರಿದಾಸರಲ್ಲಿ ಪುರಂದರದಾಸರು, ಕನಕದಾಸರು ವಿಜಯದಾಸರೇ ಮೊದಲಾದ ಹರಿದಾಸರು ಇಲ್ಲಿ ಬಂದು ಕೆಲಕಾಲ ತಂಗಿ, ಇದು ದಾಸಕೇಂದ್ರ ಎಂಬುದನ್ನು ಸಾಧಿಸಿ ತೋರಿಸಿದ್ದಾರೆ. ಅದರಲ್ಲಿಯ ಆಯ್ದ ಕೆಲವು ಅಂಶಗಳನ್ನು ಮುಂದೆ ನೋಡು.

ದಾಸ ಶ್ರೇಷ್ಠರಾದ ಪುರಂದರದಾಸರು ಪಂಢರಪುರದಂತೆ ಇರುವ ಇನ್ನೊಂದು ವಿಷ್ಣುಧಾಮ ತಿರುಪತಿಗೆ ಹೋದರು. ಹೋಗಲು ಕಾರಣವೆಂದರೆ ಯಾತ್ರೆಯೆಂಬುದು ಒಂದು ಸಹಜ ವಿಷಯವಾದರೆ ಅಲ್ಲಿ ಹೋಗುವ ಸಹಸ್ರಾರು ಭಕ್ತರ ಸತ್ಸಂಗವೇ ಅವರ ಮುಖ್ಯ ಉದ್ದೇಶ. ನಡೆಯುವಾಗ, ಬೆಟ್ಟ ಹತ್ತುವಾಗ ಅವರಿಗಾದ ಅನುಭವ ಅಪಾರ. ಶ್ರೀನಿವಾಸ ಶ್ರೀಮಂತದೇವರು, ಜಿಪುಣ ದೇವರು. ದಾಸರು ಪೂರ್ವಾಶ್ರಮದಲ್ಲಿ ಜಿಪುಣಾಗ್ರೇಸರು. ಅಂತಹ ಶ್ರೀಮಂತ ದೇವರ ಸಹಜತೆ, ಸರಳತೆ, ಭಕ್ತರಾಧೀನತೆಯನ್ನು ಸಮಾಜಕ್ಕೆ ತಿಳಿಸುವುದೇ ದಾಸರ ಉದ್ದೇಶ. ಏಕೆಂದರೆ ದಾಸರೇ ಒಂದು ಕೀರ್ತನೆಯಲ್ಲಿ "ಒಂದೆ ಕೂಗಳತೆ ಭೂವೈಕುಂಠ ಕಾಣಿರೊ" ಎಂದು ಹೇಳಿ ಎಲ್ಲಿ ಕರೆದರಲ್ಲಿ ಒದಗುವನೆಂದು ಹೇಳಿದ್ದಾರೆ. ಹಲವು ದಾಸರ ಜನ್ಮಕ್ಕೆ ತಿರುಪತಿ ವೆಂಕಟರಮಣನ ವರವೇ ಕಾರಣ.

ಈ ಹಿನ್ನೆಲೆ ನೋಡಿದಾಗ ಪುರಂದರದಾಸರು ತಿರುಪತಿಯಲ್ಲಿ ಕೆಲ ಕಾಲ ಇದ್ದರು. ಭಕ್ತರು ಭಾವುಕರು ಅವರ ಹಲವಾರು ಪವಾಡಗಳನ್ನು ಸ್ತುತಿಸಿ




## ಶಾತ್ತುಮೊರೆ

ಸ್ವಾಮಿಗೆ ನಿವೇದಿಸುವ ದಧ್ಯೋದನ, ಸಕ್ಕರೆ ಪೊಂಗಲ್‌ಗಳನ್ನು ರಾಮಾನುಜರಿಗೆ ಮತ್ತೆ ನಿವೇದಿಸುತ್ತಾರೆ. ನಂತರ ವೈಷ್ಣವಾಚಾರ್ಯ ಪುರುಷರು ಸ್ವಾಮಿಯವರ ಸನ್ನಿಧಿಯಲ್ಲಿ ದಿವ್ಯ ಪ್ರಬಂಧ ಪಾರಾಯಣ ಮಾಡುತ್ತಾರೆ. ಇದನ್ನೇ ಶಾತ್ತುಮೊರೆ ಎನ್ನುತ್ತಾರೆ. ನಂತರ ಈ ವೈಷ್ಣವಾಚಾರ್ಯರು ಎಲ್ಲರೂ ರಾಮಾನುಜರಿಗೆ ನೀಡಿದ ನೈವೇದ್ಯವಾದ ಪ್ರಸಾದವನ್ನು ಸ್ವೀಕರಿಸುತ್ತಾರೆ.

ಸ್ವಾಮಿಯ ಆಲಯದಲ್ಲಿ ಸಂಪಂಗಿ ಪ್ರದಕ್ಷಿಣೆಯಲ್ಲಿ ಇರುವ ವೆಂಕಟರಮಣ ಸ್ವಾಮಿ ಕಲ್ಯಾಣ ಮಂಟಪದಲ್ಲಿ ಶ್ರೀದೇವಿ ಭೂದೇವಿ ಸಮೇತ ಶ್ರೀಮಲೆಯಪ್ಪ ಸ್ವಾಮಿಗೆ ಪ್ರತಿ ದಿನ ಮಧ್ಯಾಹ್ನ 12 ಗಂಟೆಗೆ "ಕಲ್ಯಾಣೋತ್ಸವ" ನಡೆಯುತ್ತದೆ. ಭಕ್ತರು ಅರ್ಜಿತ ಶುಲ್ಕವನ್ನು ಸಲ್ಲಿಸಿ ಕಲ್ಯಾಣೋತ್ಸವದಲ್ಲಿ ಪಾಲ್ಗೊಳ್ಳಬಹುದು.

ಪ್ರತ್ಯೇಕ ಉತ್ಸವ ಸಮಯದಲ್ಲಿ, ವಿಶೇಷ ಸಮಯದಲ್ಲಿ ನಡೆಯುವ ಈ ಕಲ್ಯಾಣೋತ್ಸವವನ್ನು 15 ನೇ ಶತಮಾನದಲ್ಲಿ ನಿತ್ಯಕಲ್ಯಾಣೋತ್ಸವವಾಗಿ ನಿರ್ವಹಿಸಿ ಏರ್ಪಡಿಸಿದವರು ತಾಳ್ಳಪಾಕ ಅನ್ನಮಾಚಾರ್ಯರು, ಆದ್ದರಿಂದ ಇಂದಿಗೂ ನಡೆಯುವ ಈ ಕಲ್ಯಾಣೋತ್ಸವದಲ್ಲಿ ತಾಳ್ಳಪಾಕ ವಂಶಸ್ಥರು ಕನ್ಯಾದಾತರಾಗಿ ಪಾಲ್ಗೊಂಡು ಸತ್ಕಾರವನ್ನು ಪಡೆಯುತ್ತಾ ಇದ್ದಾರೆ.

ಬ್ರಹ್ಮೋತ್ಸವ, ಪುಷ್ಪಯಾಗ, ಪವಿತ್ರೋತ್ಸವದಂತಹ ವಿಶೇಷ ಸಮಯದಲ್ಲಿ ಬಿಟ್ಟು ಮಿಕ್ಕೆಲ್ಲಾ ದಿನಗಳಲ್ಲಿ ಯಥಾವಿಧಿಯಾಗಿ ಸ್ವಾಮಿಗೆ ನಿತ್ಯಕಲ್ಯಾಣೋತ್ಸವ ನಡೆಯುತ್ತದೆ. ಕಲ್ಯಾಣೋತ್ಸವದಲ್ಲಿ ಪಾಲ್ಗೊಂಡ ಭಕ್ತರಿಗೆ ಪ್ರಸಾದಗಳನ್ನು ಕೊಡುತ್ತಾರೆ.

ಕೊಂಡಾಡುತ್ತಾರೆ. ಅದರಲ್ಲಿಯ ಅಪ್ಪಣ್ಣನ ತುಪ್ಪದ ಬಿಂದಿಗೆ ಎಂಬ ಒಂದು ಪವಾಡದಿಂದ ದಾಸರ ಜನಪರ ನಿಲುವು ಮತ್ತು ಸಾಮಾಜಿಕ ಕಳಕಳಿ ನೋಡಬಹುದು.

ತಿರುಪತಿಯ ಪಾಕಶಾಲೆಯಲ್ಲಿ ಒಮ್ಮೆ ತುಪ್ಪ ಖಾಲಿ ಆಗಿತ್ತು. ಶ್ರೀನಿವಾಸನು ಪುರಂದರದಾಸರ ಶಿಷ್ಯನಾದ ಅಪ್ಪಣ್ಣನಂತೆ ವೇಷ ತಾಳಿ ದೇವಾಲಯದ ಉಗ್ರಾಣದಿಂದ ದೊಡ್ಡ ತುಪ್ಪದ ಬಿಂದಿಗೆಯನ್ನು ತಂದೊಪ್ಪಿಸಿ ಪಂಕ್ತಿಯಲ್ಲಿ ಕುಳಿತವರಿಗೆಲ್ಲ ಬೇಕಾದಷ್ಟು ಬಡಿಸಿದರು. ನಿಜವಾದ ಅಪ್ಪಣ್ಣ ತಾನು ತುಪ್ಪ ಬಡಿಸಿಲ್ಲ. ಎಂದ ಮೇಲೆ ದಾಸರಿಗೆ ನಿಜಸಂಗತಿ ತಿಳಿದು ಆ ಶ್ರೀನಿವಾಸನನೇ ತುಪ್ಪ ಬಡಿಸಿದನೆಂದು ತಿಳಿಯಿತು. ಆಗ ಪುರಂದರದಾಸರು ಬಹುವಾಗಿ ನೊಂದರು.

ಇಲ್ಲಿ ಭಕ್ತರಾಧೀನತೆಯನ್ನು ಪರಮಾತ್ಮನು ತೋರಿಸುವುದು ಒಂದು ಬಗೆಯಾದರೆ, ಕೆಲಸದಲ್ಲಿ ದೊಡ್ಡದು ಚಿಕ್ಕದು ಇಲ್ಲ ಎಂಬುದು ಇನ್ನೊಂದು. ಇಲ್ಲಿ ಅಂತಹ ಶ್ರೀಮಂತ ದೇವರು ಒಬ್ಬ ಸಾಮಾನ್ಯ ಭಕ್ತನ ವೇಷಧರಿಸಿ ಸೇವೆ ಮಾಡುತ್ತಾನೆ ಎಂದು ತಿಳಿಸಿ ತಿರುಪತಿಯ ಬಗ್ಗೆ ಇರುವ ತಪ್ಪು ಕಲ್ಪನೆ ಹೋಗಲಾಡಿಸಿದರು ಪರಮಾತ್ಮ ಅಷ್ಟೇ ಅಲ್ಲ ಗಂಗೆ ಯಮುನೆ, ಕೃಷ್ಣ, ಗೋದಾವರಿ ಮೊದಲಾದ ದೇವತಾಸ್ತ್ರೀಯರು ದಾಸರ ಮನೆ ಮುಂದೆ ರಂಗೋಲಿ ಹಾಕುತ್ತಿದ್ದರು. ಇದು ಸಮಾಜದ ಸರಳತೆಯನ್ನು ತಿಳಿಸುತ್ತದೆ.

ದಾಸರಲ್ಲಿ ಕವಿಯೆಂದು ಹೆಸರಾದ ಕನಕದಾಸರು ತಿರುಪತಿಯನ್ನು ಪ್ರಮುಖವಾದ ದಾಸಕೇಂದ್ರವೆಂದು ಭಾವಿಸಿದರು. ಅಲ್ಲಿ ಕೆಲಕಾಲ ಇದ್ದರು ಅವರು ಕೂಡಾ ಪರಮಾತ್ಮನ ಸರಳತೆ, ಭಕ್ತಾರಾಧೀನತೆಯನ್ನು ಹೇಳಿ ಸಮಾಜದ ಸರ್ವರಿಗೂ ದರ್ಶನ ಭಾಗ್ಯವಿದೆ. ಆದರೆ ಅರ್ಹತೆ, ನಂಬಿಕೆ ಬೇಕೆಂಬುದನ್ನು ಇಲ್ಲಿ ಮರೆದರು. ತಿರುಪತಿ ಕೇವಲ ಶ್ರೀಮಂತ ಕ್ಷೇತ್ರವಲ್ಲ ತಿಮ್ಮಪ್ಪ

ಕೇವಲ ಶ್ರೀಮಂತ ದೇವರಲ್ಲ ಎಂಬುದನ್ನು ತಿಳಿಸಿದ್ದಾರೆ. ಏಕತಾರಿಯನ್ನು ಬಾರಿಸುತ್ತಾ ಬರುತ್ತಿರುವ ಕನಕದಾಸರಿಗೆ ತಿರುಪತಿ ದೇವಸ್ಥಾನದ ಅಧಿಕಾರಿಗಳು ಕನಕದಾಸರು ಎಲ್ಲಿ ಬರುತ್ತಿದ್ದಾರೆ? ಎಂದು ಕೇಳಿದಾಗ "ಹಿಂದಿನವರಿಗೆ ಮುಂದೆ ಮುಂದಿನವರಿಗೆ ಹಿಂದೆ" ಎಂದು ಹೇಳಿದಾಗ ಅವರಿಗೆ ತಿಳಿಯಲೇ ಇಲ್ಲ. ಚಳಿಯಲ್ಲಿ ಕೊರೆಯುತ್ತ ಕುಳಿತಿರುವಾಗ ಕನಕದಾಸರ ಪ್ರಾರ್ಥನೆಗೆ ಮೆಚ್ಚಿ ಒಬ್ಬ ಪರಿಚಾರಕನ ವೇಷದಲ್ಲಿ ಶ್ರೀನಿವಾಸನು ಬಂದು ಕನಕದಾಸರಿಗೆ ಬಿಸಿ ಪಾಯಸ ಕುಡಿಸಿ ಉಪಚರಿಸಿದನು. ಹರಿಪ್ರಸಾದವೆಂದು ಸ್ವೀಕರಿಸಿದ ಕನಕದಾಸ ಚಳಿಯಲ್ಲಿ ಮಲಗಿದಾಗ ಜರತಾರಿ ಧೋತರ ತಂದು ಹೊಚ್ಚಿದ ಪವಾಡದಿಂದಾಗಿ ಕನಕದಾಸರು ವ್ಯಕ್ತಿತ್ವ ತಿಳಿಯುತ್ತದೆ. ಅಂದರೆ ಕನಕದಾಸರು ತಿರುಪತಿಯಲ್ಲಿದ್ದ ದೇವರನ್ನು ನೋಡಲು ಹೋಗಲಿಲ್ಲ. ಭಕ್ತಕೋಟಿಯನ್ನು ನೋಡುವುದು ಅವರ ಮುಖ್ಯ ಉದ್ದೇಶ.

ತಿರುಪತಿಯನ್ನು ಪ್ರಮುಖವಾದ ದಾಸಕೇಂದ್ರವೆಂದು ತಿಳಿಸಿದವರು ಕನಕದಾಸರು.ಭಕ್ತಿಯು ಸಮಾಜ ಮುಖಿಯಾದಾಗ ದಾಸರು ಸಮಾಜದ ಬಾಲಕನೊಬ್ಬನ ಬಾಯಿಂದ ದಾಸರ ಭಕ್ತಿಯನ್ನು ತಿಳಿಸುವ ವ್ಯವಸ್ಥೆ ದೇವರೇ ಮಾಡುತ್ತಾನೆ. ಛಡಿ ಏಟುಗಳನ್ನು ಸಹಿಸಿದ ಕನಕದಾಸರೇ ದೇವರಿಂದ ಪ್ರಸಾದ, ಓಗರ, ಬಟ್ಟೆ ಪಡೆದವರೆಂಬುದು ಸಮಾಜದ ಜನರಿಗೆ ತಿಳಿಯುತ್ತದೆ. ಒಟ್ಟಿನಲ್ಲಿ ಕನಕದಾಸರಿಗೆ ಏಕಾಂತಸೇವೆಯ ಸೌಲಭ್ಯವಿದ್ದರೂ ಸರಳತೆಯಿಂದ ನಡೆದುಕೊಂಡಾಗ ತಿರುಪತಿ ದಾಸಕೇಂದ್ರವಾಯಿತು. ಆಗ ಕನಕದಾಸರು ಏಕಾಂತ ಸೇವೆ ಮಾಡಿ ಸ್ವಾಮಿಯನ್ನು ನಿಂದಾಸ್ತುತಿಯಲ್ಲಿ ಹಾಡುತ್ತಾರೆ.

ದಾಸಸಾಹಿತ್ಯದ ದ್ವಿತೀಯ ಘಟ್ಟದ ನೇತಾರರಾದ ಶ್ರೀ ವಿಜಯದಾಸರು ತಿರುಪತಿ ವೆಂಕಟರಮಣನನ್ನು ಕುರಿತು ಹಾಡಿದ ಹಾಡು ಹೀಗಿದೆ.

"ನಿನ್ನ ದರುಶನಕೆ ಬಂದವನಲ್ಲವೋ! ದೇವ
ಪುಣ್ಯವಂತರ ದಿವ್ಯ ಚರಣವ ನೋಡಲು ಬಂದೆ"

ಎಂದು ಹೇಳುವಲ್ಲಿ ಭಕ್ತಿಯು ಸಮಾಜಪರವಾಗಿರುವುದನ್ನು ನೋಡಬಹುದು. ತಿರುಪತಿಯಲ್ಲಿ ವಿಜಯದಾಸರ ಪ್ರಾರ್ಥನೆಯ ನಂತರವೇ ರಥ ಚಲಿಸಿದ ಪವಾಡ ಕೇಳಿದರೆ ತಿರುಪತಿ ಒಂದು ಪ್ರಮುಖ ದಾಸಕೇಂದ್ರವಾಗಿಸುವಲ್ಲಿ ದಾಸರ ಪ್ರಯತ್ನ ಮತ್ತು ಸಾಧನೆ ತಿಳಿದು ಬರುತ್ತದೆ. ವಿಜಯದಾಸರ ಆಶಯದಂತೆ ಗೋಪಾಲದಾಸರು ಮರಣಶಯ್ಯೆಯಲ್ಲಿದ್ದ ಜಗನ್ನಾಥದಾಸರಿಗೆ ಜೀವದಾನ ಮಾಡಿದ್ದಲ್ಲದೇ ತಮ್ಮ ಆಯುಷ್ಯದ ಅರ್ಧ ಎಂದರೆ ೪೦ ವರ್ಷ ಆಯುರ್ದಾನ ಮಾಡಿದ ದಾಸ ಕೇಂದ್ರವೇ ತಿರುಪತಿ.

ನಂತರ ಬಂದ ವ್ಯಾಸತತ್ವಜ್ಞರು ಕೂಡಾ ತಿರುಪತಿಯಲ್ಲಿ ಕೆಲಕಾಲ ಇದ್ದಂತೆ ತಿಳಿದು ಬರುತ್ತದೆ. ಇವರಿಗಾಗಿ ರಥೋತ್ಸವವೂ ಕಾಯುತ್ತಿರುವುದನ್ನು ನೋಡಿ -

"ಯಾತರವನಾನಲ್ಲವೋ ಹರಿ
ಒಲಿಸಿ ಖ್ಯಾತಿಯನು ತಂದಿತ್ತೆಯೊ"

ಎಂಬ ಕೃತಿಯನ್ನು ಭಾವೋದ್ರೇಕದಿಂದ ಹಾಡಿದ್ದು ನೋಡಿದರೆ ಮುಂದಿನ ದಿನಗಳಲ್ಲಿ ಹರಿದಾಸರ ಕೇಂದ್ರ ತಿರುಪತಿ ಎಂಬುದನ್ನು ಸರ್ವರಿಗೂ ತಿಳಿದು ಬರುತ್ತದೆ.

ಹೀಗೆ ಹೆಚ್ಚು ಕಡಿಮೆ ಎಲ್ಲಾ ಹರಿದಾಸರು ತಿರುಪತಿ ಕೇವಲ ಪುಣ್ಯ ಕ್ಷೇತ್ರವಲ್ಲ. ಸರ್ವಭಕ್ತರ, ದಾಸರ. ಸಮಾಜದ ಸಾತ್ವಿಕ ಜನರ ಸಾಧನಾ ಭೂಮಿ ಎಂಬುದನ್ನು ತಿಳಿಸಿದ್ದಾರೆ. ಮುಂದೆ ಗುರುಗೋವಿಂದ ವಿಠಲರವರೆಗೆ ತಿರುಪತಿಗೆ ಭೇಟಿ ನೀಡದ ದಾಸರೇ ಇಲ್ಲ. ಹೀಗಾಗಿ ತಿರುಪತಿಯ ಉತ್ತಮ ಪರಿಸರ, ಸುಂದರ ವಾತಾವರಣ ಜೊತೆಗೆ ಭಕ್ತರ ಸಾಧನಾ ಭೂಮಿ ಎಂಬುದು ಸತ್ಯವಾದ ಮಾತು.

ಇತ್ತೀಚಿನ ಕಾಲ ಶತಮಾನದಿಂದ T.T.D ಯ ದಾಸ ಸಾಹಿತ್ಯ ಪ್ರಾಜೆಕ್ಟ್ ಮಾಡುತ್ತಿರುವ ಚಟುವಟಿಕೆಗಳಿಂದ ದಾಸಕೇಂದ್ರ ಹೇಗಿರಬೇಕೆಂಬ ಪರಿಕಲ್ಪನೆ ಮಾಡಿ, ಭಜನಾ ತಂಡಗಳನ್ನು ರಚಿಸಿ ತನ್ಮೂಲಕ ದಾಸಪಂಥವನ್ನು ಹರಿದಾಸ ಸಂಸ್ಕೃತಿಯನ್ನು ಬಿಂಬಿಸುವ ಸಹಸ್ರಾರು ಮಹಿಳಾ ಸಂಘಗಳನ್ನು ಕಟ್ಟಿ ಪೋಷಿಸಿದ ಕೀರ್ತಿ ತಿರುಪತಿಗೆ ಸಲ್ಲುತ್ತದೆ.

ಧಾರ್ಮಿಕ ಪುಸ್ತಕ ಪ್ರಕಟಣೆಗೆ ಧನಸಹಾಯ, ಕನ್ನಡವೂ ಸೇರಿ ೫ ಭಾಷೆಗಳಲ್ಲಿ "ಸಪ್ತಗಿರಿ" ಮಾಸಿಕ ನಿಯತಕಾಲಿಕೆಯ ಪ್ರಕಟಣೆ ಹೀಗೆ ಹತ್ತು ಹಲವು ಯೋಜನೆಗಳನ್ನು ಹಾಕಿ ಒಂದು ವ್ಯವಸ್ಥಿತ ಸುಸಜ್ಜಿತ ಸರ್ವಾನುಕೂಲಿತ, ಪ್ರಗತಿಪರ, ಹರಿದಾಸ ಕೇಂದ್ರವಾಗಿದೆಯೆಂದು ಈ ಸಂದರ್ಭದಲ್ಲಿ ಹೇಳುವುದು ಸೂಕ್ತವೆನಿಸುತ್ತದೆ.





## ತಿರುಮಲೆ
## ಶ್ರೀ ವೆಂಕಟೇಶ್ವರ ಸ್ವಾಮಿಯವರ
## ಬ್ರಹ್ಮೋತ್ಸವ
## 2020 ಸೆಪ್ಟೆಂಬರ್
## 19 ರಿಂದ 27 ರ ವರೆಗೆ



**20-09-2020 ಭಾನುವಾರ**
**ರಾತ್ರಿ: ಹಂಸವಾಹನ**



**21-09-2020 ಸೋಮವಾರ**
**ಹಗಲು: ಸಿಂಹವಾಹನ**



**21-09-2020 ಸೋಮವಾರ**
**ರಾತ್ರಿ: ಮುತ್ತಿನಚಪ್ಪರವಾಹನ**



**22-09-2020 ಮಂಗಳವಾರ**
**ಹಗಲು: ಕಲ್ಪವೃಕ್ಷವಾಹನ**

designpsivaprasad

ತಿರುಮಲೆ
ಶ್ರೀ ವೆಂಕಟೇಶ್ವರ ಸ್ವಾಮಿಯವರ
ಬ್ರಹ್ಮೋತ್ಸವ
2020 ಸೆಪ್ಟೆಂಬರ್
19 ರಿಂದ 27 ರ ವರೆಗೆ



ತಿರುಮಲೆ ತಿರುಪತಿ ದೇವಸ್ಥಾನಗಳು



**22-09-2020 ಮಂಗಳವಾರ**
**ರಾತ್ರಿ: ಸರ್ವಭೂಪಾಲವಾಹನ**



**23-09-2020 ಬುಧವಾರ**
**ಹಗಲು: ಪಲ್ಲಕ್ಕಿಯಲ್ಲಿ ಮೋಹಿನೀಅವತಾರೋತ್ಸವ**



designpsivaprasad





## 24-09-2020 ಗುರುವಾರ
## ಹಗಲು: ಹನುಮದ್ವಾಹನ





## 24-09-2020 ಗುರುವಾರ
## ರಾತ್ರಿ: ಗಜವಾಹನ

designpsivaprasad

ತಿರುಮಲೆ
ಶ್ರೀ ವೆಂಕಟೇಶ್ವರ ಸ್ವಾಮಿಯವರ
ಬ್ರಹ್ಮೋತ್ಸವ
2020 ಸೆಪ್ಟೆಂಬರ್
19 ರಿಂದ 27 ರ ವರೆಗೆ





25-09-2020 ಶುಕ್ರವಾರ
ಹಗಲು: ಸೂರ್ಯಪ್ರಭವಾಹನ



25-09-2020 ಶುಕ್ರವಾರ
ರಾತ್ರಿ: ಚಂದ್ರಪ್ರಭವಾಹನ



designpsivaprasad

# ಭಕ್ತಿ ಪಕ್ವತೆಯ ಸಾಧನ - ಅಧಿಕ ಆಶ್ವಯುಜ ಮಾಸ

- ಡಾ॥ ಗುರುರಾಜ ಪ್ರೋಶೆಟ್ಟಿಹಳ್ಳಿ
9739369621



**ಪುಣ್ಯಮಾಸ ಪುರುಷೋತ್ತಮ ಮಾಸ..**

ವಿಶ್ವ ಜನಪದಗಳು ಜೀವನವ್ಯಾಪಾರಕ್ಕಾಗಿ ಅಖಂಡ ಕಾಲವನ್ನು ಸೂರ್ಯ, ಚಂದ್ರ, ನಕ್ಷತ್ರಗಳನ್ನು ಆಧಾರವಾಗಿಟ್ಟುಕೊಂಡು ವಿಭಾಗಿಸಿ ಸಂವತ್ಸರ, ಮಾಸ, ಪಕ್ಷ, ವಾರ, ದಿನಗಳ ವಿಭಾಗದಲ್ಲಿ ವ್ಯಾವಹಾರಿಕ ಕಾಲಗಣನೆಯನ್ನು ಕಲ್ಪಿಸಿಕೊಂಡಿವೆ. ಒಂದೊಂದು ದೇಶದಲ್ಲಿ ಒಂದಕ್ಕಿಂತ ಅಧಿಕ ಕಾಲಗಣನಾಕ್ರಮಗಳು ಇವೆ. ಭಾರತೀಯ, ಚೀನಾ, ರೋಮನ್ ಮುಂತಾದ ಬಗೆಯ ವರ್ಷಗಣನೆಗಳು, 24 ಬಗೆಯ ಸಂವತ್ಸರದಲ್ಲಿ ದಿನಗಣನೆಗಳೂ ಪ್ರಚಲಿತವಾಗಿವೆ. ಇವುಗಳೆಲ್ಲ ಭಾರತೀಯ ಕಾಲಗಣನಾಕಲ್ಪನೆಯು ಪ್ರಾಚೀನತಮವಾಗಿದೆ. ಭಾರತೀಯ ಸಂವತ್ಸರ ಗಣನೆಯು ಒಂಭತ್ತು ಬಗೆಯಾಗಿ ಇದೆ. ಬ್ರಾಹ್ಮ, ಪಿತ್ರ್ಯ, ದೈವ, ಪ್ರಾಜಾಪತ್ಯ, ಗೌರವ ಸೌರ ಸಾವನ, ಚಂದ್ರ ಮತ್ತು ನಕ್ಷತ್ರ ಇವುಗಳಲ್ಲಿ ಮೊದಲ ನಾಲ್ಕು ಕಲ್ಪಯುಗ ಮುಂತಾದ ದೊಡ್ಡ ಕಾಲಗಣನೆಯಲ್ಲಿ ಪ್ರಯುಕ್ತವಾಗಿವೆ. ಉಳಿದ ಗೌರವ (ಬಾರ್ಹಸ್ಪತ್ಯ) ಮುಂತಾದ ಐದು ಬಗೆಗಳು ಲೋಕ ವ್ಯವಹಾರದಲ್ಲಿ ಬಳಕೆಯಾಗುತ್ತವೆ. ಇವುಗಳಲ್ಲೂ ಈಗ ನಮ್ಮ ದೇಶದಲ್ಲಿ ಸಾರ್ವಸತ್ರಿಕ ಬಳಕೆಯಲ್ಲಿರುವವು - ಸೌರ ಮತ್ತು ಚಾಂದ್ರಮಾನಗಳು ಮಾತ್ರ.

ಈ ಎರಡು ಕ್ರಮಗಳಲ್ಲಿ ಸೌರಮಾನ ಕ್ರಮವು ಹೆಚ್ಚು ಸರಳವಾಗಿದೆ. ಇದಕ್ಕೆ ಕ್ಷಯ,ವೃದ್ಧಿಗಳಿಲ್ಲ. ಖಗೋಲ-ಭೂಗೋಲಗಳ ಸಾಮಂಜಸ ಸಂಬಂಧವನ್ನು ಹೊಂದಿ ಕಾಲಗಣನೆಗೆ ಹೆಚ್ಚು ಸುಗಮವಾಗಿದೆ. ಆಕಾಶದಲ್ಲಿ 27 ನಕ್ಷತ್ರಗಳ 108 ಪಾದಗಳನ್ನು ಒಂದಕ್ಕೆ ಒಂಭತ್ತು ಪಾದಗಳಂತೆ 12 ಭಾಗ ಮಾಡಲಾಗಿದೆ. ಆ 12 ಭಾಗಗಳ ನಕ್ಷತ್ರ ಪುಂಜಗಳಿಂದ ಉಂಟಾಗುವ ಆಕಾರಗಳನ್ನು ಅನುಸರಿಸಿ ಮೇಷ, ವೃಷಭ ಮುಂತಾದ 12 ರಾಶಿಗಳಲ್ಲಿ ಸೂರ್ಯನ ಗತಿಯನ್ನು ಅನುಸರಿಸಿ ಸೌರಮಾನ ವರ್ಷ, ಮಾಸಾದಿಗಳು ಉಂಟಾಗುತ್ತವೆ.

ಸೌರಮಾನದ ಸಂಬಂಧ ಸೂರ್ಯನ ಜೊತೆಗಿದ್ದರೆ, ಚಾಂದ್ರಮಾನದ ಸಂಬಂಧವು ಚಂದ್ರನ ಜೊತೆಗಿರುತ್ತದೆ. ಅಮಾವಾಸ್ಯೆ ದಿನ ಚಂದ್ರನು ಸೂರ್ಯನ ಜೊತೆ ಏಕಾಂತದಲ್ಲಿದ್ದು, ಅದೃಶ್ಯನಾಗಿ ಮರುದಿನ ಪ್ರತಿಪದೆ (ಪಾಡ್ಯ)ಯಿಂದ ಒಂದೊಂದೆ ಕಲೆಯಾಗಿ ಪ್ರಕಟವಾಗುತ್ತಾನೆ. ಅವನು ಪೂರ್ಣ ಕಲೆಗಳನ್ನು ಧರಿಸಿ - ಪೂರ್ಣಚಂದ್ರನಾದ ದಿನ ಅಂದರೆ ಹುಣ್ಣಿಮೆಯ ದಿನ ಯಾವ ನಕ್ಷತ್ರದಲ್ಲಿರುತ್ತಾನೋ ಆ ನಕ್ಷತ್ರದ ಹೆಸರೇ ಆ ಮಾಸಕ್ಕೆ ಬರುತ್ತದೆ. ಉದಾಹರಣೆಗೆ ಅಮಾವಾಸ್ಯೆಯ ಮರುದಿನ ರೇವತಿ ನಕ್ಷತ್ರದಲ್ಲಿ ತನ್ನ ಪ್ರಥಮ ಕಲೆಯಿಂದ ಪ್ರಕಟನಾಗಿ ಚಿತ್ರಾ ನಕ್ಷತ್ರದಲ್ಲಿ ಪೂರ್ಣಚಂದ್ರನಾಗುತ್ತಾನೆ. ಆಗ ಆ ತಿಂಗಳಿಗೆ ಚೈತ್ರ ಎಂದು ಹೆಸರು. ಈ ಚಾಂದ್ರಮಾಸವು ದಕ್ಷಿಣಭಾರತದಲ್ಲಿ ಅಮಾವಾಸ್ಯೆಯಂದು ಕೊನೆಗೊಂಡರೆ, ಉತ್ತರಭಾರತದಲ್ಲಿ ಹುಣ್ಣಿಮೆಗೆ ಕೊನೆಗೊಳ್ಳುತ್ತದೆ.

ಭಾರತದಲ್ಲಿ ಸೌರ - ಚಾಂದ್ರಮಾನಗಳನ್ನು ಸಂಯುಕ್ತವಾಗಿ ಬಳಸಲಾಗುತ್ತದೆ. ಆದರೆ ಸೌರವರ್ಷಕ್ಕೂ ಚಾಂದ್ರವರ್ಷಕ್ಕೂ 11 ದಿನ, ಒಂದು ಗಂಟೆ, 14 ನಿಮಿಷಗಳ ವ್ಯತ್ಯಾಸ ಉಂಟಾಗುತ್ತದೆ. ಅಂದರೆ ಸೌರಮಾನದಲ್ಲಿ ವರ್ಷಕ್ಕೆ 365 1/4 ದಿನಗಳಿದ್ದರೆ, ಚಂದ್ರಮಾನವರ್ಷದಲ್ಲಿ 354 ದಿನಗಳಿರುತ್ತವೆ; ಹಾಗಾಗಿ ಸೌರ - ಚಾಂದ್ರಮಾನಗಳ ಸಾಮಂಜಸ್ಯವನ್ನು ಉಂಟುಮಾಡಲಿಕ್ಕಾಗಿ 32 ತಿಂಗಳು 16 ದಿನ 1 ಗಂಟೆಯ ಮೇಲೆ ಒಂದು ಅಧಿಕಮಾಸವು ಬರುತ್ತದೆ. ಈ 12 ಚೈತ್ರಾದಿ ಮಾಸಗಳಲ್ಲಿ ಯಾವ ಮಾಸವು ಅಧಿಕವಾಗುತ್ತದೆ.? ಸುಮ್ಮನೆ ಯಾವುದಾದರೊಂದನ್ನು ಅಧಿಕಮಾಸವೆಂದು ಎಣಿಸುವಂತಿಲ್ಲ. ಇದಕ್ಕೆ ಜ್ಯೋತಿಶಾಸ್ತ್ರವು ಒಂದು ಚಮತ್ಕಾರದ ವ್ಯವಸ್ಥೆಯನ್ನು ಮಾಡಿದೆ. ಯಾವ ವರ್ಷದ ಯಾವ ಮಾಸದಲ್ಲಿ ಸಂಕ್ರಾಂತಿಯು ಬರುವುದಿಲ್ಲವೋ ಆ ವರ್ಷ ಆ ಮಾಸವು ಅಧಿಕ ಮಾಸವಾಗುವುದು. ಚೈತ್ರ, ವೈಶಾಖ, ಜ್ಯೇಷ್ಠ, ಅಷಾಢ, ಶ್ರಾವಣ,

ಭಾದ್ರಪದ, ಆಶ್ವಯುಜ ಮತ್ತು ಕೆಲವೊಮ್ಮೆ ಮಾಘ ಈ ಮಾಸಗಳೇ ಅಧಿಕಮಾಸವಾಗುವುವು. ಹೀಗೆ ಸೌರ ಮಾನಕ್ಕೆ ಕಲ್ಪಿಸಿದಾಗ, ಅನೇಕ ವರ್ಷಗಳು ಕಳೆದಾಗ ಚಾಂದ್ರಮಾನ ದಿನಗಳು ಕ್ಷಯಮಾಸವನ್ನು ಕಲ್ಪಿಸ ಲಾಗುತ್ತದೆ. ಅಂದರೆ ಒಂದು ಮಾಸವು ಲುಪ್ತವಾಗುತ್ತದೆ. ಆ ಲುಪ್ತ ಮಾಸವನ್ನು ಕ್ಷಯಮಾಸ ಎನ್ನುತ್ತಾರೆ. ಈ ಕ್ಷಯ ಮಾಸವು 19 ಅಥವಾ 141 ವರ್ಷಗಳ ಅಂತರದಲ್ಲಿ ಬರು ತ್ತದೆ. ಚಾಂದ್ರಮಾಸದ ಎರಡು ಅಮಾವಾಸ್ಯೆಗಳ ಮಧ್ಯದಲ್ಲಿ ಎರಡು ಸೌರ ಸಂಕ್ರಾಂತಿಗಳು ಬಂದರೆ ಆ ಚಾಂದ್ರಮಾಸವು ಕ್ಷಯವಾಗುತ್ತದೆ. ಕಾರ್ತಿಕ, ಮಾರ್ಗಶಿರ ಅಥವಾ ಪುಷ್ಯ ಈ ಮೂರು ಮಾಸಗಳಲ್ಲಿ ಒಂದು ಕ್ಷಯ ಮಾಸವಾಗುತ್ತದೆ. ಉಳಿದ ಮಾಸಗಳು ಎಂದೂ ಕ್ಷಯ ಮಾಸಗಳಾಗುವುದಿಲ್ಲ. ಕಾರಣ ಈ ಮೂರು ಮಾಸಗಳಲ್ಲಿ ಮಾತ್ರ ಬರುವ ಸೌರ ಮಾಸಗಳು ಕಿರಿದಾಗಿರುವುದರಿಂದ ಎರಡು ಸಂಕ್ರಾಂತಿಗಳು ಬರಲು ಅವಕಾಶವಾಗುತ್ತದೆ. ಕಾರ್ತಿಕ, ಮಾರ್ಗಶೀರ್ಷ, ಪುಷ್ಯ ಇವುಗಳನ್ನುಳಿದು ಉಳಿದ ಮಾಸಗಳು ಅಧಿಕಮಾಸ ಗಲಾಗುತ್ತವೆ. ಕಾರಣ ಈ ಚಾಂದ್ರಮಾಸಗಳ ಅವಧಿಯಲ್ಲಿ ಬರುವ ಸೌರಮಾಸಗಳು ಹಿರಿದಾಗಿರುತ್ತವೆ. ಕ್ಷಯಮಾಸದ ಮೂರು ತಿಂಗಳು ಹಿಂದೆ ಮತ್ತು ಮೂರು ತಿಂಗಳು ಮುಂದೆ ಅಧಿಕಮಾಸ ಬರುತ್ತದೆ.


ನಮ್ಮ ದೇಶದ ದೇವತಾರಾಧನೆ, ಸಂಸ್ಕಾರಗಳು, ಯಜ್ಞ, ದಾನ, ಪುಣ್ಯಕಾರ್ಯಗಳು ಇವು ಸೌರಚಾಂದ್ರ ಎರ ಡನ್ನೂ ಅವಲಂಬಿಸಿಕೊಂಡಿವೆ. ಆದ್ದರಿಂದ ಸೌರ - ಚಾಂದ್ರ ಮಾನಗಳನ್ನು ಸಮಂಜಸವಾಗಿ ಸರಿದೂಗಿಸುವ ಈ ವ್ಯವಸ್ಥೆಯು ಅತ್ಯುಪಯುಕ್ತವಾಗಿದೆ. ಪ್ರಕೃತ ಈ ವರ್ಷ ಶಾರ್ವರಿನಾಮ ಸಂವತ್ಸರದಲ್ಲಿ ಅಶ್ವಯುಜಮಾಸವು ಅಧಿಕ ಮಾಸವಾಗಿದೆ.

ಅಧಿಕಮಾಸವನ್ನು ಅಧಿಕಮಾಸ, ಮಲಮಾಸ, ಮಲಿನಮಾಸ, ದುಷ್ಟಮಾಸ ಎಂಬ ಹೆಸರುಗಳಿಂದಲೂ ಕರೆ ಯುತ್ತಾರೆ. ಮಲಮಾಸ ಶಬ್ಧವು ಮಾತ್ರ ಕ್ಷಯಮಾಸಕ್ಕೂ ಸಲ್ಲುತ್ತದೆ. ಅಧಿಕಮಾಸಕ್ಕೆ 'ಪುರುಷೋತ್ತಮಮಾಸ' ಎಂಬ ವಿಶೇಷ ಹೆಗ್ಗಳಿಕೆಯಿದೆ. ಅಧಿಕಮಾಸವು ಅನೇಕ ವೈಶಿಷ್ಟ್ಯ ಗಳನ್ನು ಪಡೆದಿದೆ. ಈ ಮಾಸದಲ್ಲಿ ಅನೇಕ ಕಾರ್ಯಗಳಿಗೆ ನಿಷೇಧವನ್ನೂ, ಮತ್ತೆ ಅನೇಕ ಕಾರ್ಯಗಳಿಗೆ ವಿಧಿಯನ್ನೂ ಹೇಳಿದ್ದಾರೆ. ಸಾಮಾನ್ಯವಾಗಿ ಯಾವ ಶುಭಕಾರ್ಯಗಳನ್ನೂ ಮಾಡಬಾರದೆಂದು ತುಂಬ ಜನರು ಭ್ರಮೆಗೊಂಡಿರುತ್ತಾರೆ. ವಸ್ತುಸ್ಥಿತಿ ಹಾಗಿಲ್ಲ. ಯಾವುದೇ ಆರಾಧನೆ, ಸಂಸ್ಕಾರ, ಇವು ಗಳಿಗೆ ನಿರ್ದಿಷ್ಟ ದಿನಗಳನ್ನು ಹೇಳಿರುತ್ತಾರೋ ಅವುಗಳನ್ನು ಅಧಿಕಮಾಸದಲ್ಲೂ ಮಾಡಬಹುದು. ಸಂಸ್ಕಾರಗಳಲ್ಲಿ ಗರ್ಭಾ ಧಾನ, ಸೀಮಂತ, ಪುಂಸವನ, ಜಾತಕರ್ಮ, ವಿಷ್ಣು ಬಲಿ, ನಾಮಕರಣ, ಅನ್ನಪ್ರಾಶನ ಇವುಗಳಿಗೆ ನಿರ್ದಿಷ್ಟ ದಿನ, ಮಾಸಗಳಲ್ಲಿ ಶಾಸ್ತ್ರದಲ್ಲಿ ಹೇಳಿರುವುದರಿಂದ ಅಧಿಕ ಮಾಸದಲ್ಲೂ ಮಾಡಬಹುದು. ಅನನ್ಯಗತಿಕ (ಅನಿವಾರ್ಯ) ಸಂದರ್ಭದಲ್ಲಿ ನಿತ್ಯ, ನೈಮಿತ್ತಕ, ಕಾಮ್ಯಗಳೆಂಬ ಎಲ್ಲ ಕರ್ಮ ಗಳನ್ನೂ ಮಾಡಬಹುದು. ನೂತನ ಗೃಹಪ್ರವೇಶ, ವಿವಾಹ, ಉಪನಯನ, ಚೌಲಾದಿಗಳನ್ನು ಮಾಡುವಂತಿಲ್ಲ. ಬಾಡಿಗೆ ಮನೆಗೆ ಹೋಗಬಹುದು. ಮೊದಲೇ ಭೂಮಿಪೂಜೆ ಮಾಡಿದ ಗೃಹನಿರ್ಮಾಣವನ್ನು ಮುಂದುವರಿಸಬಹುದು. ಗರ್ಭಿಣಿ ತವರುಮನೆಗೆ ಹೋಗುವುದು, ಸೀಮಂತ, ಶಿಶುಜನನ ಇವು ಗಳಿಗೆ ನಿಷೇಧವಿಲ್ಲ. ದೋಷವೂ ಇಲ್ಲ. ಮಳೆ- ಬೆಳೆಗಾಗಿ ಮಾಡುವ ಪೂಜೆ, ಹೋಮ, ಗ್ರಹಚಾರ ಪರಿಹಾರ ಕಾರ್ಯ ಇವುಗಳಿಗೆ ನಿಷೇಧವಿಲ್ಲ. ಆದ್ದರಿಂದ ಮಲಮಾಸವು ಸರ್ವತ್ರ ತ್ಯಾಜ್ಯವೆಂಬ ಭ್ರಮೆ ಬೇಡ.

ಅಧಿಕಮಾಸವು ಮನುಷ್ಯನು ತನ್ನ ಆರೋಗ್ಯಾಭಿವೃದ್ಧಿ, ಮನೋದೇಹಾತ್ಮ ಶುದ್ಧಿ, ಪಾಪಪರಿಹಾರ, ಪುಣ್ಯಸಂಚಯ ಇವು ಗಳನ್ನು ಮಾಡಿಕೊಳ್ಳಲು ಉತ್ತಮ ಪುಣ್ಯಮಾಸವಾಗಿದೆ. 'ಅಧಿಕಸ್ಯ ಅಧಿಕಂ ಫಲಮ್' ಅಧಿಕಮಾಸದಲ್ಲಿ ಮಾಡಿದ ಪುಣ್ಯಕಾರ್ಯಗಳಿಗೆ ಉಳಿದ ಮಾಸಗಳಲ್ಲಿ ಮಾಡಿದ್ದಕ್ಕಿಂತ ಅಧಿಕ ಫಲವು ದೊರಕುತ್ತದೆ. ತಮ್ಮ ಇಷ್ಟದೇವರ, ಕುಲದೇವರ ಯಾವುದೇ ಪುಣ್ಯಪ್ರದವಾದ ಪಾಪ ಪರಿಹಾರ ಕರವಾದ ಪೂಜೆ, ಹೋಮ, ಉತ್ಸವ, ಜಪ ಮುಂತಾದವುಗಳನ್ನು ಮಾಡಿ ಪುಣ್ಯವನ್ನೂ ಪಾವಿತ್ರ್ಯವನ್ನೂ ಪಡೆಯಬಹುದು.

ಅಧಿಕಮಾಸದಲ್ಲಿ ನಾನಾ ತೀರ್ಥಕ್ಷೇತ್ರದರ್ಶನ, ತೀರ್ಥಸ್ನಾನಗಳನ್ನು ಕೈಗೊಳ್ಳಬೇಕು. ಇಡೀ ತಿಂಗಳು ಇಷ್ಟವಾದ ದೇವರ ನಿತ್ಯಾರಾಧನೆಯನ್ನು ಮಾಡಿದರೆ ನರಕನಿವಾರಣೆ ಎಂದಿದ್ದಾರೆ. ಅಧಿಕಮಾಸದಲ್ಲಿ ಮಾಡಬೇಕಾದ ಅನೇಕ ಪುಣ್ಯ ಕಾರ್ಯಗಳನ್ನು ಸ್ಮೃತಿ, ಶಾಸ್ತ್ರ, ಪುರಾಣಗ್ರಂಥಗಳನ್ನು ಬಣ್ಣಿಸ ಲಾಗಿದೆ. ಅವುಗಳಲ್ಲಿ ಮಾಡಲೇಬೇಕಾದ ಒಂದು 'ಪುರುಷೋ ತ್ತಮ' ಆರಾಧನೆಯನ್ನು ಹೇಳಿದ್ದಾರೆ. ಈ ಪುರುಷೋತ್ತಮ ವ್ರತ ದಿಂದಲೇ ಅಧಿಕಮಾಸಕ್ಕೆ ಪುರುಷೋತ್ತಮ ಮಾಸವೆಂಬ ಹೆಸರು ಬಂದಿದೆ. ಶ್ರೀ ಕೃಷ್ಣನು ಲಕ್ಷ್ಮೀದೇವಿಗೆ ಈ ವ್ರತವನ್ನು ಹೇಳಿದ್ದನು. ಈ ಪುರುಷೋತ್ತಮ ವ್ರತವನ್ನು ಅಧಿಕಮಾಸದ ಯಾವ ದಿನದಲ್ಲಾದರೂ, ಪ್ರತಿದಿನವಾದರೂ ಮಾಡಬಹುದು. ವಿಶೇಷವಾಗಿ ಅಧಿಕಮಾಸದ ಕೃಷ್ಣ ಪಕ್ಷದ ಅಷ್ಟಮಿ, ನವಮಿ ಅಥವಾ ಚತುರ್ದಶಿಯಂದು. ಮಾಡಬೇಕು. ಕಲಶಸ್ಥಾಪನೆ ಮಾಡಿ ಶ್ರೀದೇವಿಸಹಿತ ಪುರುಷೋತ್ತಮನ ಪೂಜೆಯನ್ನು ಮಾಡಿ

ಅನ್ನವೆಂದರೆ ಮನುಷ್ಯನ ಜೀವನದ ಜೀವದಾತು, ಜೀವ ಧ್ವನಿಯಾಗಿದೆ. ಪುರಾಣ, ಮಹಾ ಕಾವ್ಯಗಳಲ್ಲಿ ಅನ್ನ ಪ್ರತಿಮೆಯಾಗಿ ಬಳಕೆ ಗೊಂಡಿದೆ. ಅನ್ನ ಬ್ರಹ್ಮ, ಅನ್ನದಾತ, ಅನ್ನಪೂರ್ಣೇಶ್ವರಿ, ಅನ್ನ ದಾಸೋಹ, ಅನ್ನದ ಋಣ ಎನ್ನುವ ಪದಗಳು ಅನ್ನಕ್ಕಿರುವ ಮಹತ್ವವನ್ನು ಹೇಳುತ್ತವೆ.





33 ಅಪೂಪಗಳನ್ನು ತುಪ್ಪದಲ್ಲಿ ಕರಿದು, ಅವುಗಳಲ್ಲಿ 33 ದೇವರನ್ನು ಪೂಜಿಸಿ ದಾನ ಮಾಡುವುದು.

ಇದರಂತೆ ಇನ್ನೂ ಅನೇಕ ಪುಣ್ಯವ್ರತ, ಉಪವಾಸ, ಅನುಷ್ಠಾನ, ಪೂಜೆ, ಉತ್ಸವಗಳನ್ನು ಈ ಮಾಸದಲ್ಲಿ ಆಚರಿಸುವಂತೆ ಹೇಳಲಾಗಿದೆ. ಯುಧಿಷ್ಠಿರ ವಿಶ್ವಾಮಿತ್ರ, ಮೈತ್ರೇಯ, ಮಾರ್ಕಂಡೇಯರು ಮುಂತಾದ ರಾಜರ್ಷಿಗಳೂ, ಮಹರ್ಷಿಗಳೂ ಅಧಿಕಮಾಸದಲ್ಲಿ ಮಾಡಬೇಕಾದ ಅನೇಕ ವ್ರತ, ಪೂಜೆ, ಉತ್ಸವ, ಉಪವಾಸಾದಿಗಳನ್ನು ಹೇಳಿದ್ದಾರೆ. ಒಟ್ಟಿನಲ್ಲಿ ಅಧಿಕಮಾಸದಲ್ಲಿ ಮಾಡಿದ ತೀರ್ಥಸ್ನಾನ, ದಾನ, ಜಪ, ಹೋಮ, ಪಿತೃತರ್ಪಣ, ಉತ್ಸವ, ದೇವತಾ ಪೂಜೆ ಇವುಗಳೆಲ್ಲ ಅಕ್ಷಯ ಫಲದಾಯಕವಾಗಿದೆ.

ಎಷ್ಟುವರ್ಷಕ್ಕೊಮ್ಮೆ?

ಸಾಮಾನ್ಯವಾಗಿ ಅಧಿಕಮಾಸ 29 ಚಾಂದ್ರ ತಿಂಗಳಿಗೆ ಒಂದು ಸಲ ಬರುತ್ತದೆ. ಆದರೆ ಇದು ನಿಖರವಾದ ಮಾಪಕವಲ್ಲ ಕಾರಣವೆಂದರೆ ಚಾಂದ್ರ ಮತ್ತು ಸೌರ ವರ್ಷಗಳ ನಡುವಿನ ಅಂತರ 10, 898 ಎಂಬುದು ಸ್ಥೂಲವಾದ ಲೆಕ್ಕಾಚಾರ ಮಾತ್ರ, ವಾಸ್ತವದಲ್ಲಿ ಇದು ಇನ್ನಷ್ಟು ಸೂಕ್ಷ್ಮ ಅಂಕಿಗಳಿಗೆ ವಿಸ್ತರಿಸಲ್ಪಟ್ಟಿದೆ. ಇದರಿಂದ ಎರಡು 28 ತಿಂಗಳಿನ ಚಕ್ರಮುಗಿಯುವಾಗ ಅಂತರದ ಪ್ರಮಾಣ ಕಡಿಮೆಯಾಗಿರುತ್ತದೆ. ಹೀಗಾಗಿ ಮೂರನೇ ಅಧಿಕಮಾಸ 32 ನೇ ಚಾಂದ್ರ ತಿಂಗಳಿಗೆ ಬರುತ್ತದೆ. ಇದನ್ನು ಸರಳೀಕರಿಸಿ ಎಂಟು ಚಾಂದ್ರ ಸಂವತ್ಸರಗಳಿಗೆ ಮೂರು ಅಧಿಕ ಮಾಸಗಳು ಬರುತ್ತವೆ ಎಂದು ಭಾಸ್ಕರಾಚಾರ್ಯರು ಸೂತ್ರೀಕರಿಸಿದ್ದಾರೆ. ಅಧಿಕ ಮಾಸವು ಯಾವಾಗಲೂ ಚೈತ್ರದಿಂದ ಕಾರ್ತಿಕದವರೆಗಿನ ಮಾಸಗಳಲ್ಲೇ ಬರುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ ಈ ಅವಧಿಯಲ್ಲಿ ಭೂಮಿ ಅಂಡ ವೃತ್ತದಿಂದ ದೂರದಲ್ಲಿದ್ದು ಸೂರ್ಯನ ಚಲನೆ ಚಂದ್ರನ ಚಲನೆಗಿಂತಲೂ ವಿಳಂಬವಾಗಿರುತ್ತದೆ.

ಚಂದ್ರನ ಚಲನೆ ಸೂರ್ಯನ ಚಲನೆಗಿಂತಲೂ ಮುಂದೆ ಹೋದಾಗ ಅಧಿಕ ಮಾಸಬರುತ್ತದೆ. ಹಾಗೇ ಸೂರ್ಯ ಚಲನೆ ಚಂದ್ರನ ಚಲನೆಗಿಂತ ಮುಂದೆ ಹೋಗುವುದಿಲ್ಲವೇ ಎಂಬ ಪ್ರಶ್ನೆ ಸಹಜವಾಗಿಯೇ ಬರುತ್ತದೆ. ವಿರಳವಾಗಿಯಾದರೂ ಅಧಿಕ ಮಾಸಗಳ ಸೇರ್ಪಡೆಯಿಂದ ಅಂತಹ ಸನ್ನಿವೇಶವು ಬರುತ್ತದೆ. ಹೀಗಾದಾಗ ಒಂದೇ ಚಾಂದ್ರಮಾಸದಲ್ಲಿ ಎರಡು ಸಂಕ್ರಮಣಗಳು ಬರುತ್ತವೆ. ಆಗ ಅದನ್ನು ಕ್ಷಯ ಮಾಸ ಎಂದು ಕರೆದು ಗಣನೆಯಿಂದ ಹೊರಗಿಡಲಾಗುತ್ತದೆ. ಇಂತಹ ಕ್ಷಯ ಮಾಸವು 141 ಸಂವತ್ಸರಗಳಿಗೆ ಒಮ್ಮೆ ಅಥವಾ 19 ಸಂವತ್ಸರಗಳಿಗೆ ಒಮ್ಮೆ ಬರುತ್ತದೆ ಎಂದು ಭಾಸ್ಕರಾಚಾರ್ಯರು ಸೂತ್ರೀಕರಿಸಿದ್ದಾರೆ. ಸದ್ಯಕ್ಕೆ ಈ ವಿದ್ಯ ಮಾನವು ಸಂಭವಿಸುವುದಿಲ್ಲ. ಮುಂದಿನ ಕ್ಷಯ ಮಾಸವು ಬರುವುದು 2088 ನೇ ಇಸವಿಯಲ್ಲಿ ಆ ವರ್ಷ ಪುಷ್ಯ ಮಾಸವು ಕ್ಷಯ ಮಾಸವಾಗಿರುತ್ತದೆ. (ಶಾಶ್ವತ ಸುಖದ ನೆಲೆಯಾದ ಮೋಕ್ಷದ ಸಂಪಾದನೆ ಪ್ರತಿಯೊಬ್ಬ ವಿವೇಕಿಯ ಮುಖ್ಯ ಗುರಿ. ಜೀವನದ ಪ್ರತಿ ಕಾರ್ಯವೂ ಆ ಶ್ರೇಷ್ಠ ಗುರಿಯ ಸಾಧನೆಗೆ ಮೀಸಲಾಗಬೇಕು. ಅದಕ್ಕೆ ಬ್ರಹ್ಮಜ್ಞಾನಪ್ರಾಪ್ತಿಯೊಂದೇ ಪರಮೋಪಾಯ, ಶ್ರದ್ಧಾ ಭಕ್ತಿಗಳಿಂದ ನಡೆಸುವ ಅಧ್ಯಯನ ಜ್ಞಾನಸಾಧನೆಯ ಪ್ರಧಾನ ಮಾರ್ಗ.

ಅಂತಹ ಜ್ಞಾನಕಾರ್ಯವು ಸಿದ್ಧಿಸುವುದು ಪರಿಶುದ್ಧವಾದ ಸದಾಚಾರದಿಂದ ಮಾತ್ರ ಅಂತಹ ಸದಾಚಾರದಲ್ಲಿ ಸ್ನಾನ, ಸಂಧ್ಯಾವಂದನೆ, ದೇವಪೂಜೆ, ಪಂಚಮಹಾ ಯಜ್ಞಗಳು ಮೊದಲಾದ ದೈನಂದಿನ ಕಾರ್ಯಗಳಂತೆ ಸತ್ಯ, ಧರ್ಮಗಳ ಅನುಷ್ಠಾನ, ಗುರು ಹಿರಿಯರಲ್ಲಿ ಗೌರವ, ಸಮಾನರಲ್ಲಿ ಮೈತ್ರಿ, ಕಿರಿಯರಲ್ಲಿ ವಾತ್ಸಲ್ಯ ಸಹ ವಿಹಿತವಾಗಿವೆ. ಮಾಸ ಧರ್ಮಗಳ ಆಚರಣೆ ಸದಾಚಾರದ ಮತ್ತೊಂದು ಅಂಗ.

ಸಾಧನದೇಹ , ಸಾಧನ ದೇಶ ಹಾಗೂ ಸಾಧನ ಕಾಲಗಳ ತ್ರಿವೇಣಿಸಂಗಮ ದಿಂದಲೇ ಜ್ಞಾನಭಕ್ತಿ ವೈರಾಗ್ಯಗಳೆಂಬ ಸಿದ್ಧಿತ್ರಿವೇಣಿಯ ಪ್ರಾಪ್ತಿ, ಅದರಿಂದಾಗಿ ಕಾಲಕ್ಕೆ ಇರುವ ಪ್ರಾಧಾನ್ಯ ಮಹತ್ತ್ವ ಪೂರ್ಣವಾದದ್ದು. ಸಾಧನೆಗೆ ಪರಿಶುದ್ಧ ದೇಶದಂತೆ ಕಾಲವು ವಿಹಿತ. ಮಾಸ ಧರ್ಮಗಳು, ಗ್ರಹಣಾದಿ ಪರ್ವಕಾಲಗಳು ಮೊದಲಾಗಿ ಕಾಲವು ಅನೇಕ ಬಗೆ. ಅಧಿಕ ಮಾಸ ವಿಶಿಷ್ಟವಾದ ಪರ್ವ ಕಾಲಗಳು ಮೊದಲಾಗಿ ಕಾಲವು ಅನೇಕ ಬಗೆ. ಅಧಿಕ ಮಾಸ ವಿಶಿಷ್ಟವಾದ ಪರ್ವ ಕಾಲ.ಇದರ ಮಾಹಾತ್ಮ್ಯ ಪದ್ಮ ಪುರಾಣ, ಬೃಹನ್ನಾರದೀಯ ಪುರಾಣ, ಭವಿಷ್ಯೋತ್ತರ ಪುರಾಣಗಳಲ್ಲಿ ನಿರೂಪಿತವಾಗಿದೆ. ಪದ್ಮಪುರಾಣದ ನಿರೂಪಣೆಯಲ್ಲಿ ಒಟ್ಟು ಇಪ್ಪತ್ತೊಂಭತ್ತು ಅಧ್ಯಾಯಗಳಿದ್ದರೆ. ಬೃಹನ್ನಾರದೀಯ ಪುರಾಣದ ನಿರೂಪಣೆಯಲ್ಲಿ ಒಟ್ಟು ಮೂವತ್ತೊಂದು ಅಧ್ಯಾಯಗಳಿವೆ. ಬಗೆ ಬಗೆಯ ಉಪಾಖ್ಯಾನಗಳೊಂದಿಗೆ ಇದರ ಮಹಾತ್ಮ್ಯ ಇವುಗಳಲ್ಲಿ ನಿರೂಪಿತವಾಗಿದೆ.

ವರ್ಷದ ಮಾಸಗಳಲ್ಲಿ ಮಾಘಮಾಸ ಇತರ ಮಾಸಗಳಿಗಿಂತ ಮಿಗಿಲಾದರೆ ಅದಕ್ಕಿಂತ ವೈಶಾಖ ಮಾಸ ಮಿಗಿಲು. ಚಾತುರ್ಮಾಸ್ಯಕಾಲ ವೈಶಾಖಕ್ಕಿಂತ ಮಿಗಿಲು. ಚಾತುರ್ಮಾಸ್ಯದಲ್ಲೂ ಕಾರ್ತಿಕಮಾಸಕ್ಕೆ ಅಗ್ರಸ್ಥಾನ,ಅಧಿಕಮಾಸ ಕಾರ್ತಿಕಕ್ಕಿಂತ ಮಿಗಿಲು ಎಂಬುದು ವಿಶೇಷ.)

### ಅಪೂಪ ದಾನದ ವೈಶಿಷ್ಟ್ಯ

ಅಪೂಪ ಎನ್ನುವ ಶಬ್ದಕ್ಕೆ ಹಿಟ್ಟಿನಿಂದ ತಯಾರಿಸಿದ ಮೆಲ್ಲಲು ಮೃದುವಾದ ಮತ್ತು ಸವಿಯಲು ಸಿಹಿಯಾದ ಎಂದಷ್ಟೇ ಅರ್ಥ. ಆದರೆ, ಅತಿರಸ ಅಥವಾ ಗಾರಿಗೆ ಎನ್ನುವ ಪದಾರ್ಥವನ್ನು ಇಂದು ಅಪೂಪ ಎನ್ನುವ ಶಬ್ಧದಿಂದ ವ್ಯವಹರಿಸುತ್ತಾರೆ. ವಸ್ತುತಃ, ಯಾವುದೇ ಹಿಟ್ಟಿನಿಂದ ತಯಾರಿಸಿದ ಸಿಹಿಯಾದ ಭಕ್ಷ್ಯವನ್ನು ಅಪೂಪ ಎಂದು ಕರೆಯಬಹುದು.

ಅಪೂಪದಲ್ಲಿ ಎಷ್ಟು ರಂಧ್ರಗಳಿರುತ್ತವೆಯೋ ಅಷ್ಟು ಕಾಲ ಅವನಿಗೆ ವಿಶೇಷಸುಖ ದೊರೆಯುತ್ತದೆ ಎಂದು ಶಾಸ್ತ್ರಗಳಲ್ಲಿ ಹೇಳಿರುವುದರಿಂದ ಅದು ಅತಿರಸವೇ ಎಂದು ವಾದಿಸುವವರಿದ್ದಾರೆ ಅದು ತಪ್ಪು, ಹಿಟ್ಟಿನಿಂದ ಯಾವುದೇ ಪದಾರ್ಥವನ್ನು ಮಾಡಿ ಅದನ್ನು ತುಪ್ಪದಲ್ಲಿ ಅಥವಾ ಎಣ್ಣೆಯಲ್ಲಿ ಕರಿದಾಗ ರಂಧ್ರಗಳುಂಟಾಗಿಯೇ ಉಂಟಾಗುತ್ತವೆ. ಹೀಗಾಗಿ ಅತಿರಸವನ್ನೇ ಅಪೂಪ ಎನ್ನುವ ಶಬ್ದದಿಂದ



### ಡೋಲೋತ್ಸವ:
### (ಕನ್ನಡಿಯ ಮಂಟಪ)

*ಪ್ರತಿದಿನ ಮಧ್ಯಾಹ್ನ 2 ಗಂಟೆಯ ಸಮಯದಲ್ಲಿ ಅರ್ಜಿತವಾಗಿ ನಿರ್ಧರಿಸಿದ ಹಣವನ್ನು ಸಲ್ಲಿಸಿದ ಭಕ್ತರ ಕೋರಿಕೆ ಮೇರೆಗೆ ಉಭಯ ದೇವಿಯರೊಂದಿಗೆ ಶ್ರೀ ಮಲೆಯಪ್ಪ ಸ್ವಾಮಿಯವರಿಗೆ ಮುಕುರ ಮಂಟಪ (ಕನ್ನಡಿಯ ಮಂಟಪ) ದಲ್ಲಿ ಡೋಲೋತ್ಸವ (ಉಯ್ಯಾಲೆ ಉತ್ಸವ) ನಡೆಯುತ್ತದೆ.ಅರ್ಜಿತ ಸೇವಾ ಶುಲ್ಕ ಸಲ್ಲಿಸಿದ ಭಕ್ತರಿಗೋಸ್ಕರ ಮಾತ್ರವೇ ಈ ಸೇವೆ ನಡೆಸಲಾಗುತ್ತದೆ.*

### ಅರ್ಜಿತ ಬ್ರಹ್ಮೋತ್ಸವ

*ಅರ್ಜಿತ ಸೇವಾ ಶುಲ್ಕ ಸಲ್ಲಿಸಿದ ಭಕ್ತರಿಗೋಸ್ಕರ ಆಲಯದ ಮುಂದಿರುವ ವೈಭವ ಮಂಟಪದಲ್ಲಿ ಶ್ರೀದೇವಿ ಭೂದೇವಿ ಸಮೇತವಾಗಿ ಶ್ರೀ ಮಲೆಯಪ್ಪ ಸ್ವಾಮಿಗೆ ಅರ್ಜಿತ ಬ್ರಹ್ಮೋತ್ಸವ ನಡೆಸುತ್ತಾರೆ. ಮುಖ್ಯವಾಗಿ ದೊಡ್ಡ ಶೇಷವಾಹನ, ಗರುಡವಾಹನ, ಹನುಮಂತವಾಹನ - ಮಾತ್ರವೇ ಅರ್ಜಿತ ಬ್ರಹ್ಮೋತ್ಸವದಲ್ಲಿ ಸಂಕ್ಷಿಪ್ತವಾಗಿ ನಿರ್ವಹಿಸುತ್ತಾರೆ.*

*ಕಲ್ಯಾಣೋತ್ಸವ ನಂತರ ಅರ್ಜಿತ ಭಕ್ತರ ಕೋರಿಕೆ ಮೇರೆಗೆ ಮಾತ್ರ ಈ ಬ್ರಹ್ಮೋತ್ಸವ ನಡೆಯುತ್ತದೆ.*

ಕರೆಯಬೇಕು ಎನ್ನುವ ವಾದ ದಲ್ಲಿ ಹುರುಳಿಲ್ಲ,ಅತಿರಸವೂ ಅಪೂಪವೇ. ಅತಿರಸವೊಂದೇ ಅಪೂಪವಲ್ಲ.

ವಸ್ತುತಃ ಅಪೂಪ ಅಂದರೆ ಹಿಟ್ಟಿನಿಂದ ತಯಾರಿಸಿದ ಮೃದು ಸಿಹಿ ಭಕ್ಷ್ಯವನ್ನು ಅಧಿಕಮಾಸದಲ್ಲಿ ವಿಧಾನ ಮಾಡಲು ಬಲವಾದ ಕಾರಣವಿದೆ. ಪುರುಷೋತ್ತಮ ಮಾಸದ ವ್ರತಗಳು ಅತಿಯಾದ ಹಣದ ಖರ್ಚಿನಿಂದ ಮಾಡಬೇಕಾದ ವ್ರತಗಳಲ್ಲ, ಹಣವಿದ್ದವರು ಹಣವನ್ನು ಸಾಧನೆಗಾಗಿ ಬಳಸಲೇಬೇಕು, ಅದರೆ, ಅಶ್ವಮೇಧ ರಾಜಸೂಯಗಳಂತೆ ಕೇವಲ ಹಣವಿದ್ದವರು ಮಾತ್ರ ಅಧಿಕಮಾಸದ ವ್ರತಾನುಷ್ಠಾನು ಮಾಡಬಹುದು ಎಂದಲ್ಲ. ಇದು ಬಡವರೂ, ನಿಷ್ಕಿಂಚನರೂ ಸುಲಭವಾಗಿ ಅನುಷ್ಠಾನ ಮಾಡಬಹುದಾದ ಧರ್ಮ.

## ಆರ್ಜಿತ ವಸಂತೋತ್ಸವ



ನಿರ್ಧರಿಸಿದ ಹಣವನ್ನು ಸಲ್ಲಿಸಿ ಭಕ್ತರಿಗೋಸ್ಕರ ಪ್ರತಿದಿನ ಮಧ್ಯಾಹ್ನ 3 ಗಂಟೆಯ ಸಮಯದಲ್ಲಿ ದೇವಸ್ಥಾನದ ಮುಂದಿರುವ ವೈಭವ ಮಂಟಪದಲ್ಲಿ ಆರ್ಜಿತ ವಸಂತೋತ್ಸವವನ್ನು ನಿರ್ವಹಿಸುತ್ತಾರೆ. ಶ್ರೀದೇವಿ ಭೂದೇವಿಯ ಸಮೇತವಾಗಿ ಮಲೆಯಪ್ಪಸ್ವಾಮಿಗೆ ವಸಂತೋತ್ಸವ ನಡೆಯುತ್ತದೆ.

ಅಕ್ಕಿಯನ್ನು ನೆನೆಸಿ ಕುಟ್ಟಿ ಹಿಟ್ಟನ್ನು ಮಾಡಿ ಆ ಹಿಟ್ಟಿಗೆ ಬೆಲ್ಲ ಕೊಬ್ಬರಿ, ಸ್ವಲ್ಪ ಎಳ್ಳು ಇವಿಷ್ಟನ್ನು ತುಪ್ಪದಲ್ಲಿಯೋ ಎಣ್ಣೆಯಲ್ಲಿಯೋ ಕರಿದರೆ ರುಚಿಯಾದ ಅತಿರಸ ಸಿದ್ಧ. ಅದನ್ನು ತಯಾರಿಸಲಿಕ್ಕೆ ವಿಶೇಷವಾಗಿ ಅಡುಗೆಯವರನ್ನು ಕರೆಸಬೇಕಾಗಿಲ್ಲ. ಬಹಳ ಮೂಲ್ಯದ ಪದಾರ್ಥಗಳನ್ನು ಕೊಂಡು ತರಬೇಕಾಗಿಲ್ಲ, ಮನೆಯಲ್ಲಿಯೇ ನಿತ್ಯ ಬಳಸುವ ಪದಾರ್ಥಗಳಿಂದಲೇ ಅದನ್ನು ನಿರಾಯಾಸವಾಗಿ ತಯಾರಿಸಬಹುದು.

ಹೀಗೆ ಸುಲಭವಾಗಿ ಬಡವರ ಕೈಗೆಟಕುತ್ತದೆ. ಎನ್ನುವುದರಿಂದಲೇ ಇದನ್ನು ಮಾಡಿ ದಾನ ಮಾಡಬೇಕು. ಎಂದು ಶಾಸ್ತ್ರಗಳು ವಿಧಿಸಿದವು. ಒಂದು ಹಿಡಿ ಒಣ ಅವಲಕ್ಕಿಗೇ ಒಲಿದ ಗೋಪಾಲಕೃಷ್ಣ, ಭಕ್ತಿಯಿಂದ ಅಪೂಪವನ್ನು ಮಾಡಿ ದಾನ ಮಾಡಿದರೆ ಒಲಿಯುವುದಿಲ್ಲವೇ? ಅವನ ಕಾರುಣ್ಯದ ಒಂದು ಮುಖವಷ್ಟೇ ಇದು.

ವಸ್ತುತಃ ಅಪೂಪವಷ್ಟೇ ಅಲ್ಲ, ತನ್ನ ಯೋಗ್ಯತೆಗೆ ಏನನ್ನು ಮಾಡಿ ದಾನ ಮಾಡಲು ಶಕ್ಯವೋ ಆ ಎಲ್ಲ ಭಕ್ಷ್ಯಗಳನ್ನು ಮಾಡಿ ಬ್ರಾಹ್ಮಣರಿಗೆ ದಾನ ಮಾಡಬೇಕು. ಭಗವತ್ ತತ್ವವನ್ನು ತಿಳಿದ ಜನರಿಗೆ ಅದನ್ನು ಸಮರ್ಪಿಸಿದಾಗ, ಅವರು ನಮ್ಮ ಮೇಲಿನ ಪ್ರೇಮದಿಂದ ಅದನ್ನು ಮೆದ್ದರೆ ಸ್ವಯಂ ಭಗವಂತ ಅವರಲ್ಲಿ ನಿಂತು ತಾನುಂಡು ನಮ್ಮನ್ನು ಅನುಗ್ರಹಿಸುತ್ತಾನೆ.

ಇನ್ನು ಯಾವ ಪದಾರ್ಥವನ್ನೂ ಮಾಡಿ ನೀಡುವ ಶಕ್ತಿಯಿಲ್ಲ ಎಂದರೆ, ಚಿಂತೆಯಿಲ್ಲ. ಪದ್ಮಾಸನ ಹಾಕಿ ಕಣ್ಣು ಮುಚ್ಚಿ ಕುಳಿತು ಪರಮಾತ್ಮನ ಮೂವತ್ಮೂರು ರೂಪಗಳನ್ನು ಮನಸ್ಸಿನಲ್ಲಿ ಧೇನಿಸಿ,ಅದ್ಭುತವಾದ ಭಕ್ಷ್ಯಗಳನ್ನು ಮನಸ್ಸಿನಲ್ಲಿಯೇ ನಿರ್ಮಿಸಿ, ಎಲೆಗೆ ಬಡಿಸಿದಂತೆ ಭಾವಿಸಿ, 'ಉಣ್ಣುಸ್ವಾಮಿ!" ಎಂದರೆ ಪರಮಾತ್ಮ ಬ್ರಾಹ್ಮಣರಲ್ಲಿ ನಿಂತು ಸ್ವೀಕರಿಸಿದ್ಧಿಕ್ಕಿಂತಲೂ ಹೆಚ್ಚಾಗಿ ಪ್ರೀತನಾಗಿ ಸ್ವೀಕರಿಸುತ್ತಾನೆ. ಇಷ್ಟೇ ಈ ರೀತಿಯಾಗಿ ಮಾನಸ ಪೂಜೆಯನ್ನು ಮಾಡಲು ಖಂಡುಗ ಖಂಡುಗದಷ್ಟು ಭಕ್ತಿ ನಮ್ಮಲ್ಲಿರಬೇಕು.

ಪ್ರತಿಯೊಂದು ಅಪೂಪದಲ್ಲಿ ವಿಷ್ಣು, ಜಿಷ್ಣು ಮೊದಲಾದ ಭಗವದ್ರೂಪಗಳನ್ನು ಚಿಂತಿಸಿ ಒಟ್ಟು ಮೂವತ್ಮೂರು ಅಪೂಪಗಳನ್ನು ಅಧ್ಯಯನ ಶೀಲರಾದ ಸದ್ಬ್ರಾಹ್ಮಣರಿಗೆ ಪ್ರತಿನಿತ್ಯವೂ ಸಮೇತ ಕಂಚಿನ ಪಾತ್ರೆಯಲ್ಲಿರಿಸಿ ದಾನ ಮಾಡುವುದು ಈ ವ್ರತದ ಮುಖ್ಯ ಅಂಶ. ಅಂತಹ ದಾನವನ್ನು ಪೃಥ್ವಿ ದಾನ ಸಮವೆಂದೂ, ಸಕಲ ಪುರಾಷಾರ್ಥ ಸಾಧಕವೆಂದೂ, ತತ್ತ್ವಜ್ಞಾನ ಪ್ರಾಪಕವೆಂದೂ ಪುರಾಣಗಳು ಪ್ರಶಂಸಿಸಿವೆ. ಪ್ರತಿನಿತ್ಯ ಮೂವತ್ಮೂರು ಬ್ರಾಹ್ಮಣದಂಪತಿಗಳ ಭೋಜನ ಮೊದಲಾಗಿ ಅನೇಕ ರೀತಿಯಲ್ಲಿ ಬ್ರಾಹ್ಮಣ ಭೋಜನವೂ ಇದರ ಮತ್ತೊಂದು ಮುಖ್ಯ ವಿಧಿಯಾಗಿದೆ.

ಸರ್ವೋತ್ತಮವಾದ ದಾನ ಸಚ್ಛಾಸ್ತ್ರಗಳ ಗ್ರಂಥಗಳ ದಾನ.

ಪರಮಾತ್ಮ ಗರುಡನಿಗೆ ಉಪದೇಶಿಸುವ ಸಂದರ್ಭದಲ್ಲಿ ತತ್ತ್ವಜ್ಞಾನವನ್ನು ಪಡೆಯುವ ಮಾರ್ಗಗಳನ್ನು ಉಪದೇಶಿಸುವಾಗ, ಪುಸ್ತಕದಾನ ತತ್ತ್ವಜ್ಞಾನವನ್ನು ಪಡೆಯಲು ಶ್ರೇಷ್ಠವಾದ ಮಾರ್ಗ ಎಂದು ತಿಳಿಸುತ್ತಾನೆ. ವೇದಗಳ ಪುಸ್ತಕವನ್ನು ದಾನ

ಮಾಡಿದರೆ ವೈದಿಕವಾದ ಜ್ಞಾನವನ್ನು ಪಡೆಯುತ್ತಾನೆ ಎಂದು, ಪುರುಷೋತ್ತಮ ಮಾಸದಲ್ಲಿ ವಿಶೇಷವಾಗಿ ಗ್ರಂಥದಾನವನ್ನು ಭಗವಂತ ವಿಧಿಸುತ್ತಾನೆ. ಅದರಲ್ಲಿಯೂ ಶ್ರೀಮದ್‌ಭಾಗವತದ ದಾನವನ್ನು, ಶ್ರೀಮದ್‌ಭಾಗವತದ ಪುಸ್ತಕವನ್ನು ವಿಷ್ಣು ಭಕ್ತನಾದ ಬ್ರಾಹ್ಮಣನಿಗೆ ದಾನವನ್ನು ನೀಡಬೇಕು. ನೀಡುವ ಶಕ್ತಿಯಿದ್ದಾಗ ಸರ್ವಥಾ ವಿಲಂಬ ಮಾಡಬಾರದು. ನೀರ ಮೇಲಿನ ಗುಳ್ಳೆಯಲ್ಲವೇ ಮನುಷ್ಯನ ಆಯುಷ್ಯ?

ಕಾರಣ, ಶ್ರೀಮದ್ ಭಾಗವತ ಪರಮಾತ್ಮನ ಸಾಕ್ಷಾತ್ ಸನ್ನಿಧಾನವನ್ನು ಹೊತ್ತು ಪ್ರತಿಮೆ. ಶ್ರೀಮದ್ ಭಾಗವತವನ್ನು ಅಧ್ಯಯನ ಮಾಡುವ ಸಾಮರ್ಥ್ಯವುಳ್ಳ ಪಂಡಿತನಾದ, ವಿಷ್ಣುಭಕ್ತನಾದ ಬ್ರಾಹ್ಮಣನಿಗೆ ಅದನ್ನು ದಾನ ನೀಡಿದವನ ಕೋಟಿ ಜನ್ಮಗಳು ಉದ್ಧೃತವಾಗುತ್ತವೆ. ಅವನ ಕುಲವೇ ಪಾವನವಾಗಿ ಬಿಡುತ್ತದೆ. ಯೋಗಿದುರ್ಲಭವಾದ ಮೋಕ್ಷವನ್ನು ಪಡೆಯುವ ಮಾರ್ಗ ಗ್ರಂಥದಾನ. ಏಕೆಂದರೆ, ಗ್ರಂಥದಾನದ ಫಲವಾಗಿ ಮನುಷ್ಯ ಶಾಸ್ತ್ರಜ್ಞಾನವನ್ನು ಪಡೆಯುತ್ತಾನೆ. ಜ್ಞಾನದಿಂದ ಭಕ್ತಿ ಅಭಿವೃದ್ಧಿಯಾಗುತ್ತದೆ. ಕ್ರಮೇಣ ಅದು ಮೋಕ್ಷ ಸಾಧನವಾಗುತ್ತದೆ.

ಈ ಕಾರಣದಿಂದಲೇ, ಸಾವಿರ ಕನ್ಯಾದಾನಗಳೂ, ನೂರು ಅಶ್ವಮೇಧಗಳೂ, ಚೆನ್ನಾಗಿ ಬೆಳೆ ಬರುವ ಹೊಲಗಳ ದಾನವೂ, ಶಾಸ್ತ್ರೋಕ್ತವಾದ ಅಷ್ಟ ಮಹಾದಾನಗಳೂ ಸಹ ಶ್ರೀಮದ್ ಭಾಗವತದಾನದ, ಅರ್ಥಾತ್ ಸಚ್ಛಾಸ್ತ್ರಗಳ ಗ್ರಂಥದ ದಾನದ ಹದಿನಾರನೆಯ ಒಂದಂಶಕ್ಕೂ ಸಮವಲ್ಲ.

ಕಾರಣ ಅವೆಲ್ಲ ದಾನಗಳಿಂದ ಜ್ಞಾನಪ್ರತಿಬಂಧಕವಾದ ಪಾಪಗಳ ನಿವೃತ್ತಿಗಾಗಿ ಮನುಷ್ಯ ಏನು ಗಂಗಾದಿಸ್ನಾನ ಮುಂತಾದ ಕರ್ಮಾಚರಣೆಗಳನ್ನು ಮಾಡಬೇಕು ಆ ಗಂಗಾದಿ ಸ್ನಾನಗಳ ಫಲವನ್ನು ನೀಡುತ್ತವೆ. ಆದರೆ, ಗ್ರಂಥದಾನ ಸ್ವಯಂ ಜ್ಞಾನಪ್ರತಿಬಂಧಕವಾದ ಪಾಪಗಳನ್ನು ಪರಿಹರಿಸಿ ಜ್ಞಾನವನ್ನು ನೀಡುತ್ತವೆ.

ಆದ್ದರಿಂದ ಪ್ರಯತ್ನಪೂರ್ವಕವಾಗಿ, ಶಾಸ್ತ್ರಾಧ್ಯಯನ ಶೀಲನಾದ ಬ್ರಾಹ್ಮಣನನ್ನು ಗುರುತಿಸಿಕೊಂಡು ಆತನಿಗೆ ಶಾಸ್ತ್ರ ಗ್ರಂಥಗಳನ್ನು ದಾನವನ್ನು ನೀಡಬೇಕು. ವಿದ್ಯಾಶೀಲನಾದ ಆ ಬ್ರಾಹ್ಮಣನವನ್ನು ವಸ್ತ್ರಾದಿಗಳಿಂದ ಗೌರವಿಸಿ, ಉತ್ತಮ ಆಸನದಲ್ಲಿ ಕುಳ್ಳಿರಿಸಿ ಭಕ್ತಿಯಿಂದ ಪುಸ್ತಕಗಳನ್ನು ಪ್ರದಾನ ಮಾಡಬೇಕು.

ಜ್ಞಾನಸ್ವರೂಪನಾದ ವೇದವ್ಯಾಸದೇವರು ಅಥವಾ ಸರ್ವಜ್ಞರಾದ ಶ್ರೀಮದಾಚಾರ್ಯರು ಅರ್ಥನಿರ್ಣಯ ಮಾಡಬೇಕಾದ ಶಾಸ್ತ್ರಗಳ ಒಂದಾದಷ್ಟು ಪುರಾಣಗಳ ಮಧ್ಯದಲ್ಲಿ ಹಿರಿದಾದದ್ದು ಶ್ರೀಮದ್‌ಭಾಗವತ. ಪಂಚರಾತ್ರ ಮುಂತಾದ ಗ್ರಂಥಗಳ ಶ್ರೀಮದ್‌ಭಾಗವತಕ್ಕಿಂತಲೂ ಶ್ರೇಷ್ಠ ಗ್ರಂಥಗಳು. ಅವುಗಳಿಗಿಂತಲೂ ಶ್ರೇಷ್ಠವಾದ ಬ್ರಹ್ಮತರ್ಕ, ಮೂಲ ರಾಮಾಯಣ ಮುಂತಾದ ಸಮಸ್ತದ ಗ್ರಂಥಗಳಿಗಿಂತಲೂ ಶ್ರೇಷ್ಠವಾದ ವಾಙ್ಮಯ, ನಾಲ್ಕು ವೇದಗಳು, ಶ್ರೀಮನ್ ಮಹಾಭಾರತ ಈ ಸಮಸ್ತ ನಿರ್ಣೇಯಗ್ರಂಥಗಳಲ್ಲಿ ಸರ್ವೋತ್ತಮವಾದದ್ದು. ಅದಕ್ಕೆ ಸಮವಾದ ಗ್ರಂಥ ಮತ್ತೊಂದಿಲ್ಲ. ಬ್ರಹ್ಮ ಸೂತ್ರಗಳು ಈ ಎಲ್ಲ ನಿರ್ಣೇಯ ಗ್ರಂಥಗಳನ್ನು ನಿರ್ಣಯ ಮಾಡುವ ಸರ್ವ ಸರ್ವೋತ್ತಮ ಗ್ರಂಥ. ಅದಕ್ಕೆ ಸಮನಾದ ಗ್ರಂಥವೂ ಇಲ್ಲ, ಉತ್ತಮವಾದ ಗ್ರಂಥವೂ ಇಲ್ಲ. ಹೀಗಾಗಿ ಜ್ಞಾನಿಗಳಾದ, ಅಧ್ಯಯನಶೀಲರಾದ ಬ್ರಾಹ್ಮಣರನ್ನು ಸಂಪರ್ಕಿಸಿ ಅವರಿಗೆ ಯಾವ ಗ್ರಂಥದ ಅವಶ್ಯಕತೆ ಇದೆ ಎನ್ನುವುದನ್ನು ತಿಳಿಸಿ ಕೊಂಡು ಆ ಗ್ರಂಥವನ್ನು ತಂದು ಭಕ್ತಿ ಪುರಸ್ಸರವಾಗಿ ದಾನ ನೀಡಬೇಕು.

ವಸ್ತುತಃ ವಿದ್ಯಾಶೀಲನಾದ ಪಂಡಿತನಾದ ಬ್ರಾಹ್ಮಣನಿಗೆ ಗ್ರಂಥದಾನವನ್ನು ಮಾಡುವುದು ಶ್ರೇಯಸ್ಕರ ಎಂದು ಶಾಸ್ತ್ರ ಹೇಳುತ್ತದೆ. ಕಾರಣ, ಅವರಿಗೆ ನೀಡಿದಾಗ ಮಾತ್ರ ದಾನ ಪೂರ್ಣ ಫಲ ಪ್ರದವಾಗುತ್ತದೆ. ಸಂಶಯವಿಲ್ಲ. ನಿರಂತರ ಅಧ್ಯಯನದಲ್ಲಿ ಆಸಕ್ತನಾಗಿರುವ ವಿದ್ವಾಂಸರನ್ನು ಹುಡುಕಿಕೊಂಡು ಹೋಗಿ ದಾನ ಮಾಡಿದರಂತೂ ಪುಣ್ಯ ಅತುಲ.

ಅದರ ಬದಲು, ವಿದ್ಯಾಪೀಠಗಳ ಅಧ್ಯಾಪಕರನ್ನು, ಅದರಲ್ಲೂ, ದೂರದೂರುಗಳಲ್ಲಿ ತಮ್ಮ ಮನೆಯನ್ನೇ ಗುರುಕುಲವನ್ನಾಗಿ ಮಾಡಿಕೊಂಡು ಪಾಠಶಾಲೆಯನ್ನು ನಡೆಸುತ್ತಿರುವ ವಿದ್ವಾಂಸರನ್ನು ಸಂಪರ್ಕಿಸಿ, ಬುದ್ಧಿವಂತರಾದ, ಕಲಿಯಲು ಆಸಕ್ತರಾಗಿರುವ, ವಿದ್ಯಾರ್ಥಿಗಳು ಯಾರಿದ್ದಾರೆ ಎಂದು ಕೇಳಿಕೊಳ್ಳಿ. ಇವತ್ತು ನೂರಕ್ಕೆ ತೊಂಬತ್ತೊಂಬತ್ತು ಜನ ವಿದ್ಯಾರ್ಥಿಗಳಿಗೆ ಹಣ ಕೊಟ್ಟು ಪುಸ್ತಕವನ್ನು ಕೊಂಡುಕೊಳ್ಳುವ ಶಕ್ತಿಯಿರುವುದಿಲ್ಲ. ಆದರೆ, ಓದುವ ಉತ್ಸಾಹ ಅತ್ಯಧಿಕವಾಗಿರುತ್ತದೆ. ಅವರಿಗೆ ಆ ಸಮಯದಲ್ಲಿ ಸರಿಯಾದ ಪುಸ್ತಕ ದೊರೆತರೆ ಇನ್ನೂ ಹೆಚ್ಚು ಅಧ್ಯಯನವನ್ನು ಮಾಡಲು ಸಾಧ್ಯವಾಗುತ್ತದೆ. ಕೊಟ್ಟ ದಾನ ಸಾರ್ಥಕವಾಗುತ್ತದೆ. ಓದು ಮರೆತ ಪಂಡಿತರ ಮನೆಯ ಕಪಾಟಿನಲ್ಲಿ ಭದ್ರವಾಗಿರುವ ಪುಸ್ತಕಕ್ಕಿಂತ, ಓದುವ ವಿದ್ಯಾರ್ಥಿಯ ಕೈಯಲ್ಲಿ ಹರಿದು ಹೋಗುವ ಪುಸ್ತಕಕ್ಕೇ ಬೆಲೆ ಹೆಚ್ಚು.

ಏಕಾದಶಿಯ ದಿನ ಅನ್ನದಾನ ಮಾಡಬಾರದು, ಬಯಲಿನಲ್ಲಿ ನಿಂತು ಕನ್ಯಾದಾನವನ್ನು ಮಾಡಬಾರದು ಎಂದೆಲ್ಲ ನಿಯಮವಿರುವ ಹಾಗೆ ಗ್ರಂಥದಾನಕ್ಕೆ ವಿಶೇಷವಾದ ಕಾಲ ದೇಶಗಳ ನಿರ್ಬಂಧವಿಲ್ಲ. ಅಧಿಕಮಾಸದಲ್ಲಿ ಮಾಡಿದಾಗ ಹೆಚ್ಚಿನ ಫಲವೇ ಹೊರತು, ವರ್ಷದ ಮೂನ್ನೂರ ಅರವತ್ತು ದಿವಸಗಳೂ ಅದನ್ನು ದಾನ ಮಾಡಬಹುದು.



# ಶ್ರೀ ಮಧ್ವಪತಿ ವಿಠಲ ದಾಸರು (ಚಿಕ್ಕೇರಹಳ್ಳಿ ತಿಮ್ಮಣ್ಣ ದಾಸರು)



– ಡಾ॥ ರಾಮಚಂದ್ರದಾಸ್ ಸಿ.ಜೆ.

ಹರಿದಾಸ ಸಾಹಿತ್ಯದ ದ್ವಿತೀಯ ಘಟ್ಟದಲ್ಲಿ ಪ್ರಖ್ಯಾತರಾದ ಶ್ರೀ ಮೋಹನದಾಸರ ಶಿಷ್ಯ ಸಂತತಿಯನ್ನು ಬೆಳೆಸಿದವರು ಶ್ರೀಮಧ್ವಪತಿ ವಿಠಲದಾಸರು. ಪ್ರಾಣದೇವರ ದೇವಸ್ಥಾನಗಳು, ಯತಿಗಳ ವೃಂದಾವನಗಳು, ತಿರುಪತಿ, ಉಡುಪಿ, ಪಂಢರಾಪುರ ಇತ್ಯಾದಿಗಳನ್ನು ಕೇಂದ್ರವಾಗಿಟ್ಟುಕೊಂಡು ಬೆಳೆಯುತ್ತಿದ್ದ ಹರಿದಾಸ ಸಾಹಿತ್ಯಕ್ಕೆ ಮಾಧ್ವಮಠಗಳು ಪ್ರೇರಣೆ ಮತ್ತು ಪೋಷಣಾ ಕೇಂದ್ರಗಳಾಗಿದ್ದವು. ಇದಕ್ಕೇ ಪೂರಕವಾಗಿ ಆಯಾ ಸಂಸ್ಥಾನದ ಅರಸರು, ನವಾಬರು ಸುಬೇದಾರರು ಪಾಳೆಗಾರರು, ಜೋಡಿದಾರರು ಮೊದಲಾದ ಸಾತ್ವಿಕ ಸ್ವಭಾವದ ರಾಜಸ ವೃತ್ತಿಯ ಉದಾರ ಚರಿತ ಹಿಂದೂ ಕುಟುಂಬಗಳು ಹರಿದಾಸರಿಗೆ ನೆಲೆ ಮತ್ತು ಸಾಹಿತ್ಯ ಸೃಷ್ಟಿಗೆ ಅಗತ್ಯ ಸೆಲೆಯಾಗಿದ್ದವು.

ಇಂತಹ ಪಾಳೇಗಾರರಲ್ಲಿ ಈಗಿನ ಬಳ್ಳಾರಿ ಜಿಲ್ಲೆಯ, ಕೂಡ್ಲಿಗಿ ತಾಲೂಕಿನ ಪಾಳೆ ಗಾರನಾದ ಶ್ರೀ ಬೊಮ್ಮಂತರಾಜನು ಒಬ್ಬನು. ಈತನ ದಾನ ಶೌಂಢತೆ, ಅಭಯ ಮತ್ತು ಸಹಾಯ ಹಸ್ತದ ಪರಿಣಾಮವಾಗಿ, ಶ್ರೀ ಹರಿವಾಯು ಗುರುಗಳ ಸೇವೆಯನ್ನು ನವವಿಧ ಭಕ್ತಿ ಮಾರ್ಗದಿಂದ ಗೈದವರೇ, ಈಗಿನ ಚಿತ್ರದುರ್ಗ ಜಿಲ್ಲೆಯ, ಮೊಳಕಾಲ್ಮೂರು ತಾಲೂಕಿನ ಚಿಕೇರಹಳ್ಳಿಯ ಜೋಡೀದಾರ ವಂಶೋದ್ಭವರಾದ "ಶ್ರೀ ಮಧ್ವಪತಿ ವಿಠಲದಾಸರು (ಚಿಕೇರಹಳ್ಳಿ ತಿಮ್ಮಣ್ಣದಾಸರು, ಕ್ರಿ.ಶ. 1753 - 1833) ಸುಮಾರು ಎಂಭತ್ತು ವರ್ಷಗಳ ಪರ್ಯಂತರ ಚಿರಕಾಲ ಬಾಳಿ ತಮ್ಮ ಭಕ್ತಿ ಸಾಹಿತ್ಯದ ಮುಖಾಂತರ ಸುತ್ತ ಮುತ್ತಲಿನ ಪರಿಸರವನ್ನು ಜ್ಞಾನ, ಭಕ್ತಿ ಮತ್ತು ವೈರಾಗ್ಯಕ್ಕೆ ಸಿದ್ಧಗೊಳಿಸಿದ ಮಹಾನುಭಾವರು.

ಹರಿದಾಸರ ಜೀವನದಲ್ಲಿನ ಪ್ರಮುಖವಾದ ಒಂದೊಂದು ಘಟನೆಯೇ ಅವರ ಜೀವನದ ಪರಿವರ್ತನೆಗೆ ಕಾರಣವಾಗಿರುತ್ತದೆ. ಹಾಗೆಯೇ ಇವರ ಚಿಕ್ಕಪ್ಪನ ಕುಟುಂಬದವರ ತಾತ್ಸಾರ ಮತ್ತು ಅಪಮಾನವೇ ಇವರ ಜೀವನದ ಪರಿವರ್ತನೆಗೆ ಮುಖ್ಯ ಕಾರಣವಾಗಿ "ಆದದ್ದೆಲ್ಲ ಒಳಿತೇ ಆಯಿತು, ಶ್ರೀಧರ ನಂಘ್ರಿಯ ಸೇವಿಪುದಕೆ, ಸಾಧನ ಸಂಪತ್ತಾಯಿತು" ಎಂಬಂತೆ, ಇವರು ತಮ್ಮ ತಂದೆಯಾದ ಕೃಷ್ಣಪ್ಪನವರು ಮತ್ತು ತಾಯಿಯೊಡನೆ, ಶ್ರೀ ವ್ಯಾಸರಾಜ ಮಠದ ಪೀಠಿಗೆಯಲ್ಲಿ ಬಂದ ಭಾಷ್ಯದೀಪಿಕಾ ಚಾರ್ಯರೆಂದು ಪ್ರಸಿದ್ಧರಾದ ಶ್ರೀ ಜಗನ್ನಾಥ ತೀರ್ಥರಲ್ಲಿ ಆಶ್ರಯ ಪಡೆದು, ಶಾಸ್ತ್ರಾಭ್ಯಾಸದ ನಂತರ ಶ್ರೀ ಮಠದ ಆಶ್ರಯದಲ್ಲಿ ಇವರಿಗೆ ಸತ್ಕುಲ ಪ್ರಸೂತಳಾದ ವೆಂಕಮ್ಮನೊಡನೆ ವಿವಾಹವು ಜರುಗಿತು. ಕಾಲಾಂತರದಲ್ಲಿ ಇಬ್ಬರು ಗಂಡು ಮಕ್ಕಳಾದರು.

"ಗುರುವಿನ ಗುಲಾಮನಾಗುವ ತನಕ, ದೊರೆಯದಣ್ಣ ಮುಕುತಿ.." ಎಂಬ ದಾಸರ ಉಕ್ತಿಯಂತೆ ಇವರ ಗುರು ಸೇವಾ ತತ್ಪರತೆಗೆ ಫಲರೂಪವಾಗಿ, " ಚಿಕ್ಕೇರ ಹಳ್ಳಿಯಲ್ಲಿರುವ ಜನಮೇಜಯ ಪ್ರತಿಷ್ಠಿತ, ನರಹರಿ ತೀರ್ಥರಿಂದ ಪುನರ್ ಪ್ರತಿಷ್ಠಾಪಿತವಾದ ಶ್ರೀ ಮುಖ್ಯಪ್ರಾಣನ ಸೇವೆಗೈಯ್ಯುವಂತೆ ಸ್ವಪ್ನ ಸೂಚಿತವಾಗಿ ಚಿಕ್ಕೇರಹಳ್ಳಿಗೆ ಕುಟುಂಬ ಸಮೇತರಾಗಿ ಬಂದು, ಅಲ್ಲಿನ ಸುತ್ತ ಮುತ್ತಲ ಗ್ರಾಮದ ಬ್ರಾಹ್ಮಣರ ಸಹಾಯದಿಂದ, ಮುಖ್ಯಪ್ರಾಣನ ಪ್ರತೀಕವನ್ನು ಶೋಧಿಸಿ, ತಾತ್ಕಾಲಿಕ ಮಂಟಪ ನಿರ್ಮಿಸಿ ನಿತ್ಯದಲ್ಲಿ ತಂತ್ರಸಾರೋಕ್ತವಾಗಿ ಪೂಜೆಯನ್ನು ಪ್ರಾರಂಭಿಸಿದರು.

"ಅನನ್ಯಾಶ್ಚಿಂತ ಯಂತೋಮಾಂ... ಯೋಗಕ್ಷೇಮಮ್‌ವಹಾಮ್ಯಹಂ" ಎಂಬ ಭಗವಂತನ ಸಂಕಲ್ಪಾನುಸಾರ, ಗುಡೇಕೋಟೆಯ ಪಾಳೇಗಾರನಾದ ಬೊಮ್ಮಂತರಾಜನು ಬೇಟೆಯ ನಿಮಿತ್ತ ಸಂಚರಿಸುತ್ತಾ ಹಸಿವು, ಬಾಯಾರಿಕೆಯಿಂದ ಬಳಲಿ, ಅಕಸ್ಮಾತ್ತಾಗಿ ತಿಮ್ಮಣ್ಣದಾಸರು ಪೂಜಿಸುತ್ತಿರುವ ಸಮಯಕ್ಕೆ ಅಲ್ಲಿಗೆ ಬಂದು ನೀರು ಆಹಾರಕ್ಕಾಗಿ ಪ್ರಾರ್ಥಿಸಿದನು. ಕರುಣಾಮಯಿಗಳಾದ ದಾಸರು ಆತನಿಗೆ ಉಪಚರಿಸಿ, ಅನ್ನಾಹಾರಾದಿಗಳನಿತ್ತರು. ಇದರಿಂದ ಸುಪ್ರೀತನಾದ ಪಾಳೇಗಾರನು ಎಲ್ಲ ವಿಷಯಗಳನ್ನು ದಾಸರಿಂದ ಅರಿತು, ಮುಖ್ಯಪ್ರಾಣ ದೇವರಿಗೆ ನಿತ್ಯ ಪೂಜೆಗಾಗಿ ಅನುಕೂಲವಾಗಲು, ಚಿಕ್ಕೇರಹಳ್ಳಿ ಗ್ರಾಮವನ್ನು ದಾಸರಿಗೆ ಕೃಷ್ಣಾರ್ಪಣ ಪೂರ್ವಕವಾಗಿ ದಾನ ಮಾಡಿದನು. ಕಾಲ ಕ್ರಮದಲ್ಲಿ, ಮುಖ್ಯ ಪ್ರಾಣನಿಗೆ ಭವ್ಯವಾದ ದೇಗುಲವನ್ನು ನಿರ್ಮಾಣ ಮಾಡಿದರು. (ಇಂದಿಗೂ ಆ ದೇಗುಲ ಮತ್ತು ಇದಕ್ಕೆ ಸಂಬಂಧಿಸಿದ ಉಳಿದ ದೇಗುಲಗಳು ದಾಸರ ವಂಶಸ್ಥರಿಗೆ ಸೇರಿ, ಪೂಜಾ ಕೈಂಕರ್ಯಗಳು ನಡೆಯುತ್ತಿವೆ.)

ಶ್ರೀ ಮದಾಚಾರ್ಯರು ಪ್ರಕಾಶ ಸಂಹಿತೆಯಲ್ಲಿ ಹೇಳಿದಂತೆ, ಸಮಯ ಪಕ್ವವಾಗಿ, ಶ್ರೀ ವಿಜಯದಾಸರ ಪ್ರೇರಣೆಯಂತೆ, ಶ್ರೀ ಮೋಹನದಾಸರು ಚಿಪ್ಪಗಿರಿ

ಕ್ಷೇತ್ರದಲ್ಲಿ ತಿಮ್ಮಣ್ಣದಾಸರಿಗೆ "ಮಧ್ವಪತಿ ವಿಠಲ" ಎಂಬ ಅಂಕಿತ ಪ್ರದಾನ ಮಾಡಿ ಅನುಗ್ರಹಿಸಿದ ಕ್ಷಣದಿಂದ ಅವರ ಚರ್ಯೆಯೇ ಬದಲಾಗಿ ಬ್ರಹ್ಮವರ್ಚಸ್ಸಿನಿಂದ ಕಂಗೊಳಿಸಿದರು. ದಾಸರು ಮುಖ್ಯ ಪ್ರಾಣದೇವರ ಪೂಜೆಯನ್ನು ಭಕ್ತಿ ಪಾರವಶ್ಯ ದಿಂದ ಮಾಡುತ್ತಿದ್ದರೆ, ಆ ದೇವನು ಅನುಗ್ರಹಿಸುತ್ತಾ ಚೆಲ್ಲಾಟ ವಾಡುತ್ತಾ ಪರೀಕ್ಷಿಸುತ್ತಿದ್ದುದು,ಅತಿಮಾನುಷ ಘಟನೆಗೆ ಸಾಕ್ಷಿಯಾಗಿದೆ. ದೇವಾಲಯದಲ್ಲಿದ್ದ ಆಭರಣ ಇತ್ಯಾದಿಗಳ ದರೋಡೆಗೆ ಬಂದಂಥ ಕಳ್ಳರನ್ನು, ಆಜಾನುಬಾಹು ಮರ್ಕಟ ಗಳು ಹೊಡೆದು, ಬಡಿದು ದಾಸರ ಮನೆ ಮುಂದೆ ತಂದು ನಿಲ್ಲಿಸಿ ದವು.ಆಶ್ಚರ್ಯವೆಂದರೆ ಚಿಕ್ಕೇರಹಳ್ಳಿಯಲ್ಲಿ ಕೋತಿಗಳೇ ಇರಲಿಲ್ಲ. ದಾಸರು ಮನೆಯಿಂದ ಹೊರಗೆ ಬಂದು ನೋಡಿದಾಗ, ಮುಖ್ಯ ಪ್ರಾಣ ದೇವರ ಸೈನ್ಯದಲ್ಲಿದ್ದ ದೇವತೆಗಳ ದರ್ಶನದಿಂದ ಪುಳಕಾಂಕಿತರಾಗಿ ಸಾಷ್ಟಾಂಗ ನಮಸ್ಕಾರ ಮಾಡಿದರು. ದರೋಡೆಕೋರರ ಪ್ರಾರ್ಥನೆಯಂತೆ, ದಾಸರ ಕೃಪಾದೃಷ್ಟಿ ಯಿಂದ ಇಂದಿಗೂ ಆ ವಂಶೀಕರು,ದೇವಸ್ಥಾನದ ಸೇವಾದಿ ಕೈಂಕರ್ಯಗಳನ್ನು ಅನೂಚನವಾಗಿ ಮಾಡಿಕೊಂಡು ಬರು ತ್ತಿದ್ದಾರೆ.

ಮೈಸೂರಿನ ಅರಮನೆಯಲ್ಲಿ ಪ್ರತಿಷ್ಠಾಪಿತವಾಗಬೇಕಿದ್ದ ಶ್ರೀ ರಾಮ, ಸೀತಾ, ಲಕ್ಷ್ಮಣ, ಹನುಮಂತ ಗರುಡ, ಮತ್ತು ಜಯ, ವಿಜಯರ ವಿಗ್ರಹಗಳು, ಏಕಕಾಲದಲ್ಲಿ, ಶ್ರೀ ಮೋಹನದಾಸರು, ಮಧ್ವಪತಿ ವಿಠಲದಾಸರು, ಮೈಸೂರರಸರು, ಮತ್ತು ಗುಡೇ ಕೋಟೆ ಪಾಳೆಗಾರರಿಗೆ ಸ್ವಪ್ನ ಸೂಚಿತವಾಗಿ ಚಿಕ್ಕೇರ ಹಳ್ಳಿಯಲ್ಲಿ ಶ್ರೀ ಮೋಹನದಾಸರಿಂದ ಪ್ರತಿಷ್ಠಾಪಿತಗೊಂಡವು.ಜೊತೆಗೆ ಶ್ರೀ ವಿಜಯದಾಸರು ಕಾಶಿಯಿಂದ ತಂದಂತಹ ಪುಟ್ಟದಾದ ಬೂದು ಬಣ್ಣದ ರುದ್ರ ದೇವರ ಲಿಂಗವನ್ನು ಸಹ ಪ್ರತಿಷ್ಠಾಪಿಸ ಲಾಗಿದೆ. ಶ್ರೀರಾಮ ದೇವರ ಬ್ರಹ್ಮೋತ್ಸವವು ಚೈತ್ರ ಶುದ್ಧ ನವಮಿ ಯಂದು ಜರುಗುತ್ತಿದೆ.

ಕಾಲಗತಿಸಿದಂತೆ ದಾಸರ ತಂದೆ ಕೃಷ್ಣದಾಸರು ಪರಂ ಧಾಮವನ್ನೈದಿದರು. ಸ್ವಲ್ಪ ಕಾಲದ ನಂತರ ಪತ್ನಿ ವೆಂಕಮ್ಮ ನವರೂ ಸಹ ಪತ್ಯಂತರ್ಗತ ಭಗವದ್ರೂಪೋಪಾಸನೆಗೈ ಯ್ಯುತ್ತಾ ಶ್ರೀ ಹರಿಯ ಪುರಕ್ಕೆ ಪ್ರಯಾಣಿಸಿದರು. ಅಂದಿನಿಂದ ಅವಿಧವಾನವಮಿಯಂದು ಮುತ್ತೈದೆಯರಿಗೆ ಅವರ ಹೆಸರಿನಲ್ಲಿ ಬಾಗಿನಗಳನ್ನು ಕೊಡುವ ಸಂಪ್ರದಾಯ ನಡೆದು ಬಂದಿದೆ.

ಒಮ್ಮೆ ಪರಿಸ್ಥಿತಿಯ ಒತ್ತಡಗಳಿಂದ ವಾರ್ಷಿಕವಾಗಿ ಸರ್ಕಾರಕ್ಕೆ ಸಲ್ಲಿಸಬೇಕಾದ ಕರಸಲ್ಲಿಸಲಾಗಲಿಲ್ಲ. ಕೆಲವು ಕುಹಕಿಗಳು ಇದನ್ನೇ ನೆಪ ಮಾಡಿಕೊಂಡು ಗ್ರಾಮವನ್ನು ಸರ್ಕಾರಕ್ಕೆ ಸೇರಿಸಲು ಪ್ರಯತ್ನಿಸಿದರು. ಆಗ ದಾಸರು ರಾಮ ದೇವರು ಮತ್ತು ಮುಖ್ಯಪ್ರಾಣನ ಎದುರಿಗೆ ನಿಂತು "ಜಗತ್ತನ್ನೆ ರಕ್ಷಣೆ ಮಾಡುವ ನಿನಗೆ ನಾವು ಭಾರವಾಗಿದ್ದೇವೇ ಸ್ವಾಮಿ.. ಎಲ್ಲವೂ ನಿನ್ನ ಚಿತ್ತ, ಎಂದು "ಯಾಕೆ ಎನ್ನನ್ನು ಇನಿತು ಗಾರು ಮಾಡುವೆ ದೇವಾ...."ಎಂಬುದಾಗಿ ಸ್ತುತಿಸಿದರು.ಆಗ ಸಂಬಂಧಪಟ್ಟ ಅಧಿಕಾರಿಗೆ ಸ್ವಪ್ನಸೂಚಿತವಾಗಿ ದೇವಾದಾಯ ವಾಗಿದ್ದ ಗ್ರಾಮವನ್ನು ಬ್ರಹ್ಮಾದಾಯವೆಂದು ಪರಿಗಣಿಸಿ, ಇನ್ನು ಮುಂದೆ ಯಾವುದೆ ಕರ ಪಾವತಿ ಮಾಡಬೇಕಿಲ್ಲವೆಂದು ಸರ್ಕಾರದಿಂದ ಆದೇಶ ಬಂದಿತು. ನಂತರ ಆ ಕುಹಕಿಗಳು ರೋಗದಿಂದ ನರಳಿ ನರಳಿ, ಮತ್ತೊಮ್ಮೆ ದಾಸರ ವಿಷಯಕ್ಕೆ ಬಾರದಂತಾಯಿತು.

ದಾಸರು ಧ್ಯಾನಕ್ಕೇ ಕುಳಿತರೆಂದರೆ ಅಸಂಪ್ರಜ್ಞಾತ ಸಮಾಧಿಯಲ್ಲಿ ಭಗವಂತನೊಡನೆ ವಿಹರಿಸುತ್ತಿದ್ದವರು. ಒಮ್ಮೆ ಶ್ರೀರಾಮನವಮಿಯ ದಿನ ಧ್ಯಾನಕ್ಕೆ ಕುಳಿತವರು ಬೇಗ ಏಳಲಿಲ್ಲ. ಇದೇ ಸಂದರ್ಭವನ್ನು ಉಪಯೋಗಿಸಿಕೊಂಡು ಕೆಲವು ಕುಹಕಿಗಳು, ಇವರನ್ನೇನು ಕಾಯುವುದು ನಾವೇ ರಥವನ್ನು ಎಳೆಯೋಣ ಎಂದು ನಿರ್ಧರಿಸಿ ಸಾವಿರಾರು ಜನರು ಎಳೆದರೂ ರಥ ಒಂದಿಂಚೂ ಕದಲಲಿಲ್ಲ... ಸಂಜೆಯಾಗುತ್ತಾ ಬಂದರೂ ಕದಲದೇ ಇದ್ದಾಗ ದಾಸರು ಬರದೆ ಕದಲುವುದಿಲ್ಲ ಎಂಬ ಅರಿವಾಗಿ, ಅವರಿಗಾಗಿ ಕಾಯುತ್ತಾ ಕುಳಿತಿದ್ದರು.ದಾಸರು ಅಸಂಪ್ರಜ್ಞಾತ ಸಮಾಧಿಯಿಂದ ಹೊರ ಬಂದ ನಂತರ ಎಲ್ಲರೂ ಅವರಲ್ಲಿ ಕ್ಷಮೆಯನ್ನು ಕೋರಿದರು. ದಾಸರು ಬಂದ ನಂತರ ರಥವು ಯಾವುದೇ ಅಡೆ ತಡೆಯಿಲ್ಲದೆ ನಡೆಯಿತು. ಇಷ್ಟು ತಡವಾಗುವುದಕ್ಕೆ ಇದ್ದ ಬಲವತ್ತರವಾದ ಕಾರಣವು ಎಲ್ಲರ ಅರಿವಿಗೆ ಬಂದು ದಾಸರ ಅಪರೋಕ್ಷ ಜ್ಞಾನ ಕಂಡು ಎಲ್ಲರಿಗೂ ಅಚ್ಚರಿಯಾಯಿತು.ಹಾಗೂ ಅವರ ಬಗ್ಗೆ ಭಕ್ತಿ ಗೌರವಾದರಗಳು ಮೂಡಿದವು. ಇಂತಹ ಎಷ್ಟೋ ಅತಿ ಮಾನುಷ ಘಟನೆಗಳು ದಾಸರ ಜೀವನದಲ್ಲಿ ಘಟಿಸಿದ್ದಾವೆ. ಇಂತಹ ಮಹಾನುಭಾವರು ಅನೇಕ ಕೃತಿಗಳನ್ನು ರಚಿಸಿರಬಹು ದಾದರೂ, ದೊರೆತಿರುವುದು ಬಹಳ ಅತ್ಯಲ್ಪ.

ದಾಸರ ಶಿಷ್ಯರಾಗಿ ಕುಂಭಕೋಣದ ವೆಂಕಟದಾಸರು "ಪ್ರಸನ್ನ ವೆಂಕಟವಿಠಲಾ"ಅಂಕಿತರಾಗಿ, ಅವರೂ ಅಪರೋಕ್ಷ ಜ್ಞಾನಿಗಳಾದದ್ದು ಇತಿಹಾಸ. ಇವರಲ್ಲದೆ ಶ್ರೀ ಮೋಹನದಾಸರ ಮಕ್ಕಳಿಗೆ ಗುರುಮೋಹನ ವಿಠಲ ಮತ್ತು ತಂದೆ ಮೋಹನ ವಿಠಲ ಎಂಬ ಅಂಕಿತ ಪ್ರದಾನ ಮಾಡಿದ್ದರೆಂದು ವರದೇಂದ್ರ ಸಾಹಿತ್ಯದಿಂದ ತಿಳಿದು ಬರುತ್ತದೆ.

ಇವರ ಅಂಶದ ಬಗ್ಗೆ ಅವಲೋಕಿಸುವುದಾದರೆ, ಇವರು ಅಗ್ನಿಯ ಮಕ್ಕಳಲ್ಲಿ ಒಬ್ಬರಾಗಿರಬಹುದೆಂದು ಅಭಿಪ್ರಾಯ ಪಡ ಬಹುದಾಗಿದೆ. ಇವರ ನಂತರದಲ್ಲಿ "ಶ್ರೀಶ ಪವಮಾನ ವಿಠಲ" ದಾಸರು ಸುಮಾರು 146 ಕೃತಿಗಳನ್ನು ರಚಿಸಿದ್ದು, ಅವರ ವಂಶೀಕರಾಗಿದ್ದಾರೆ.

ಮಧ್ವಪತಿ ವಿಠಲದಾಸರು ಸುಮಾರು 80 ವರ್ಷ, ಸಾಧನ ಶರೀರಧಾರಣೆ ಮಾಡಿದ್ದು, ಭಗವತ್ಸೇವೆ ಮಾಡುತ್ತಾ ಕ್ರಿ.ಶ. 1833 ಇಸವಿಯಲ್ಲಿ ಹರಿಪುರಕ್ಕೆ ಪ್ರಯಾಣಿಸಿದರು. ಇವರ ಆರಾಧನೆಯು ಭಾದ್ರಪದ ಬಹುಳ ಅಮಾವಾಸ್ಯೆಯ ದಿನ ಆಚರಿಸಲಾಗುತ್ತಿದೆ. ದಾಸ ಪಂಥದಲ್ಲಿ ಮಾರ್ಗದರ್ಶಕರಾಗಿ ಬೆಳಗುತ್ತಿದ್ದ ದಿವ್ಯ ಜ್ಯೋತಿಯೊಂದು ಕಣ್ಮರೆಯಾಯಿತೆಂದು ದುಃಖಿಸದವರಾರು?

ಇವರ ಶಿಷ್ಯ ಪರಂಪರೆಯು ಪ್ರಸನ್ನ ವೆಂಕಟದಾಸರ (ಕುಂಭಕೋಣೆ ದಾಸರು) ಮೂಲಕ, ವಿಜಯರಾಮಚಂದ್ರ ವಿಠಲರು, ಬಾದರಾಯಣವಿಠಲರು, ಜಯೇಶವಿಠಲರ ಮೂಲಕ ನಡೆದು ಬಂದಿದೆ.

ಶ್ರೀ ಕೃಷ್ಣಾರ್ಪಣಮಸ್ತು

# ವಿಜಯನಗರ ಕಾಲದಲ್ಲಿ ಬ್ರಹ್ಮೋತ್ಸವ



**ಆಂಗ್ಲ ಮೂಲ - ಸಾಧುಸುಬ್ರಹ್ಮಣ್ಯಶಾಸಿ**

- ದಿ || ಬಿ.ಎನ್.ಶ್ರೀನಿವಾಸನ್

ಉತ್ಸವಗಳ ವಿಷಯಕ್ಕೆ ಬಂದರೆ ಹಿಂದಿನ ಕಾಲದಲ್ಲಿದ್ದಂತೆಯೇ ಬ್ರಹ್ಮೋತ್ಸವಗಳೆಂದು ಸಾಧರಣವಾಗಿ ಗುರುತಿಸಲಾಗುವ ಧ್ವಜಾರೋಹಣದಿಂದ ಧ್ವಜಾವರೋಹಣದ ವರೆಗೆ ನಡೆಯತಕ್ಕ ಏಳು ತಿರುಕ್ಕೊಡಿ ತಿರುನಾಳುಗಳ ತಿಂಗಳುಗಳೇ ಆಗಿದ್ದವು. ಆದರೆ ಹತ್ತು ಅಥವಾ ಹನ್ನೆರಡು ದಿನಗಳ ಈ ಉತ್ಸವಗಳಲ್ಲಿ ಆಗತಕ್ಕ ನಿವೇದನೆಗಳು ಮಾತ್ರ ಹೆಚ್ಚಾದವು. ಕೆಲವು ಶಾಸನಗಳಲ್ಲಿ ತಿರುಕ್ಕೊಡಿ ತಿರುನಾಳ್ ನಡೆಯುತ್ತಿದ್ದ ಆರು ತಿಂಗಳುಗಳ ಉಲ್ಲೇಖವಿದೆ. ಅವುಗಳು ಹೀಗೆ - ಪುರಟ್ಟಾಸಿ ಹಾಗೂ ಪಂಗುನಿ (ಸಂಪುಟ-2 ಶಾಸನ- 96, 68, 110,105, 108) ಅಲ್ಪಸಿ ಹಾಗೂ ಮಾಸಿ (ಶಾಸನ- 112) ಆಡಿ ಹಾಗೂ ಚಿತ್ತಿರೈ. (ಶಾಸನ - 38, 50, 142) ಯಾವುದೇ ಶಾಸನದಲ್ಲಿ ಏಳನೆಯ ಉತ್ಸವ ನಡೆಯುವ ತಿಂಗಳ ಹೆಸರು ಕಂಡು ಬರದು. ಉತ್ಸವ ನಡೆಯುತ್ತಿದ್ದ ದಿನಗಳನ್ನು ಕುರಿತು ಬೇರೆ ಬಗೆಯಾಗಿ ಎಂದರೆ ಅಲ್ಲಿನ ದಾನಿಗಳ ಅಪೇಕ್ಷೆಯ ಮೇರೆಗೆ ಉತ್ಸವ ವಿಗ್ರಹಗಳಿಗೆ ಯಾವ ಯಾವ ದಿನ ನಿವೇದನೆಯಾಗಬೇಕೆಂದು ತಿಳಿಸಲಾಗಿದೆಯೋ ಹಾಗೆಯೇ ಗುರುತಿಸಲಾಗಿದೆ. ಒಂದನೇ ಸಂಪುಟದ 213ನೇ ಶಾಸನದಲ್ಲಿ ಗರುಡಧ್ವಜದ ಆರೋ ಹಣದ ದಿನದಿಂದ ಉತ್ಸವ ಮೂರ್ತಿಗಳ ತಿರುಮಂಜನದವರೆಗೆ-ತೀರ್ಥವಾರಿ ದಿನದ ವರೆಗೆ (ಪವಿತ್ರ ಸ್ನಾನವಾಗುವ ಅವಭೃಥ) ಒಂಭತ್ತು ದಿನಗಳೆಂದು ಗುರುತಿಸಲಾಗಿದೆ. (ಸಂಪುಟ - 2 ಶಾಸನ - 1 ) ಸಂಪುಟ - 2, ಶಾಸನ 83, 127, 138ಗಳಲ್ಲಿ ಹನ್ನೆರಡು ದಿನಗಳನ್ನು ಎಣಿಸಲಾಗಿದೆ. ಇದು ಕೈಯರ್ ಚಕ್ರದಿಂದ ವಿಡಯಾತ್ತಿ ದಿನದವರೆಗೆ ಎಂದರೆ ಧ್ವಜಾರೋಹಣದ ಎರಡು ದಿನ ಮೊದಲು ಸುದರ್ಶನ ಚಕ್ರವನ್ನು ಊರ ಮೆರವಣಿಗೆಯಲ್ಲಿ ತೆಗೆದುಕೊಂಡು ಬಂದು ನಗರದ ಹೊರವಲಯದಿಂದ ತುಸು ಮೃತ್ಸಂಗ್ರಹಣ ಮಾಡಿಕೊಂಡು ಆಲಯಕ್ಕೆ ಹಿಂದಿರುಗಿ ಯಾಗಶಾಲೆಯ ಮಣ್ಣಿನ ಕುಡಿಕೆಗಳಲ್ಲಿ ತುಂಬಿ ಮಾರನೆಯ ದಿನ (ಧ್ವಜಾರೋಹಣದ ಹಿಂದಿನ ದಿನ) ನವಧಾನ್ಯಗಳನ್ನು ಇದರಲ್ಲಿ ಬೀಜಾರೋಪಣೆ (ಅಂಕುರಾರ್ಪಣೆ) ಮಾಡಿಸಲು ತರುವುದು ಕೈಯರ್ ಚಕ್ರದ ದಿನವಾಗಿ, ಧ್ವಜಾರೋಹಣ ಎಂದರೆ ಗರುಡ ಪಟವನ್ನು ಹಾರಿಸುವುದರಿಂದ ಉತ್ಸವ ಆರಂಭವಾಗಿ, ಮಲೆಯಪ್ಪ ಸ್ವಾಮಿಯ-ಬಿಡಿಸಿ ಹೇಳುವುದಾದರೆ ಮಲೆಯಪ್ಪನ ಏಕ ಮೂರ್ತಿಯನ್ನು ಹಲವು ದಿನ ಗಳಲ್ಲಿಯೂ, ಇತರ ದಿನಗಳಲ್ಲಿ ಆತನ ದೈವೀಸತಿಯರಾದ ಶ್ರೀದೇವಿ ಭೂದೇವಿಯರೊಡನೆಯೂ -ಮೆರವಣಿಗೆ ಮಾಡುತ್ತಿದ್ದರು. ಅಂದಿನದಿನ ಬಳಕೆಯ ವಾಹನದಲ್ಲಿ ಸ್ಥಳವನ್ನು ಅನುಸರಿಸಿ ಈ ಏಕಮೂರ್ತಿ ಮೂರು ಮೂರ್ತಿಗಳ ಮೆರವಣಿಗೆ ನಡೆಯುತ್ತಿತ್ತು. ಧ್ವಜಾರೋಹಣವನ್ನು ಮೊದಲ ದಿನ ಎಂದು ಪರಿಗಣಿಸದ ನಂತರ ಎಂಟನೆಯ ದಿನ ಮೂರೂ ಉತ್ಸವ ಮೂರ್ತಿಗಳನ್ನು ರಥದಲ್ಲಿ ಆಸೀನಗೊಳಿಸಿ ಮೆರವಣಿಗೆ

ಮಾಡುವರು. ಇಲ್ಲಿ ಹೆಚ್ಚಿನ ವೈಭವ ಉತ್ಸಾಹಗಳು ನಾಲ್ಕೂ ಬೀದಿಗಳಲ್ಲಿನ ಮೆರವಣಿಗೆಯಲ್ಲಿ ಕಂಡು ಬರುವುದು. ಎಂಟನೆಯ ದಿನದ ಸಂಜೆಯಲ್ಲಿ - ರಾತ್ರಿಯಲ್ಲಿ ಮಲೆಯಪ್ಪನು ಒಬ್ಬನೇ ಕುದುರೆಯ ವಾಹನದಲ್ಲಿ ಮೆರವಣಿಗೆ ಬರುವನು. ಬೇಟೆಗೆ ಕುದುರೆಯ ಮೇಲೆ ನಾಗಾಲೋಟದಲ್ಲಿ ಹೊರಡುವಂತೆ ವೇಶವಿರುವುದು. (ಸಂಪುಟ - 2 ಸಂಖ್ಯೆ-96 ) ಒಂಭತ್ತನೆಯ ದಿನ ಸ್ವಾಮಿ ಪುಷ್ಕರಿಣಿಯ ತಟದಲ್ಲಿರುವ ವರಾಹ ಸ್ವಾಮಿಯ ಆಲಯದಲ್ಲಿನ ಮುಖ ಮಂಟಪದಲ್ಲಿ ತೀರ್ಥವಾರಿ ಅಥವಾ ತಿರುಮಂಜನ ವಾಗುವುದು. ಒಂಭತ್ತನೆಯ ದಿನದ ರಾತ್ರಿಯಲ್ಲಿ ಧ್ವಜ ಸ್ತಂಭದಿಂದ ಗರುಡ ಪಟವನ್ನು ಕೆಳಗಿಳಿಸಿ ಉತ್ಸವದ ಸಮಾಪ್ತಿಯನ್ನು ಸೂಚಿಸಲಾಗುವುದು. ಹತ್ತನೆಯ ದಿನ ರಾತ್ರಿ ಸ್ವಾಮಿಯನ್ನು ಕಂಠದವರೆಗೆ ಹೂವುಗಳಿಂದ ಅಲಂಕರಿಸುವ ಪುಷ್ಪಯಾಗವು ನಡೆಯುವುದು.(ಸಂಪುಟ-2-ಸಂಖ್ಯೆ-135) ಹನ್ನೊಂದನೆಯ ದಿನ ವಿಡಯಾತ್ತಿ, (ಬೀಳ್ಗೊಡಿಗೆ) ಸಂಪುಟ 2 ರ 109 ಹಾಗೂ 134 ನೆಯ ಶಾಸನಗಳು ಪುಷ್ಪಯಾಗ, ವಿಡಯಾತ್ತಿ ಸಮಾರಂಭಗಳು ಎರಡು ಬೇರೆ ಬೇರೆ ದಿನಗಳಲ್ಲಿ ಒಂದಾದ ಮೇಲೆ ಒಂದರಂತೆ ನಡೆಯುವುವೆಂದು ತಿಳಿಸುತ್ತವೆ. ಹೀಗಾಗಿ ಕೈಯರ್ ಚಕ್ರ ದಿನದಿಂದ ಎಣಿಸಿದರೆ ವಿಡಯಾತ್ತಿ ದಿನ ಹದಿ ಮೂರನೆಯ ದಿನವಾಗುತ್ತದೆ. ಇದರಿಂದಾಗಿ ಮೇಲೆ 83, 127, 138 ನೇ ಶಾಸನಗಳಲ್ಲಿ ಹೇಳಿದಂತೆ ಅದನ್ನು ಹನ್ನೆರಡನೆಯ ದಿನ ಗಣಿಸುವುದರಲ್ಲಿ ಮತಭೇದ ಉಂಟಾಗುವುದು. ಸಂಪುಟ 1 ರಲ್ಲಿನ 221 ಹಾಗೂ 222 ನೇ ಶಾಸನಗಳಲ್ಲಿ ಶ್ರೀವೆಕಂಟೇ ಶ್ವರ ಸ್ವಾಮಿಗೆ ಹಾಗೂ ಶ್ರೀಗೋವಿಂದ ರಾಜಸ್ವಾಮಿಗೆ ಎರಡೂ ದಿನಗಳಲ್ಲಿ ನೈವೇದ್ಯ ಸಮರ್ಪಣೆ ಮಾಡಲು ಕೈಯರ್ ಚಕ್ರಂ ಹಾಗೂ ತಿರುಮುಳೈ ತಿರುನಾಳ್ (ಒಂದು ಮೃತ್ಸಂಗ್ರಹಣ ವಾದರೆ ಮತ್ತೊಂದು ಅಂಕುರಾರ್ಪಣೆ) ಎರಡು ಬೇರೆ ಬೇರೆ ದಿನಗಳೆಂದೂ ಒಂದಾದ ನಂತರದ ದಿನದಲ್ಲಿ ಇನ್ನೊಂದು ಎಂದೂ ಸ್ಪಷ್ಟವಾಗಿ ಹೇಳಲಾಗಿದೆ. ಇದರಂತೆಯೇ ಸಂಪುಟ- 1 ರ ಸಂಖ್ಯೆ - 213 ರಲ್ಲಿನ ದಾನಿಯಿಂದ ತಿರುಮುಳೈ ತಿರುನಾಳಿನ ದಿನದಲ್ಲಿಯೂ, (ಅಂಕುರಾರ್ಪಣೆ) ಸಂಖ್ಯೆ 214 ರಲ್ಲಿ ವೆಂಕಟೇಶ್ವರ ಸ್ವಾಮಿಯ ಏಳು ಬ್ರಹ್ಮೋತ್ಸವಗಳ ಹಾಗೂ ಗೋವಿಂದರಾಜಸ್ವಾಮಿಯ ಎರಡು ಬ್ರಹ್ಮೋತ್ಸವಗಳ ಕಡೆಯ ದಿನವಾದ ತೀರ್ಥವಾರಿ ನಾಳ್ ದಿನದಲ್ಲಿಯೂ-ಮೊದಲ ಹಾಗೂ ಕೊನೆಯ ದಿನಗಳಲ್ಲಿ ವಿಶೇಷ ನೈವೇದ್ಯ ಸಮರ್ಪಣೆ ಮಾಡಬೇಕೆಂದೂ ಹೇಳಲಾಗಿದೆ. ಉತ್ಸವದ ಆರಂಭ ಆಗುವ ಧ್ವಜಾರೋಹಣಕ್ಕೆ ಮೊದಲ ದಿನದಲ್ಲಿ ನಡೆಯುವ ಅಂಕುರಾರ್ಪಣೆ, ಉತ್ಸವದ ಪೂರ್ವ ಭಾವಿ ಅಂಗ ಮಾತ್ರವೇ ಆಗಿದ್ದರೂ ತೀರ್ಥವಾರಿ ಮಾತ್ರ ಉತ್ಸವದ ಕಡೆಯ ಕ್ರಮವಾಗಿದೆ.

ಉತ್ಸವಕ್ಕೆ ಬಳಸಲಾಗುವ ವಾಹನಗಳಲ್ಲಿ ಎಂಟನೆಯ ದಿನದ ರಥವಾಹನವನ್ನೂ ಆ ದಿನದ ರಾತ್ರಿಯಲ್ಲಿ ಅಶ್ವವಾಹನವನ್ನೂ ವೆಂಕಟೇಶ, ಗೋವಿಂದ ರಾಜಸ್ವಾಮಿಗಳಿಗೆಂದು ಹೆಸರಿಸಿದೆಯಲ್ಲದೆ (ಸಂಖ್ಯೆ -96) ತಿರುವನಂತಾಳ್ (ಶೇಷ ವಾಹನ) (ಸರ್ಪವಾಹನ)ವನ್ನು ಒಂಬತ್ತನೆಯ ದಿನ ಗೋವಿಂದರಾಜ ಸ್ವಾಮಿಗೆ ಹೇಳಲಾಗಿದೆ. ಇತರ ದಿನಗಳ ವಾಹನಗಳನ್ನು ಸ್ಪಷ್ಟವಾಗಿ ಹೇಳಲಾಗಿಲ್ಲ. ಆದರೆ ನೈವೇದ್ಯಗಳ ಏರ್ಪಾಡು ಮಾತ್ರ ಧ್ವಜಾರೋಹಣದ ದಿನ (ಸಂಪುಟ 2 - ಸಂಖ್ಯೆ 69) ಮೂರು, ನಾಲ್ಕು, ಐದು ಹಾಗೋ ಏಳನೆಯ ದಿನಗಳಲ್ಲಿ (ಸಂಖ್ಯೆ - 18 ) ಆರನೆಯ ಏಳನೆಯ ದಿನಗಳು, ಪುಷ್ಪಯಾಗಿ ವಿಡಯಾತ್ತಿ ದಿನಗಳಲ್ಲಿ (ಸಂಖ್ಯೆ-134) ಆರು ವಳನೆಯ ದಿನಗಳಲ್ಲಿ (ಸಂಖ್ಯೆ 103) ಚಿತ್ತಿರೈ ಮಾಸದ ಉತ್ಸವದ ಮೊದಲ ಏಳು ದಿನಗಳಲ್ಲಿನ ಅಣ್ಣಾ ಊಂಜಲ್ (ಹಂಸತಲ್ಪದ ಉಯ್ಯಾಲೆಯಲ್ಲಿ) ಸಂದರ್ಭದಲ್ಲಿ ಸಾಳುವ ನರಸಿಂಹ ರಾಯನು ನಿರ್ಮಿಸಿದ ಮಂಟಪದಲ್ಲಿ (ಇದು ಧ್ವಜಸ್ತಂಭಧ ಮಂಟಪದ ದಕ್ಷಿಣದಲ್ಲಿದೆ.) (ಸಂಖ್ಯೆ - 50) ಹಾಗೂ ಉತ್ಸವದ ಹನ್ನೆರಡು ದಿನಗಳಲ್ಲಿ ನೈವೇದ್ಯದ ಏರ್ಪಾಡು 83, 127, 138- ಸಂಪುಟ -2) ಕ್ಕೂ ಹೆಚ್ಚು ಮಂದಿ ದಾನಿಗಳು ಉತ್ಸವದ ಏಳನೇ ದಿನವನ್ನು ಆಯ್ಕೆ ಮಾಡಿಕೊಂಡಿದ್ದಾರೆ.

ಈ ವ್ಯವಸ್ಥೆಯು ಒಂದೆರಡು ಅಂಶದ ವಿನಾ ಭವಿಷ್ಯೋತ್ತರ ಪುರಾಣದ ವೆಂಕಟಾಚಲ ಮಹಾತ್ಮ್ಯದಲ್ಲಿ ತಿಳಿಸಿರುವಂತೆಯೇ ಇದೆ. ಧ್ವಜಾರೋಹಣದ ಮುನ್ನಾದಿನಗಳಲ್ಲಿ ಎರಡು ಪ್ರತ್ಯೇಕ ದಿನಗಳಲ್ಲಿ ಕೈಯರ್ ಚಕ್ರದ ಮೆರವಣಿಗೆಯಲ್ಲಿ ಮೃತ್ಸಂಗ್ರಹಣವನ್ನೂ, ಕುಡಿಕೆಗಳಲ್ಲಿ ಆ ಮಣ್ಣನ್ನು ಹಾಕಿ ವಾಪಸೆ ಮಾಡುವ ಅಂಕುರಾರ್ಪಣೆಯೂ ನಡೆಯುವುದೆಂದು ಶಾಸನಗಳಲ್ಲಿ ಹೇಳಲಾಗಿದೆ. ಇಂದಿನ ದಿನಗಳಲ್ಲಿ ನಡೆಯುವಂತೆ ಧ್ವಜಾರೋಹಣದ ಮುಂಚಿನ ದಿನ ಸುದರ್ಶನ ಚಕ್ರವಲ್ಲದೆ, ವಿಷ್ವಕ್ಸೇನರ (ಸೇನಾಪತಿಯ) ಮೆರವಣಿಗೆ ನಡೆದು ಅಂಕುರಾರ್ಪಣೆಯೂ ಅದೇ ದಿನ ನಡೆಯುವುದೆಂದು ಪುರಾಣವು ತಿಳಿಸುವುದು. ಪುರಾಣವು ಹೇಳುವಂತೆ ಧ್ವಜಾರೋಹಣವು ಉಷಃಕಾಲದಲ್ಲಿ ನಡೆಯಬೇಕು. ಆದರೀಗ ಸಂಜೆಯ ಹೊತ್ತಿನಲ್ಲಿ ನಡೆಯುತ್ತದೆ. ಬೇರೆ ಬೇರೆ ದಿನಗಳಲ್ಲಿ ಉತ್ಸವ ವಾಹನಗಳು ಪುರಾಣೋಕ್ತವೇ ಆಗಿದ್ದರೂ,ಅಲ್ಲಿ 7 ನೇ ದಿನದಂದು ಸಂಜೆ ಮಂಗಳಹರಿ ವಾಹನವನ್ನು ಹೇಳಲಾಗಿದ್ದು ಇದ್ದು ಇದು ಇಂದು ಕಂಡು ಬರದ ತಿರುಚ್ಚಿ ವಾಹನವೇ ಆಗಿರಬೇಕು. ಅದರಂತೆಯೇ ಪುರಾಣದಲ್ಲಿ ಹೇಳಲಾದ ಹತ್ತನೆಯ ದಿನದ ಪುಷ್ಪಯಾಗವು ಬಹಳ ಹಿಂದೆಯೇ ನಿಂತುಹೋಗಿದೆ. 1980 ರ ನವಂಬರ್ 14 ರಂದು ಇದನ್ನು ಪುನರುದ್ಧಾರಗೊಳಿಸಲಾಯಿತು. (ಈಗ ಬ್ರಹ್ಮೋತ್ಸವದ ಹತ್ತನೆಯ ದಿನದಲ್ಲಿಯಲ್ಲದೆ ಅದಾಗಿ ಒಂದು ತಿಂಗಳ ನಂತರದ



ಶ್ರವಣ ನಕ್ಷತ್ರದಲ್ಲಿ ಪುಷ್ಪಯಾಗ ನಡೆಯುವುದು) ಶಕ 1413 ರಲ್ಲಿ (27 ಜೂನ್ 1491 ರಲ್ಲಿ) ಒಬ್ಬಾನೊಬ್ಬ ಜೀಯರ್ ರಾಮಾನುಜ ಯ್ಯನ್‌ಯಾನೆಪಸಿಂಡಿ ವೆಂಕಟತ್ತುರೈವರ್ ವೆಂಕಟಾಚಲ ಮಹಾತ್ಮ್ಯ ವನ್ನು ಸಂಗ್ರಹಿಸಿ ಶ್ರೀವೆಂಕಟೇಶ್ವರ ಸ್ವಾಮಿಗೆ (ಅಂದು ನಡೆದ ಕೈಶಿಕ ದ್ವಾದಶಿ ಉತ್ಸವದ ಆಸ್ಥಾನದಲ್ಲಿ ಸಮರ್ಪಿಸಿದವನಾಗಿ ಅಂದು ಪ್ರಚಲಿತವಿದ್ದ ಪದ್ಧತಿಯನ್ನು ಪುರಾಣದಲ್ಲಿ ತಿಳಿಸಲಾಗಿರಬೇಕು. (ಸಂಪುಟ - 2- ಸಂಖ್ಯೆ - 95)

ಬ್ರಹ್ಮೋತ್ಸವದ ಐದನೆಯ ದಿನದಲ್ಲಿ ಗೋವಿಂದರಾಜ ಸ್ವಾಮಿ ಯನ್ನೂ ಆತನ ಉಭಯನಾಯಕಿಯರನ್ನೂ ವಸಂತ ಮಂಟಪ ದಲ್ಲಿ ಉಯ್ಯಾಲೆಯಲ್ಲಿ ಆಸೀನಗೊಳಿಸಿ ವಿವಾಹ ಸಮಯದಲ್ಲಿ ವಧೂ ವರರನ್ನು ತೂಗಿದಂತೆ ತೂಗುತ್ತ, ಮದುವೆಯ ಮೆರವಣಿಗೆಯಂತೆ ನಡೆಸಲಾಗುತ್ತಿತ್ತೆಂದು ಎರಡನೇ ಸಂಪುಟದ 83 ನೇ ಶಾಸನ ತಿಳಿಸುವುದು. ಸಂಪುಟ 2 ರ 127 ನೇ ಶಾಸನವು ಮೆರವಣಿಗೆಯಲ್ಲಿ ಶ್ರೀ ಕೃಷ್ಣನು ಹೊರ ಬರುವುದು ಮದುವೆಯ ದಿನವೆಂದು ಹೇಳ ಲಾಗಿದ್ದು, ಆರನೆಯ ದಿನವು ವಸಂತವೆಂದೂ ಹೇಳಲಾಗಿದೆ.

ತಿರುಮಲೆಯಲ್ಲಿ ಏಳು ಬ್ರಹ್ಮೋತ್ಸವಗಳ ಆರನೆಯ ದಿನಗಳಂದು ಮೂರೂ ಉತ್ಸವ ವಿಗ್ರಹಗಳನ್ನು ರಾಮಾನುಜಯ್ಯನ್ ಪುಷ್ಪ ಮಂಟಪಕ್ಕೆ (ಜ್ಞಾನಪ್ಪಿರಾನ್ ಅಥವಾ ಜ್ಞಾನ ಪ್ರದನ್ ಎಂಬ ವರಾಹ ಸ್ವಾಮಿ ಆಲಯದಲ್ಲಿದ್ದ ಮಂಟಪ) ಅಲ್ಲಿ ತಿರುಮಂಜನ ಮಾಡಿ ಸುಗಿಯನ್ ಪಡಿ ನಿವೇದನೆ ಮಾಡಿ ಅಲ್ಲಿದ್ದ ಉಯ್ಯಾಲೆಯಲ್ಲಿ ಕೂಲಿಸಿ ತೂಗಿ ನಂತರ ವರಾಹಸ್ವಾಮಿ ಆಲಯವನ್ನು ಮೂರು ಸುತ್ತು ಹಾಕುತ್ತಿದ್ದರೆಂದು ಹೇಳಲಾಗಿದೆ. (ಸಂಖ್ಯೆ - 68)

ಶಕವರ್ಷ 1426 ರಲ್ಲಿ (12 ಸೆಪ್ಟೆಂಬರ್ 1504) ಸಾಳುವ ನರಸಿಂಹ ಮಹಾರಾಯನ ಮಗ ಇಮ್ಮಡಿ ನರಸಿಂಹರಾಯರ ಪುಣ್ಯಕ್ಕೆಂದು ತಿರುವೆಂಕಟಚ್ಚಿರುಕನ್ ತಿರುಪ್ಪಣಿ ಪಿಳ್ಳೈ ಎಂಬೆರು ಮಾನಾರ್ ಎಂಬ ಆಲಯದ ಮಠಾ ಮತ್ತು ವಿಭಾಗದ ಅಧಿಕಾರಿಯು ಏಳು ಉತ್ಸವಗಳ ಹನ್ನೆರಡನೆಯ ದಿನಗಳಲ್ಲಿಯೂ, ಅವುಗಳ ಏಳನೆಯ ದಿನಗಳಲ್ಲಿಯೂ ಒಂದು ಅಧಿಕ ನಿವೇದನೆ ಆಲಯದ ಸಂಪಂಗಿ ಪ್ರದಕ್ಷಿಣೆಯ ಸಾಳುವ ನರಸಿಂಹ ಮಂಟಪದಲ್ಲಿ ಆಗಬೇಕೆಂದು ಕಟ್ಟಳೆ ಮಾಡಿದನು. (ಸಂಖ್ಯೆ-138)

ತಿರುಪತಿಯಲ್ಲಿ ಶ್ರೀಗೋವಿಂದ ರಾಜಸ್ವಾಮಿಯ ಉತ್ಸವ ವಿಗ್ರಹಗಳನ್ನು ಪ್ರಾಯಶಃ ಕಪಿಲತೀರ್ಥದ ರಸ್ತೆ ಯಲ್ಲಿನ ತಿರುಮಂಗೈ ಆಳ್ವಾರರ ಗುಡಿಗೆ ವೈಕಾಸಿ ಹಾಗೂ ಆಣಿ ಮಾಸಗಳಲ್ಲಿ ನಡೆಯುತ್ತಿದ್ದ ಎರಡು ಉತ್ಸವಗಳ ಏಳನೆಯ ದಿನದಂದು ಹಾಗೂ ಒಂಬತ್ತನೆಯ ದಿನ ಗಳಂದು ತಿರುವನಂತಾಳ್ (ಶೇಷವಾಹನ) ಕರೆದು ಕೊಂಡು ಹೋಗಿ ಆ ನಾಲ್ಕೂ ದಿನಗಳಲ್ಲಿ ಒಂದೊಂದು ಅಪ್ಪಪಡಿ ನಿವೇದನೆ ಮಾಡಲಾಗಿದ್ದಿತು. (ಸಂಖ್ಯೆ 122) ತಿರುಪತಿಯ ಆಲಯದಿಂದ ಉತ್ತರಕ್ಕೆ ಹೊರಡುವ ದಾರಿ ಯಲ್ಲಿ ಕಂದಾಡೈ ರಾಮಾನುಜ ಅಯ್ಯಂಗಾರನು ಒಂದು ಆಲಯವನ್ನು ನಿರ್ಮಿಸಿ ಅದರಲ್ಲಿ ಕುಲಶೇಖರ ಆಳ್ವಾರ ರನ್ನು ಪ್ರತಿಷ್ಠಾಪಿಸಿದನು. ಈ ಪ್ರತಿಷ್ಠಾಪನೆ 1468 ರ ನವಂಬರ್‌ನ ಮೊದಲು ನಡೆದಿರಬೇಕು. (ಸಂಖ್ಯೆ - 36) ಈ ಆಲಯಕ್ಕೆ ಗೋವಿಂದರಾಜಸ್ವಾಮಿಯು ಎರಡೂ ಉತ್ಸವಗಳ ಒಂಬತ್ತನೆಯ ದಿನ ಹಾಗೂ ವಿಡಯಾತ್ತಿ ದಿನಗಳಲ್ಲಿ ಒಟ್ಟು ನಾಲ್ಕು ಬಾರಿ ತಿರುವನಂತಾಳ್ (ಶೇಷವಾಹನ) ದಲ್ಲಿ ಬಂದಾಗ ಆರಾಧನೆಗೆ ಏರ್ಪಾಡು ಮಾಡಿದನು. (ಸಂಖ್ಯೆ - 134) ತನ್ನ ಎರಡೂ ಉತ್ಸವಗಳ ಒಂಬತ್ತನೆಯ ದಿನಗಳಂದು ಗೋವಿಂದರಾಜ ಸ್ವಾಮಿ ಯನ್ನು ತಿರುಪತಿಯ ರಘುನಾಥ ಆಲಯಕ್ಕೂ ಕರೆ ದೊಯ್ಯಲಾಗುತ್ತಿದ್ದಿತು. ಆಗಲೂ ಬಳಕೆಯಾಗುತ್ತಿದ್ದು ಶೇಷ ವಾಹನವೇ. ರಘುನಾಥ ಆಲಯದ ಮಂಟಪದಲ್ಲಿ ಪೂಜೆ ನಡೆಯುತ್ತಿದ್ದಿತು. ಇದೇ ತತಂಗ ಆತನ ಉಭಯನಾಯಕಿ ಯರೊಡನೆ ವೈಕಾಸಿಮಾಸದ ಉತ್ಸವದ ವಿಡಯಾತ್ತಿ ದಿನ ನಡೆದು ನೈವೇದ್ಯ ಸಮರ್ಪಣೆ ಆಗುತ್ತಿದ್ದಿತು. (ಸಂ - 110)

ಶ್ರೀವೆಂಕಟೇಶ್ವರಸ್ವಾಮಿಯ ಏಳೂ ಬ್ರಹ್ಮೋತ್ಸವಗಳೂ ಧ್ವಜಪಟದ ಆರೋಹಣದಿಂದ ಆರಂಭವಾಗುವಂತಿದ್ದರೂ ಸೌರಮಾನದ ಪುರಟ್ಟಾಸಿ, ಪಂಗುಣಿ ಮಾಸಗಳಲ್ಲಿ ನಡೆ ಯುವ ಉತ್ಸವಗಳಲ್ಲಿ ಮಾತ್ರವೇ ಮೆರವಣಿಗೆಗೆಂದು ರಥ ವನ್ನು ಬಳಸಲಾಗುತ್ತಿದ್ದಿತು. (ಸಂಪುಟ-2 ಸಂಖ್ಯೆ- 68,96,100,105,110,111) ಗೋವಿಂದರಾಜ ಸ್ವಾಮಿಯ ವೈಕಾಸಿ, ಆಣಿಮಾಸಗಳ ಎರಡು ಬ್ರಹ್ಮೋತ್ಸವಗಳ ಲ್ಲಿಯೂ,ಎಂಟನೆಯ ದಿನದಂದು ರಥೋತ್ಸವ ನಡೆಯು ತ್ತಿತ್ತು.

ಶ್ರೀ ವೆಂಕಟೇಶ್ವರಸ್ವಾಮಿಗೆ ನಡೆಯುತ್ತಿದ್ದು ಏಳು ಬ್ರಹ್ಮೋತ್ಸವಗಳಲ್ಲಿ ಹಾಗೂ ಗೋವಿಂದರಾಜಸ್ವಾಮಿಗೆ ನಡೆಯುವ ಎರಡು ಬ್ರಹ್ಮೋತ್ಸವಗಳಲ್ಲಿನ ಒಂಬತ್ತನೆಯ ದಿನಗಳಂದು ಉತ್ಸವ ಮೂರ್ತಿಯಾದ ಸ್ವಾಮಿಗೆ ಲೆಕ್ಕ ಪತ್ರಗಳಲ್ಲಿನ ಹಿಂದಿನ ದಿನಗಳ ಖರ್ಚು ವೆಚ್ಚ ಆದಾಯ ವರಮಾನಗಳ ವಿವರಗಳನ್ನು ಓದಿ ಹೇಳುತ್ತಿದ್ದದ್ದು ಕಂಡುಬರುವುದು. ಈ ಲೆಕ್ಕವನ್ನು ಒಪ್ಪಿಸುವ ಕೆಲಸ ಆಲಯದ ಉಗ್ರಾಣದ ಬಾಗಿಲಿನಲ್ಲ (ಅಮುದಪ್ಪಡಿ ವಾಸಲಿಲ್) ನಡೆಯುತ್ತಿದ್ದುದರಿಂದಾಗಿ ಆ ಹಿಂದಿನ ಎಂಟು ದಿನಗಳಲ್ಲಿ ವೆಚ್ಚವಾದ ಅಕ್ಕಿ, ಬೇಳೆ ಮುಂತಾದ ಉಗ್ರಾಣದ ಸಂಗ್ರಹದಲ್ಲಿನ ವೆಚ್ಚಗಳನ್ನೂ ತಿಳಿಸಲಾಗುತ್ತಿದ್ದಿರಬೇಕು. (ಸಂಪುಟ - 2 ಸಂಖ್ಯೆ 115)

ಖಚಿತವಾಗಿ ಹೇಳಲಾಗಿಲ್ಲದಿದ್ದರೂ ಪ್ರಸ್ತುತ ಕಾಲದಲ್ಲಿ ಬ್ರಹ್ಮೋತ್ಸವಗಳಲ್ಲಿನ ರಥೋತ್ಸವದ ದಿನದಲ್ಲಿ ದೊಡ್ಡ ರಥದಲ್ಲಿ ಸ್ವಾಮಿಯನ್ನೂ ಉಭಯನಾಯಕಿಯರನ್ನೂ ಮೆರವಣಿಗೆಯಲ್ಲಿ ತರುವಾಗ ಮುಂಭಾಗದಲ್ಲಿ ಒಂದು ಖಾಲಿಯಾದ ಚಿಕ್ಕ ರಥವನ್ನು - ಬ್ರಹ್ಮನೇ ವೆಂಕಟೇಶ್ವರ ಸ್ವಾಮಿಗೆ ಉತ್ಸವ ನೆರವೇರಿಸುತ್ತಿದ್ದಾನೆ ಎಂಬರ್ಥ ಬರುವಂತೆ - ನಡೆಸಲಾಗುವುದು. ಈ ಕಿರಿಯ ಖಾಲಿ ರಥವನ್ನು ಬ್ರಹ್ಮರಥವೆಂದೇ ಕರೆಯಲಾಗುತ್ತದೆ. ಇಲ್ಲಿ ಬ್ರಹ್ಮನು ಅದೃಶ್ಯನಾಗಿ ಕುಳಿತು ಇಡೀ ಉತ್ಸವವನ್ನು ನಿರ್ವಹಿಸುವವನನೆಂಬುದು ಸಂಕೇತ. (ಈಗ ಎಂದರೆ 21 ನೆಯ ಶತಮಾನದಲ್ಲಿ ಬ್ರಹ್ಮೋತ್ಸವದಲ್ಲಿ ಎಲ್ಲ ವಾಹನಗಳ ಮುಂದೆಯೂ ಈ ಖಾಲಿರಥ (ಬ್ರಹ್ಮರಥ) ನಡೆಯುತ್ತದೆ. ಕನ್ನಡಿಗರಿಗೆ ಬ್ರಹ್ಮರಥವೆಂದರೆ ಸ್ವಾಮಿಯನ್ನು ಹೊತ್ತು ಮೆರವಣಿಗೆ ಬರುವ ದೊಡ್ಡ ರಥವೆಂದೇ ಅರ್ಥ. ಇದು - ಈ ಖಾಲಿ ರಥವೆಂಬುದು ತಿರುಪತಿಯ ಸಂಪ್ರದಾಯವಷ್ಟೆ - ಅನುವಾದಕ)

ಬೆಟ್ಟದ ಮೇಲೂ,ತಿರುಪತಿಯಲ್ಲಿಯೂ ಹಲವಾರು ಮಂಟಪಗಳೂ,ನಂದನ ವನಗಳೂ ಬೇರೆ ಬೇರೆಯವರಿಂದ ನಿರ್ಮಾಣವಾಗಿ,ಬ್ರಹ್ಮೋತ್ಸವದಲ್ಲಿಯೂ, ಇತರ ಉತ್ಸವಗಳಲ್ಲಿಯೂ, ಬೇರೆ ಬೇರೆ ನಂದನ ವನಗಳಲ್ಲಿ ಪೂಜೆ ನೈವೇದ್ಯ ಸಮರ್ಪಣೆ ನಡೆಯುತ್ತಿದ್ದವು.

ವೆಂಕಟೇಶ್ವರ ಸ್ವಾಮಿಗೆ ಬ್ರಹ್ಮೋತ್ಸವಗಳನ್ನು ಏರ್ಪಡಿಸಿದವರ ಪಟ್ಟಿಯನ್ನು 129 ನೇ ಶಾಸನವು ತಿಂಗಳ ಲೆಕ್ಕದಲ್ಲಿ ನಮೂದಿಸಿದೆ. ಅದು ಹೀಗೆ -

1) ತಿರುಮಲೆಯ ಆಲಯಲೆಕ್ಕಿಗರಿಂದ ಆದ ಆವಣಿ ಬ್ರಹ್ಮೋತ್ಸವ.

2) ಕಾಡವನ್ ಪೆರುಂದೇವಿ - ಸುಂದರ ಪಾಂಡ್ಯನ ರಾಣಿ- ಆದಿ ಬ್ರಹ್ಮನ ಹೆಸರಿನಲ್ಲಿ ಪುರಟ್ಟಾಸಿ ತಿಂಗಳು.

3) ವಿಜಯನಗರದ ದೇವರಾಯ ಮಹಾರಾಯ - ಅಲ್ಪಶಿ ತಿಂಗಳು.

4) ಬುಕ್ಕರಾಯ ಮಹಾರಾಯ - ಕಾರ್ತೀಕ ಬ್ರಹ್ಮೋತ್ಸವ.

5) ಕೃಷ್ಣರಾಯ ಮಹಾರಾಯ - ತೈ ಮಾಸ

6) ಅರಿಯನ್ (ಹರಿಹರರಾಯ - ಮಹಾರಾಯ) ಮಾಸಿ ತಿಂಗಳು.

7) ವೀರ ನರಸಿಂಗಯಾದವರಾಯ - ಪಂಗುಣಿ ಮಾಸ.

8) ಆಲಯದ ಲೆಕ್ಕಿಗರಲ್ಲಿ ಒಬ್ಬ - ಚಿತ್ತಿರೈ ತಿಂಗಳು.

9)ತಾಳ್ಳಪಾಕ ಪೆರಿಯತಿರುಮಲಯ್ಯಂಗಾರ್ - ಆನಿಮಾಸ.

10) ರಾಮರಾಜ ಚಿನ್ನ ತಿಮ್ಮರಾಜ ಆನಿತಿಂಗಳಿನ ಬ್ರಹ್ಮೋತ್ಸವ (ಸಂಖ್ಯೆ -99. ಈತನಿಗೆ ತಿರುಮಲರಾಜನೆಂದೂ ಎರ್ರ ತಿಮ್ಮ ರಾಜನೆಂದೂ ಹೆಸರುಗಳಿವೆ.)

ಈ ಪಟ್ಟಿಯಲ್ಲಿ ಆನಿಮಾಸದಲ್ಲಿ ಎರಡು ಬ್ರಹ್ಮೋತ್ಸವಗಳನ್ನು ಆಚರಿಸಿ ಒಟ್ಟು ಹತ್ತು ಬ್ರಹ್ಮೋತ್ಸವಗಳಾಗಿರುವುದನ್ನು ಕಾಣುವೆವು. ಅಚ್ಯುತರಾಯನ ಕಾಲದ ಎರಡು ಶಾಸನಗಳಲ್ಲಿ (ಸಂಪುಟ 4 ರ 86 ಹಾಗೂ 110) ಒಂಬತ್ತು ಬ್ರಹ್ಮೋತ್ಸವಗಳನ್ನು ಗುರುತಿಸುತ್ತ, 174 ರಲ್ಲಿ (ಸಂಪುಟ - 4) ಹತ್ತು ಬ್ರಹ್ಮೋತ್ಸವಗಳನ್ನು ಗುರುತಿಸುತ್ತ - ಇವು ಆಡಿ ಮಾಸದಿಂದ ಆರಂಭವಾಗಿ ಆವಣಿ, ಪುರಟ್ಟಾಸಿ, ಅಲ್ಪಶಿ, ಕಾರ್ತಿಕೈ, ತೈ, ಮಾಸಿ ಮತ್ತು ಪಂಗುಣಿಗಳಲ್ಲಿ ಮುಂದುವರಿದು ಚಿತ್ತಿರೈ ಮಾಸದವರೆಗೆ ಬಂದು, ಪೆದ್ದ ತಿರುಮಲಯ್ಯಂಗಾರು ಆನಿಮಾಸದಲ್ಲಿ ಆರಂಭಿಸಿದ್ದನ್ನು (ಸಂಪುಟ 4 ಸಂಖ್ಯೆ 174) ಸೇರಿಸಿದರೆ ಒಟ್ಟು ಹತ್ತು ಬ್ರಹ್ಮೋತ್ಸವ ಆಯಿತು. ಸದಾಶಿವರಾಯನ ಕಾಲದಲ್ಲಿ ಈ ಆಡಿ ಬ್ರಹ್ಮೋತ್ಸವವು ನಿಂತು ಹೋಯಿತು ಎಂದು ತೋರುವುದು. ಏನೇ ಆದರೂ ಐದನೆಯ ಸಂಪುಟದ 153,161, 176 ನೇ ಶಾಸನಗಳಲ್ಲಿ ಹನ್ನೊಂದು ಬ್ರಹ್ಮೋತ್ಸವಗಳು ಕಂಡು ಬರುತ್ತವೆ.


ಆರಂಭದ ಶಾಸನಗಳಲ್ಲಿ (ಸಂಪುಟ 1 ಸಂಖ್ಯೆ 215 ಮತ್ತಿತರ) ಆಡಿ ಮಾಸದಿಂದ ಚಿತ್ತಿರೈವರೆಗೆ 7 ಬ್ರಹ್ಮೋತ್ಸವಗಳು ನಡೆಯುತ್ತಿದ್ದವೆಂದು ಹೇಳಲಾಗಿದೆ. ಈ ಏಳರಲ್ಲಿ ನಮಗೆ ತಿಳಿದಂತೆ ಸಾಮವೈ ರಾಣಿಯು ಕ್ರಿ.ಶ. 614 ರಲ್ಲಿ ಪುರಟ್ಟಾಸಿ, ಮಾರ್ಗಳಿ ತಿಂಗಳುಗಳ ಎರಡು ಉತ್ಸವಗಳನ್ನು ಏರ್ಪಡಿಸಿದಳು. (ಸಂಪುಟ 1 ಸಂಖ್ಯೆ 89) ತಿರುವೆಂಕಟನಾಥಯಾದ ವರಾಯನು (ಸಂ- ಸಂಖ್ಯೆ 99) ಜುಲೈ-1330ರಲ್ಲಿ ಆಡಿ ಮಾಸದಲ್ಲಿ ಏರ್ಪಡಿಸಿದ. ಹರಿಹರರಾಯ II - ನ ಹೆಸರಿನಲ್ಲಿ ಮುಲ್ಲೈ ತಿರುವೆಂಕಟಜೀಯರು ಮಾಸಿಮಾಸದಲ್ಲಿ 1388 ರ ಜನವರಿಯಲ್ಲಿ ಏರ್ಪಡಿಸಿದರು. (ಸಂ- 1 ಸಂಖ್ಯೆ 185,186)

ದೇವರಾಮು II - ಚಾಂದ್ರಮಾನ ಆಶ್ವಯುಜ ಮಾಸದಲ್ಲಿ 1429 ರ ಡಿಸೆಂಬರಿನಲ್ಲಿ ಏರ್ಪಡಿಸಿದನು. (1 - 192) ಅಶ್ವಯುಜ ಮಾಸದಲ್ಲಿ 1429 ರ ಡಿಸೆಂಬರಿನಲ್ಲಿ ಏರ್ಪಡಿಸಿದನು. (1-192) ಆಶ್ವಯುಜ ಮಾಸವು ಸೌರಮಾನದ ಪುರಟ್ಟಾಸಿ ಹಾಗೂ ಅಲ್ಪಶಿ ಮಾಸಗಳೆರಡನ್ನೂ ಅರ್ಧರ್ಧ ಪ್ರತಿನಿಧಿಸುವುದಾಗಿ,ಪುರಟ್ಟಾಸಿ ಮಾಸದಲ್ಲಿ ಸಾಮವೈ ಏರ್ಪಡಿಸಿದ್ದ ಉತ್ಸವವಿದ್ದುದರಿಂದಾಗಿ 2 ನೇ ದೇವರಾಯನು ಏರ್ಪಡಿಸಿದ ಉತ್ಸವ ಅಲ್ಪಶಿ ಮಾಸದಲ್ಲಿ ಮೇಲೆ 5 -129 ರಲ್ಲಿ ತಿಳಿಸಿದಂತೆ ನಡೆದಿರಬೇಕು. ಈ ಐದು ಬ್ರಹ್ಮೋತ್ಸವಗಳೊಡನೆ, ಇನ್ನೆರಡು ಬ್ರಹ್ಮೋತ್ಸವಗಳೊಡನೆ, ಇನ್ನೆರಡು ಬ್ರಹ್ಮೋತ್ಸವಗಳು ಯಾರ ಹೆಸರೂ ಆರಂಭ ಕರ್ತರಾಗಿ ಕಂಡು ಬರದೆ ಇರುವಂತಹವು ಕಂಡು ಬಂದಿವೆ. ಅವುಗಳೆಂದರೆ ಚಿತ್ತಿರೈ (1 -74, 75,61) ಹಾಗೂ ಪಂಗುನಿ (1-220,221) ಒಟ್ಟು ಸೇರಿ ಇವು ಏಳು ಉತ್ಸವಗಳಾದವು ಪುರಟ್ಟಾಸಿ, ಮಾರ್ಗಳಿ, ಆಡಿ,ಮಾಸಿ, ಆಶ್ವಯುಜ (ಅಲ್ಪಶಿ) ಚಿತ್ತಿರೈ ಹಾಗೂ ಪಂಗುನಿ. ಕೃಷ್ಣರಾಯನು ತೈಮಾಸದಲ್ಲಿ ಬ್ರಹ್ಮೋತ್ಸವವನ್ನು 1513 ಜೂನ್ ತಿಂಗಳಿನಲ್ಲಿ ಆರಂಭಿಸಿದ (3 - 64, 65) ಈ ತೈಮಾಸದ ಉತ್ಸವವು 3- 142 ರಲ್ಲಿ ಕೃಷ್ಣರಾಯನಿಂದ ಏರ್ಪಟ್ಟಿತೆಂದು ಹೇಳಲಾಗಿದೆ. ಡಿಸೆಂಬರ್ 1535ರಲ್ಲಿ ಅಚ್ಯುತರಾಯನು ಲಕ್ಷ್ಮೀದೇವಿ ಮಹೋತ್ಸವವನ್ನು (4-54) ಏರ್ಪಡಿಸಿದನು.ಮಾರ್ಚ್ 1539 ರಲ್ಲಿ ತಾಳ್ಲಪಾಕ ಪೆದ್ದ ತಿರುಮಲಾಚಾರ್ಯನು ಆನಿ ಮಾಸದ ಬ್ರಹ್ಮೋತ್ಸವವನ್ನು ಆರಂಭಿಸಿದನು. (4-100,129) ಇವು ಹತ್ತು ಬ್ರಹ್ಮೋತ್ಸವಗಳಾದವು. 4-110 ಶಾಸನವು 1537 ಜನವರಿ ತಿಂಗಳಿನದಾಗಿದ್ದು ಆಡಿ, ಆವನಿ, ಪುರಟ್ಟಾಸಿ, ಅಲ್ಪಶಿ, ಕಾರ್ತಿಕೈ, ತೈ, ಮಾಸಿ, ಪಂಗುನಿ, ಚಿತ್ತಿರೈ ತಿಂಗಳುಗಳ ಒಂಬತ್ತು ಬ್ರಹ್ಮೋತ್ಸವಗಳನ್ನು ವಿವರಿಸುವುದು. 4-174 ನೇ ಶಾಸನವು 1542 ರ ಮಾರ್ಚ್ ತಿಂಗಳಿನದಾಗಿದ್ದು ಮೇಲಿನ ಒಂಬತ್ತು ಜೊತೆಗೆ ಆನಿ ಮಾಸದ ಬ್ರಹ್ಮೋತ್ಸವ ಸೇರಿಸಿ ಹತ್ತು ಎಂದು ತಿಳಿಸುವುದು. ಈ ಎರಡೂ ಪಟ್ಟಿಗಳಲ್ಲಿ ಅವನಿ,ಹಾಗೂ ಕಾರ್ತಿಕೈ ತಿಂಗಳುಗಳಲ್ಲಿ ಎರಡು ಉತ್ಸವಗಳಾಗುವುದನ್ನು ಸೇರಿಸಿರುವುದನ್ನೂ, ಸಾಮವೈ ಆರಂಭಿಸಿದ ಮಾರ್ಗಳಿಯ ಉತ್ಸವವನ್ನು ಬಿಟ್ಟು, ಆಡಿ ಮಾಸದಲ್ಲಿ ತಿರುವೆಂಕಟ ಯಾದವ ರಾಯನದಾದ ಉತ್ಸವ ಸೇರಿಸಿ, ಅಚ್ಯುತರಾಯನ ಲಕ್ಷ್ಮೀದೇವಿ ಮಹೋತ್ಸವವನ್ನು ಕೈಬಿಟ್ಟಿರುವುದನ್ನು ಕಾಣುತ್ತೇವೆ ಲಕ್ಷ್ಮೀದೇವಿ ಮಹೋತ್ಸವವನ್ನು ಬ್ರಹ್ಮೋತ್ಸವವನ್ನು ಕೈಬಿಟ್ಟಿರುವುದನ್ನು ಕಾಣುತ್ತೇವೆ.ಲಕ್ಷ್ಮೀದೇವಿ ಮಹೋತ್ಸವವನ್ನು ಬ್ರಹ್ಮೋತ್ಸವ ವೆಂದು ಗುರುತಿಸದೆ ಹೋಗಿರುವುದರಿಂದ ಈ ಪಟ್ಟಿಯಲ್ಲಿ ಅದನ್ನು ಬಿಟ್ಟಿರಬೇಕು. ಆಲಯದಲ್ಲಿ ವೈಷ್ಣವ ಆಚಾರ, ಆರಾಧನೆಯ ವಿಧಾನಗಳನ್ನು ಪೂರ್ಣವಾಗಿ ಸಂಸ್ಥಾಪಿಸಲೆಂದು 13 ನೆಯ ಶತಮಾನದಲ್ಲಿ ಆರಂಭವಾದ ಅಧ್ಯಯನೋತ್ಸವ, ತಿರುಪ್ಪಳ್ಳಿ ಎಳುಚ್ಚಿಗಳಿಂದಾಗಿ ಸಾಮವೈ ಏರ್ಪಡಿಸಿದ ಮಾರ್ಗಳಿ ಉತ್ಸವವು ಹಿಂದೆ ಬಿದ್ದಿರಬೇಕು.

ಕಾಡವನ್ ಪೆರುಂದೇವಿ ಎಂದು ಸುಂದರ ಪಾಂಡ್ಯನ ರಾಣಿ ಎಂದು ಉಲ್ಲೇಖಿಸಿರುವುದು (5 -129) ಶಾಸನವನ್ನು ರಚಿಸಿದ ಆಲಯ ಲೆಕ್ಕಿಗನು ಮಾಡಿರುವ ತಪ್ಪು ಹಾಗೂ ಅದನ್ನು ನೊಂದಾಯಿಸಿದ ಸ್ಥಾನತ್ತಾರರು ಮಾಡಿರುವ ತಪ್ಪು. ಕಾರಣ ಪುರಟ್ಟಾಸಿಯ ಬ್ರಹ್ಮೋತ್ಸವವನ್ನು ಏರ್ಪಡಿಸಿದದವಳು ಪಲ್ಲವ ರಾಜಕುಮಾರಿ ಸಾಮವೈಯೇ ಹೊರತು ಸುಂದರ ಪಾಂಡ್ಯನ ರಾಣಿಯಲ್ಲ. ಸಂಪುಟ 1 ರಲ್ಲಿನ ಎಂಟು ಹಾಗೂ ಒಂಬತ್ತನೇ ಶಾಸನಗಳಲ್ಲಿ ಆಕೆಯು 'ಶಕ್ತಿ ವಿಟಂಕನ್‌ಯಾನೆ ಕಾಡ ಪಟ್ಟಿಗಳ್ ರಾಣಿಯೆಂದೂ ಪಲ್ಲವ ಪೆರ್ಗಡೆಯಾರರಮಗಳೆಂದೂ, ಕಾಡವನ್ ಪೆರುಂದೇವಿಯೆಂದೂ' ಉದ್ಘೋಷಿಸಲಾಗಿದೆ. ಹಾಗಾಗಿ ಆಕೆಯ ಪಲ್ಲವ ಮಂತ್ರಿಯೋರ್ವನ ಮಗಳು, ಪಲ್ಲವ ರಾಜಕುಮಾರನ ರಾಣಿ ಎಂದಾಗುವುದೇ ಹೊರತು ಪಾಂಡ್ಯ ರಾಜನಾದ ಸುಂದರ ಪಾಂಡ್ಯನ ರಾಣಿಯಲ್ಲ. ಪ್ರಾಯಶಃ ಈತ 13 ನೇ ಶತಮಾನದಲ್ಲಿದ್ದ (1251 ರಿಂದ 1575) ಆಲಯವನ್ನು ಸಂದರ್ಶಿಸಿ, ಹಳೆಯ ಎರಡು ದಾನಗಳನ್ನು ಪುನರುದ್ಧರಿಸಿ, ಆಲಯದ ಗರ್ಭಗುಡಿಯ ಮೇಲೆ ಹೇಮ ಕಲಶ ಸ್ಥಾಪಿಸಿದ ಒಂದನೆ ಜಟಾವರ್ಮ ಸುಂದರ ಪಾಂಡ್ಯನಾಗಿರಬೇಕು. (1-49, 43, 56) ಜೊತೆಗೇ ಕಾಡವನ್ ಪೆರುಂದೇವಿಯ ಕಾಲ 7 ನೇ ಶತಮಾನ ಆಗಿದ್ದು ಸುಂದರ ಪಾಂಡ್ಯನು 13 ನೇ ಶತಮಾನದವನಾಗಿ ಕಾಲ ಕ್ರಮವೂ ಸಹ ಹೊಂದಾಣಿಕೆಯಾಗುವುದಿಲ್ಲ. ಆಲಯದ ನಿರ್ವಾಹಕರು ಎಲ್ಲಿಯೋ ಕೇಳಿಬಂದ ಸುಂದರ ಪಾಂಡ್ಯನ ಹೆಸರನ್ನು ಕಾಡವನ್ ಪೆರುಂದೇವಿಯೊಡನೆ ಸೇರಿಸಿರಬೇಕಷ್ಟೆ.

ಬುಕ್ಕರಾಯನು ಒಂದು ಗ್ರಾಮವನ್ನು ಆಲಯಕ್ಕೆ ನೀಡಿದವನು. (1-178) ಕಾರ್ತೀಕಮಾಸದಲ್ಲಿ ಒಂದು ಬ್ರಹ್ಮೋತ್ಸವವನ್ನು ಆರಂಭಿಸಿದನೆಂಬುದೂ, ಆವಣಿ ಚಿತ್ತಿರೈಗಳಲ್ಲಿ ಆಲಯ ಲೆಕ್ಕಿಗರು ಇದೇ ಉತ್ಸವವನ್ನು ಆರಂಭಿಸಿದರೆಂಬುದೂ ಒಂದು ಹೊಸ ಮಾಹಿತಿ.

ಮೊದಲ ಸಂಪುಟದ 84 ನೇ ಶಾಸನದಿಂದ 94 ನೇ ಶಾಸನದವರೆಗೆ ವೀರ ನರಸಿಂಗದೇವ ಯಾದವರಾಯನ ಹೆಸರು ಕೇಳಿ ಬಂದರೂ, ವೆಂಕಟೇಶ್ವರ ಸ್ವಾಮಿಗೆಂದು ಬ್ರಹ್ಮೋತ್ಸವವನ್ನು ಆರಂಭಿಸಿದ ಉಲ್ಲೇಖವಿಲ್ಲ. ಪಂಗುನಿ ಮಾಸದಲ್ಲಿ ಇದನ್ನು ಆರಂಭಿಸಿದ ಎಂಬುದೂ ಸಹ ಹೊಸ ವಿಷಯವೇ. ಈತನ ರಾಣಿಯು ಆನಿಮಾಸದಲ್ಲಿ ಗೋವಿಂದರಾಜನಿಗೆ



ಬ್ರಹ್ಮೋತ್ಸವವನ್ನು ಏರ್ಪಡಿಸಿದಳು. ಈತನ ಆಡಳಿತದ 30 ನೆಯ ವರ್ಷದಲ್ಲಿ- (1239) ಈ ಗೋವಿಂದರಾಜನ ಉತ್ಸವ ಆರಂಭ ವಾಯಿತು.

ತಾಳ್ಳಪಾಕ ಪೆದ್ದತಿರುಮಲಯ್ಯಂಗಾರನು ಆರಂಭಿಸಿದ ಬ್ರಹ್ಮೋತ್ಸವವನ್ನು ಕುರಿತು ಮೊದಲಬಾರಿಗೆ 1537 ಅಕ್ಟೋಬರ್ ತಿಂಗಳ 4-100 ನೇ ಶಾಸನದಲ್ಲಿ ತಿಳಿಯುವುದಾದರೂ ಅದರ ತಿಂಗಳ ಹೆಸರು ಮುರಿದು ಹೋದ ಭಾಗದಲ್ಲಿದ್ದು ಮರೆಯಾಗಿದೆ. ಆದರೆ ಇಲ್ಲಿ 4 - 129 ರಲ್ಲಿ ಆನಿಮಾಸವೆಂದು 1539 ರ ಮಾರ್ಚ್ ಶಾಸನದಲ್ಲಿ ಉಕ್ತವಾಗಿದೆ.

ಸಂಪುಟ ಐದರಲ್ಲಿನ 99 ರಲ್ಲಿಯೂ, 153, 161, 176 ರಲ್ಲಿಯೂ ಬ್ರಹ್ಮೋತ್ಸವದಲ್ಲಿ ಬಳಸಲಾಗುತ್ತಿದ್ದ ಹಲವು ವಾಹನಗಳ ಹೆಸರುಗಳನ್ನು ಹೇಳಲಾಗಿದೆ.ಎರಡನೆಯದಿನ ರಾತ್ರಿ ಹಂಸ ವಾಹನ,ಮೂರನೆಯ ರಾತ್ರಿ ಸಿಂಹವಾಹನ, ಎಂಟನೆಯದಿನ ರಾತ್ರಿ ಅಶ್ವವಾಹನ, ಒಂಬತ್ತನೆಯ ದಿನ ರಾತ್ರಿ ಶೇಷವಾಹನ, ಏಳನೆಯ ರಾತ್ರಿಗಳಲ್ಲಿ ಗೋವಿಂದರಾಜನನ್ನು ಮದನ ಗೋಪಾಲನಂತೆ ಅಲಂಕರಿಸುತ್ತಿದ್ದರು.

ಹಲವು ಶಾಸನಗಳಲ್ಲಿ ಹೇಳುವಂತೆ ಬ್ರಹ್ಮೋತ್ಸವಗಳನ್ನು ಕಲ್ಯಾಣೋತ್ಸವೆಂದು ಸಾಧಾರಣವಾಗಿ ತಿಳಿಯಲಾಗುವುದು. ಆದರೂ ತಾಳ್ಳಪಾಕ ಸಿರು (ಚಿನ್ನ) ತಿರುಮಲಯ್ಯಂಗಾರನು (ಪೆದ್ದ ತಿರುಮಲಯ್ಯಂಗಾರನ ಹಿರಿಯ ಮಗ) 150 ರೇಖೈ ಪೊನ್ ವಾರ್ಷಿಕ ಆದಾಯದ ನೆಡಿಯಂ ಗ್ರಾಮದ ಅರ್ಧ ಭಾಗವನ್ನು 1547 ರ ಆಗಸ್ಟ್ ಹದಿನೇಳರಂದು ನೀಡಿ ಗೋವಿಂದರಾಜನಿಗೆ ಚಿತ್ತಿರೈ ಮಾಸದಲ್ಲಿ ಐದು ದಿನಗಳ ವೈವಾಹಿಕೋತ್ಸವವನ್ನು ರೋಹಿಣಿ ನಕ್ಷತ್ರದಲ್ಲಿ ಶಾತ್ತುಮೊರೆಯಾಗುವಂತೆ ಎಂದರೆ ರೇವತಿಯಲ್ಲಿ ಆರಂಭ ವಾಗಿರುವಂತೆ (ಸಂಪುಟ 5ಸಂಖ್ಯೆ 99) ಏರ್ಪಡಿಸಿದ. ಗೋವಿಂದ ರಾಜನಿಗೂ ಆತನ ಉಭಯನಾಯಕಿಯರಿಗೂ ತಿರುಮಂಜನವೂ, ಅಂಕುರಾರ್ಪಣದ ದಿನ-ಮೊದಲ ನೈವೇದ್ಯವೂ-ತಿಲ್ಲೈಕ್ಕು ವೈತ್ತಾನ್ ಮಂಟಪದಲ್ಲಿ ಎಂದರೆ ಗರ್ಭಗುಡಿಯ ಮುಂದಿನ ವಿಸ್ತಾರವಾದ ಮುಖ ಮಂಟಪದಲ್ಲಿ ನಡೆಯಬೇಕಾಗಿದ್ದಿತು. (ತಿಲ್ಲೈ ಎಂದರೆ ಚಿದಂಬರವೆಂತರ್ಥ. ಗೋವಿಂದ ರಾಜನ ಆಲಯವನ್ನು ಚಿದಂಬರದಲ್ಲಿ ಕಟ್ಟಿಸಿದವವಳು ನರ್ತಕಿಯಾದ ತಿಲ್ಲೈ) ನಂತರ ಗೋವಿಂದರಾಜನನ್ನು ಗರುಡ ವಾಹನದಲ್ಲಿಯೂ,ಉಭಯನಾಯಕಿಯರನ್ನು ಮೆರವಣಿಗೆಯಲ್ಲಿ ಕರೆತಂದು,ಉಯ್ಯಾಲೆಯಲ್ಲಿ ಕುಳಿತಿರುವಾಗ ಗೋವಿಂದರಾಜನ ಪಾದಗಳನ್ನು ಹಾಲಿನಿಂದ ತೊಳೆದು ಒಬ್ಬ ನಾಯಕಿ ಹಂಸವಾಹನದಲ್ಲಿಯೂ, ಇನ್ನೊಬ್ಬಾಕೆಯನ್ನು ಚಾತಕ ಪಕ್ಷಿವಾಹನದಲ್ಲಿಯೂ ಆಸೀನಗೊಳಿಸಿ, ಗೋವಿಂದರಾಜ ಹಾಗೂ ಉಭಯ ನಾಯಕಿಯರ ನಡುವೆ ಸುಗಂಧ ಬೀರುವ ಪುಷ್ಪ ಮಾಲೆಗಳ ವಿನಿಮಯವಾಗುವುದು. ಎರಡನೆಯ ದಿನ ರಾತ್ರಿಯಲ್ಲಿ ಮದುವೆಯಾದ ಈ ಮೂವರಿಗೆ ಧ್ರುವ ನಕ್ಷತ್ರವನ್ನು ತೋರಿಸುವರು. ನಂತರ ವಸಂತಕ್ಕೆ ಕರೆದೊಯ್ದು ಚಂದನದ ನೀರಿನಿಂದ ಅವರ ವಸ್ತ್ರಗಳು ಪೂರ್ತಿ ತೋಯುವವರೆಗೆ ವಸಂತವಾಡುವರು. ಈ ಶೇಷ ಚಂದನ ತೀರ್ಥವನ್ನು ನೆರೆದ ಭಕ್ತರಲ್ಲಿ ಪರಿಚಾರಕರಲ್ಲಿ ವಿತರಣೆ ಮಾಡುವರು. ಎರಡನೆಯ ದಿನ ಸಂಜೆ ತಿರುಮಂಜನ.ಅಲಂಕಾರ ನೈವೇದ್ಯಗಳಾದ ನಂತರ ಎರಡನೆಯ ದಿನ ರಾತ್ರಿ ಶೇಷವಾಹನದಲ್ಲಿ ಮೆರವಣಿಗೆಯಲ್ಲಿ ಅವರನ್ನು ಊರ ಪ್ರದಕ್ಷಿಣೆಗೆ ಒಯ್ಯುತ್ತಿದ್ದರು. ಮೂರನೆಯ ದಿನ ಅಭ್ಯಂಜನ, ಆರೋಹಣೆಗಳಾದ ನಂತರ ವೈಕುಂಠ ವಿಮಾನದಲ್ಲಿ ಈ ಮೂವರನ್ನೂ ಮೆರವಣಿಗೆಯಲ್ಲಿ ಕರೆದೊಯ್ಯುತ್ತಿದ್ದರು. ನಾಲ್ಕನೆಯ ದಿನ ಯಥಾವಿಧಿಯಾಗಿ ತಿರುಮಂಜನ ನಿವೇದನೆಗಳಾದ ಮೇಲೆ ಅಂದು ರಾತ್ರಿ ಗೋವಿಂದರಾಜ ಸ್ವಾಮಿಗೆ ಹನುಮಂತ ವಾಹನದಲ್ಲಿಯು, ಆತನ ಇಬ್ಬರು ನಾಯಕಿಯರನ್ನು ಪಲ್ಲಕ್ಕಿಯಲ್ಲಿಯೂ ಕರೆದುಕೊಂಡು ಮೆರವಣಿಗೆಯಲ್ಲಿ ಊರು ಸುತ್ತಿ ಬರುತ್ತಿದ್ದರು.ಹೀಗೆ ಮನುಷ್ಯರ ಮುದುವೆಯಲ್ಲಿ ಅನುಸರಿಸುವ ವಿಧ್ಯಮಾನಗಳನ್ನು ದೇವರ ಮದುವೆಯಲ್ಲಿ ಅನುಸರಿಸುವುದನ್ನು ನೋಡಬಹುದಾಗಿದೆ.

ವೆಂಕಟೇಶ್ವರನಿಗೆಂದು ನಡೆಸುವ ಬ್ರಹ್ಮೋತ್ಸವದಲ್ಲಿ ಒಂದು ಹೊಸ ಪ್ರಕ್ರಿಯೆಯನ್ನು ಸೇರಿಸಲಾಯಿತು. ಅದೆಂದರೆ ಕೋಯಿಲ್ ಆಳ್ವಾರ್ ತಿರುಮಂಜನ. (ಆಲಯವನ್ನು ವ್ಯಕ್ತೀಕರಿಸಿ ಆಳ್ವಾರ್ ಎಂದು ಕರೆಯಲಾಗಿದೆ - ಹಾಗಾಗಿ ಆಲಯವನ್ನು ತೊಳೆಯುವ ಕೆಲಸ- ಕೋಯಿಲ್ ಆಳ್ವಾರ್ ತಿರುಮಂಜನ) ಆಲಯದ ಗೋಡೆಗಳನ್ನೂ, ಆಲಯವನ್ನೂ ಚಂದನಕರ್ಪೂರ ಮುಂತಾದ ಸುಗಂಧ

ದ್ರವ್ಯಗಳಿಂದ, ಯಾತ್ರಿಕರು ಬಂದು ಹೋಗುವುದ ರಿಂದುಂಟಾಗುವ ಧೂಳುಗಾಳಿಗಳನ್ನು ತೊಳೆದು ಬೆಳಗುವುದು. ಐದನೆಯ ಸಂಪುಟದ ಇಪ್ಪತ್ತೈದನೆಯ ಶಾಸನ ದಲ್ಲಿ 1544 ರ ಅಕ್ಟೋಬರ್ 19 ರಂದು ತಿರುಪತಿಯ ವರ್ತಕನಾದ ವಂಗಾಪುರಂ ನಾರಾಯಣ ಸೆಟ್ಟಿಯು ಈ ಪರಿಶುಭ್ರತೆಯ ಕಾರ್ಯಕ್ಕೆ ಏರ್ಪಾಡು ಮಾಡಿದ್ದಾನೆ.ಆದರೆ ಈ ಪರಿಶುಭ್ರತೆಯ ವಿಧಿ ವಿಧಾನ,ಯಾವ ಬ್ರಹ್ಮೋತ್ಸವದಲ್ಲಿ ಅಥವಾ ಉತ್ಸವದಲ್ಲಿ ಈ ಕ್ರಿಯೆ ಅನುಷ್ಠಾನಕ್ಕೆ ಬರಬೇಕೆಂದು ಹೇಳಿಲ್ಲ. ಈ ಪ್ರಕ್ರಿಯೆಯು ಈಗಲೂ ಮುಂದುವರೆದಿದ್ದು ಈಗ ನಡೆಯುವ ಬ್ರಹ್ಮೋತ್ಸವದ ಮೊದಲಿನ ಎರಡು ಮೂರು ದಿನಗಳಲ್ಲಿ ನಡೆಸಲಾಗುತ್ತದೆ. ಪ್ರಧಾನ ಹಾಗೂ ಇತರ ಎಲ್ಲ ದೇವರುಗಳನ್ನು ವಸ್ತ್ರದಿಂದ ಮುಚ್ಚಿ ಆಲಯದ ತಿರುಮಾಮಣಿ ಮಂಟಪದವರೆಗಿನ ಎಲ್ಲ ಕೋಣೆಗಳ ಗೋಡೆಗಳನ್ನು ನೀರಿನಿಂದ ತೊಳೆದು ಚೆಂದನ ಕರ್ಪೂರದ ಮಿಶ್ರಣವನ್ನು ಪೂಸಿ, ಅದನ್ನು ಪುನಃ ನೀರಿನಿಂದ ತೊಳೆದು ನೆಲವನ್ನೂ ಇದೇ ರೀತಿ ತೊಳೆಯಲಾಗುವುದು. ಇದಾದ ನಂತರ ಯಾತ್ರಿಕರನ್ನು ದರ್ಶನಕ್ಕೆ ಅನುಮತಿಸಲಾಗುವುದು.

ಇದೇ ದಾನಿ ನಾರಾಯಣ ಸೆಟ್ಟಿಯು ಮಾರ್ಚ್ - ಏಪ್ರಿಲ್ ತಿಂಗಳ ಪಂಗುನಿ ಮಾಸದಲ್ಲಿ ಸ್ವಾತಿ ನಕ್ಷತ್ರದಲ್ಲಿ ಆರಂಭವಾಗಿ ಉತ್ತಿರಾಡಂ (ಉತ್ತರಾಷಾಢ)ನಕ್ಷತ್ರದಲ್ಲಿ ಶಾತ್ತು ಮೊರೆಯಾಗುವಂತೆ ಐದು ದಿನಗಳ ಕಾಲ ನಡೆಯುವ ದಮನಾರೋಹಣೋತ್ಸವವನ್ನು (ಸ್ವಾಮಿಯನ್ನು ಪೂರ್ಣವಾಗಿ ಸುಗಂಧ ಬೀರುವ ದವನದಿಂದ ಮುಚ್ಚಿ ಪೂಜಿಸುವ ಉತ್ಸವ) ಗೋವಿಂದರಾಜ ಸ್ವಾಮಿಗೆ ವಸಂತ ಋತುವಿನ ಉತ್ಸವವಾಗಿ ಏರ್ಪಡಿಸಿದನು. ಶ್ರೀ ವೆಂಕಟೇಶ್ವರ ಸ್ವಾಮಿಯ ಪತ್ನಿ ಪದ್ಮಾವತೀ ದೇವಿಯ ಅವತಾರ ನಕ್ಷತ್ರ ಉತ್ತರಾಷಾಢ ಎಂಬ ನಂಬಿಕೆಯಿಂದಾಗಿ, ಉತ್ತರಾಷಾಢ ನಕ್ಷತ್ರದಲ್ಲಿ ಉತ್ಸವ ಮುಗಿಯಬೇಕೆಂದು ಅಪೇಕ್ಷಿಸಲಾಯಿತು. ಈ ಉತ್ಸವದ ಐದು ದಿನ ನಡೆಯ ಬೇಕೆಂದು ಆಯೋಜಿಸಿದ್ದರೂ, ಸ್ವಾತಿ ಮತ್ತು ಉತ್ತರಾಷಾಢ ನಕ್ಷತ್ರಗಳ ನಡುವೆ ಏಳು ದಿನಗಳಾಗುವುವು.

ಕಾರ್ತೀಕ ಮಾಸದಲ್ಲಿ ಶ್ರವಣ ನಕ್ಷತ್ರದ ದಿನ ವನಭೋಜನಕ್ಕೆ ಏರ್ಪಡಿಸಿದ್ದವ್ಯವಸ್ಥೆಗೆ ಅಧಿಕ ಧನವನ್ನು ಕೊಡಮಾಡಿಸಿದ್ದೇ ಅಲ್ಲದೇ ಈ ದಾನಿಯು ವೆಂಕಟೇಶ್ವರ, ಗೋವಿಂದರಾಜ, ಸುದರ್ಶನರುಗಳಿಗೆ ಬೇರೆ ಬೇರೆ ಸಂದರ್ಭಗಳಲ್ಲಿ ನಿವೇದನೆಯ ಏರ್ಪಾಡುಗಳನ್ನೂ ಉಂಟು ಮಾಡಿದನು (ಸಂಖ್ಯೆ 66) ಈ ಎಲ್ಲ ವಿಷಯಗಳನ್ನು ಪೂರೈಸಲು ನಾರಾಯಣ ಸೆಟ್ಟಿ ಹಾಗೂ ಆತನ ಕುಟುಂಬದ ಸದಸ್ಯರು ಇಡುಗಂಟಾಗಿ ಆಲಯದ ಶ್ರೀಭಂಡಾರಕ್ಕೆ 48,900 ಪಣಗಳನ್ನು ನೀಡಿದರು. ಇಂತಹದೇ ಒಂದು ವನಭೋಜನವನ್ನು ತಾಳ್ಳಪಾಕ ಪೆದ್ದ ತಿರುಮಲಯ್ಯಂಗಾರನು ಇದೇ ಕಾರ್ತಿಕೈ ತಿಂಗಳಿನಲ್ಲಿ ತಿರುಮಲೆಯಲ್ಲಿ 1537 ರ ಅಕ್ಟೋಬರ್ 25 ರಂದು ಶ್ರೀ ವೈಷ್ಣವರಿಗಾಗಿಯೂ, ತನ್ನ ಬಂಧುಗಳಿಗಾಗಿಯೂ ಏರ್ಪಡಿಸಿದನು. (ಸಂಪುಟ 4, ಸಂಖ್ಯೆ 100)

1543 ರ ಡಿಸೆಂಬರ್ 31 ರಂದು ತಿರುಪತಿಗೆ ಸೇರಿದ ಇನ್ನೊಬ್ಬ ವರ್ತಕ ಕಾಳಟ್ಟಿ ಸೆಟ್ಟಿಯು ವೆಂಕಟೇಶ್ವರ ಹಾಗೂ ಜ್ಞಾನಪ್ಪಿರಾನರಿಗೆ (ವರಾಹಸ್ವಾಮಿಗೆ) ತೈಮಾಸದ ಆರಂಭದ ಅಮಾವಾಸ್ಯೆಯ ನಂತರದಿಂದ ಮೂವತ್ತು ದಿನಗಳು ಮಾಸಿ ಮಾಸದ ಆರಂಭದ ಅಮಾವಾಸ್ಯೆಯವರೆಗೆ, ಪ್ರತಿನಿತ್ಯ ತಿರುಮಂಜನ, ನಂತರ ಲಘುನಿವೇದನೆಗಳು, ಶ್ರೀನಿವಾಸ ಪುರಾಣವನ್ನು ಓದುವ ಬ್ರಾಹ್ಮಣನಿಗೆ ತಿಂಗಳಿಗೆ ಒಂದು ರೇಖೈ ಪೊನ್ ಸಂಭಾವನೆ, ಮುಕ್ಕೋಟಿ ದ್ವಾದಶಿಯ ದಿನ ವರಾಹಸ್ವಾಮಿಯ ಆಲಯದ ಮುಂದಿದ್ದ ತನ್ನ ಮಂಟಪದಲ್ಲಿ ಮಲೈಯ ಕಿನಿಯ ನಿನ್ರಪೆರುಮಾಳರಿಗೂ ಉಭಯನಾಯಕಿಯರಿಗೂ ತಿರುಮಂಜನ ಹಾಗೂ ಸುಗ್ರಾಸ ನಿವೇದನೆಗಳಿಗೆ ಏರ್ಪಾಡು ಮಾಡಿದನು. (ಸಂ- 5, ಸಂಖ್ಯೆ 10)

(ಈ ಶ್ರೀನಿವಾಸ ಪುರಾಣ ಯಾವುದು ಎಂಬುದು ತಿಳಿದು ಬಂದಿಲ್ಲ. ವಿಷ್ಣು - ವೆಂಕಟೇಶ್ವರನ ವಕ್ಷಃಸ್ಥಲ ವಾಸಿಯಾದಿ ಶ್ರೀ ಶ್ರೀನಿವಾಸನ ಪ್ರಾಚೀನ ಕಥೆಯೇ ಇದಾಗಿರಲು ಸಾಧ್ಯ. ಆದರೆ ವೆಂಕಟಾಚಲ ಮಾಹಾತ್ಮೆಯೇ ಇದು ಎಂಬುದನ್ನಾಗಲೀ, ಬೇರೆಯೇ ಆದ ಒಂದು ಸಂಗ್ರಹವೇ ಎಂಬುದನ್ನಾಗಲೀ ಶಾಸನ ವಿವರಿಸದು)

16 ನೆಯ ಶಾಸನವು ಶೆವ್ವರಾಯ ವಡಮಲೈ ಅಪ್ಪರ ಮಗ ನಾಗಪ್ಪಯ್ಯನು ತನ್ನ ಧರ್ಮವಾಗಿ ಒಂದು ಕಲ್ಲಿನ ರಥವನ್ನು ನಿರ್ಮಿಸಿದನೆಂದು ತಿಳಿಸುವುದು.

ಬ್ರಹ್ಮೋತ್ಸವದ ಒಂಬತ್ತನೇ ದಿನಗಳಲ್ಲಿ ಉತ್ಸವ ಮೂರ್ತಿಗಳಿಗೆ ಎಣ್ಣೆ ಹಾಗೂ ಅರಿಷಣದ ಸಂಯುಕ್ತವನ್ನು ಲೇಪಿಸುವರು. ಇದನ್ನು ತಿರುಚೂರ್ಣ ಕಾಪ್ಪು ಅಥವಾ ಚೂರ್ಣಾಭಿಷೇಕ ಎನ್ನುವರು. ನಂತರ ಬೀದಿಗಳಲ್ಲಿ ಮೆರವಣಿಗೆ ನಡೆಯುವಾಗಿ ಈ ಅರಿಷಿಣದ ಪುಡಿಯನ್ನು ಭಕ್ತರಲ್ಲಿ ವಿತರಣೆ ಮಾಡುವರು. ಈ ಲೇಪನವನ್ನು 41 ನೆಯ ಶಾಸನದಲ್ಲಿ ವಿವರಿಸಲಾಗಿದೆ. ಈ ಲೇಪನ ಸಮಯದಲ್ಲಿ ನೈವೇದ್ಯ ವಿತರಣೆ ಆಗುವುದು.



# ತಿರುಮಲೆ

ಬಿ.ಎನ್.ಎಸ್.



ಕಲಿಯುಗ ವೈಕುಂಠವೆನ್ನಿಸಿರುವ ತಿರುಪತಿಯು ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯಲ್ಲಿದ್ದು ವಿಶ್ವಪ್ರಸಿದ್ಧವಾಗಿದೆ. ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕನಾದ ಶ್ರೀವೆಂಕಟೇಶ್ವರಸ್ವಾಮಿ ನೆಲೆನಿಂತಿರುವ ಪುಣ್ಯಭೂಮಿ ತಿರುಪತಿ ಕ್ಷೇತ್ರದ ತಿರುಮಲೆ ಕೃತಯುಗದಲ್ಲಿ ನರಸಿಂಹ ಸ್ವಾಮಿ, ತ್ರೇತಾಯುಗದಲ್ಲಿ ಶ್ರೀರಾಮ, ದ್ವಾಪರದಲ್ಲಿ ಶ್ರೀ ಕೃಷ್ಣ ಹಾಗೆಯೇ ಕಲಿಯುಗದಲ್ಲಿ ವೆಂಕಟೇಶ್ವರ ಸ್ವಾಮಿ - ಎಂಬುದು ಜನ ನಂಬಿಕೆ ಪುರಾಣ ವಚನವಾಗಿದೆ.

ಬೆಟ್ಟದ ಮೇಲಿರುವ ಆಲಯ ಯಾವಾಗ, ಯಾರಿಂದ, ಎಷ್ಟು ವೆಚ್ಚದಲ್ಲಿ, ಎಷ್ಟು ಮಂದಿ ಕೆಲಸಮಾಡಿ ನಿರ್ಮಿಸಿದರು ಎಂಬ ಬಗ್ಗೆ ಖಚಿತ ಮಾಹಿತಿಗಳಾವುವೂ ಲಭ್ಯವಿಲ್ಲ ಕ್ರಿಸ್ತ ಶಕದ ಆರಂಭ ಕಾಲದಲ್ಲಿ ಸಾಹಿತ್ಯ ಕೃತಿಗಳಲ್ಲಿ ತಿರುವೆಂಗಡದ ಗುಡಿಯ ಅಲ್ಲಿನ ಉತ್ಸವಗಳ ಬಗ್ಗೆ ಪ್ರಸ್ತಾಪವುಂಟು.ಆಳ್ವಾರುಗಳು ಹಾಡಿದ ತಮಿಳು ಹಾಡುಗಳಲ್ಲಿ (ಪಾಶುರಗಳಲ್ಲಿ) ಶ್ರೀ ವೆಂಕಟೇಶ್ವರನ ಸ್ತುತಿ ಇದ್ದು, ಇಲ್ಲಿನ ದೇವಾಲಯದ ಬಗೆಗೆ ಪ್ರಸ್ತಾಪವಿಲ್ಲ. ಕುಲಶೇಖರ ಆಳ್ವಾರರು 'ನಿನ್ನ ಗುಡಿಯ ಬಾಗಿಲ ಹೊಸಿಲಾಗಿ ನಿನ್ನ ಹವಳದ ತುಟಿಯ ನೋಡುವ ಆಸೆ - ಎನ್ನುವ ಹಾಡಿನಲ್ಲಿ ಇಲ್ಲೊಂದು ಆಲಯವಿದ್ದಿತೆಂಬುದು ಖಚಿತವಾಗುತ್ತದೆ. ವೈಕುಂಠದಿಂದ ಸ್ವಾಮಿ ಇಳಿದುಬಂದ ವಿವರ, ತಿರುವೆಂಗಡದ ಪರಿಸರದ ವಿವರಗಳನ್ನು ದಶಪುರಾಣಗಳು ತಿಳಿಸುತ್ತವೆ. ಆದರೆ 933 ಅಥವಾ 614 ರ ಸಾಮವೈ ಶಾಸನದ ಕಾಲಕ್ಕೆ ಇಲ್ಲೊಂದು ಆಲಯವಿದ್ದಿತ್ತೆಂದು ತಿಳಿದುಬರುತ್ತದೆ. ಶ್ರೀನಿವಾಸಪದ್ಮಾವತಿಯರ ಕಲ್ಯಾಣಘಟ್ಟವೂ, ಪುಷ್ಕರಿಣೀ ತೀರದಲ್ಲಿ ಸ್ವಾಮಿ ನೆಲೆಸಿದ ಕಥೆಯೂ ವರಾಹ ವಾಮನ ಪುರಾಣಗಳಲ್ಲಿ ವಿವರ ಸಮೇತ ಬಂದಿರುವುದು ಜನಪ್ರಿಯವಾಗಿದೆ. ಅದೇ ಪುರಾಣೋಕ್ತಿಯಂತೆ ಆಕಾಶರಾಜನ ಸಹೋದರ ತೊಂಡಮಾನನು ವೆಂಕಟೇಶ್ವರ ಸ್ವಾಮಿ ಬೆಟ್ಟದ ಮೇಲೆ ನೆಲೆಸಿರಲು ತಕ್ಕುದಾದ ಭವ್ಯವಾದ ಮಂದಿರವನ್ನು ನಿರ್ಮಿಸಿದ. ತೊಂಡಮಾನನು ನಿರ್ಮಿಸಿದ ಆಲಯ ವಿಸ್ತಾರ, ವೈಭಗಳನ್ನು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳಬೇಕು. ಈಗ ಇರುವ ದೇವಾಲಯವನ್ನು ಹಲವು ಹನ್ನೊಂದು ಮಂದಿ, ಹಲವು ಕಾಲಘಟ್ಟಗಳಲ್ಲಿ, ಹಲವು ರೀತಿಯ ಪದ್ಧತಿಗಳನ್ನು ಅನುಸರಿಸಿ ನಿರ್ಮಿಸಿದರೆಂಬುದು ಇಲ್ಲಿನ ಕೆಲವು ಶಾಸನಗಳಿಂದ ತಿಳಿಯಲಾಗಿದೆ. 12 ನೇ ಶತಮಾನದ ಒಂದು ಶಾಸನದಲ್ಲಿ 'ವೀರ ನರಸಿಂಹರಾಯ ಯಾದವರಾಜನು ಈ ಪ್ರಾಂತ್ಯವನ್ನು ಆಳುತ್ತಿದ್ದಾಗ ತಿರುಪುಲ್ಲಾಣಿದಾಸ ಎಂಬುವವರು ಆಲಯದ ಜೀರ್ಣೋದ್ಧಾರ ಮಾಡಿಸಿದರು. ಅದಕ್ಕೆ ಮುಂಚೆ ಅಲ್ಲಿನ ಗೋಡೆಗಳ ಮೇಲಿನ ಶಾಸನಗಳನ್ನು ಪ್ರತಿ ಮಾಡಿಕೊಂಡು ಜೀರ್ಣೋದ್ಧಾರವಾದ ಬಳಿಕ ಹೊಸಗೋಡೆಯ ಮೇಲೆ ಪುನರ್ಲಿಖಿಸಬೇಕು ಎಂಬ ರಾಜಾಜ್ಞೆಯನ್ನು ಪಾಲಿಸಲಾಗಿದೆ' - ಎಂದಿದೆ. ಈ ರೀತಿಯಲ್ಲಿ ಪುನರ್ಲಿಖಿಸಲಾದ ಶಾಸನಗಳು ನಾಲ್ಕು ಇವೆ. ಅವುಗಳಲ್ಲಿ ಸಾಮವೈ ರಾಣಿ ಏರ್ಪಡಿಸಿದ್ದ (ಬ್ರಹ್ಮೋತ್ಸವ) ಉತ್ಸವ ಶಾಸನಗಳು ಎರಡು. ಅನಂತರ ಮೂಲ ಆಲಯದ ಅಂಗವಾಗಿರುವ ತಿರುಮಾಮಣಿ ಮಂಟಪ, ಹೊರಗಡೆಯ ಸಂಪಂಗಿ ಪ್ರದಕ್ಷಿಣೆಯ ತಿರುಮಲರಾಯ ಮಂಟಪ, ಅದರೊಳಗಿನ ಅನ್ನಾ ಊಂಜಲ್ ಮಂಟಂಪ, ಶಾಸನೋಕ್ತ ಸೇರ್ಪಡೆಗಳು. ಅದಕ್ಕೆ ಹೊರಗಿನ ರಂಗನಾಯಕ ಮಂಟಪ ಶಾಸನದಲ್ಲಿ ಉಲ್ಲೇಖವಿಲ್ಲದಿದ್ದರೂ ಯಾದವರಾಯರ (ವಿಜಯನಗರ ಪೂರ್ವಕಾಲದ ಸ್ಥಳೀಯ ರಾಜರುಗಳು) ನಿರ್ಮಾಣ ಎಂಬುದೂ, ಹೊರಗೆ ಈಗಿಲ್ಲವಾದ ಸಾವಿರ ಕಾಲು ಮಂಟಪವೂ ನಂತರದ ಕಾಲದ ನಿರ್ಮಾಣಗಳು.

ತಿರುಮಲೆಯ ಆಲಯವನ್ನು ಮೂರು ಪ್ರಾಕಾರಗಳಲ್ಲಿ ನಿರ್ಮಿಸಲಾಗಿರುವುದು ಸಪ್ತಗಿರೀಶ (ಏಳು ಬೆಟ್ಟಗಳ ಒಡೆಯ)ನ ದೇವಳದಲ್ಲಿ ಸಪ್ತದ್ವಾರಗಳು ಸರಿಸುಮಾರು 250 ಅಡಿ ಅಗಲ ಹಾಗೂ 450 ಅಡಿ ಉದ್ದಗಳ ಅಳತೆಯ ಹೊರ ಆವರಣ ಬೃಹದಾಕಾರದ ಕಲ್ಲುಗಳಿಂದ ಸುಮಾರು 25-30 ಅಡಿ ಎತ್ತರವಾಗಿ ನಿರ್ಮಾಣವಾಗಿದ್ದು ಪೂರ್ವದಿಕ್ಕಿಗೆ ಮುಖದ್ವಾರವನ್ನು ಹೊಂದಿದೆ. ಸಿಂಹದ್ವಾರದ ಈ ಮಂಟಪವನ್ನು ಪಡಿಕಾವಲಿ ಎಂದು ಕರೆಯುವರು. ಐದು ಅಂತಸ್ತಿನ ಗೋಪುರವನ್ನು ಒಳಗೊಂಡ ಈ ದ್ವಾರ ಗೋಪುರದಿಂದ ಆಲಯವನ್ನು ಪ್ರವೇಶಿಸಿದರೆ ಮೊದಲು ಕಾಣಸಿಗುವುದು ಪ್ರತಿಮಾಮಂಟಪ. ವಿಶ್ವವಿಖ್ಯಾತ ವಿಜಯನಗರದ ರಾಜ ಶ್ರೀಕೃಷ್ಣ ದೇವರಾಯ ತನ್ನ ಇಬ್ಬರು ರಾಣಿಯರು ತಿರುಮಲದೇವಿ, ಚಿನ್ನಾಜಿಅಮ್ಮನವರೊಡನೆ ಅಂಜಲೀ ಬದ್ಧನಾಗಿ ಭಕ್ತಿಯಿಂದ ನಿಂತು ಸ್ವಾಮಿಯ ಸೇವೆ ಮಾಡುತ್ತಿರುವ ಲೋಹದ ಪ್ರತಿಮೆಗಳು ಮಂಟಪದ ಬಲಭಾಗದಲ್ಲಿದೆ.



ಎಡಭಾಗದಲ್ಲಿ ಅಚ್ಯುತರಾಯ ಆತನ ರಾಣಿ ವರದಾಜಿ ಅಮ್ಮನವರ ಶಿಲಾಮಯ ಪ್ರತಿಮೆಗಳು, ವೆಂಕಟಪತಿರಾಯನ ಲೋಹ ಪ್ರತಿಮೆಯೂ ಇವೆ. ಇಲ್ಲಿ ಮೊದಲಿಗೆ ಎಡಗಡೆಗೆ ಎತ್ತರವಾದ ಅಧಿಷ್ಠಾನದಲ್ಲಿ ನಿರ್ಮಾಣ ಆಗಿರುವ ರಂಗನಾಯಕ ಮಂಟಪವಿದೆ. ಇದೊಂದು ಗರ್ಭಗುಡಿ ಹೊಂದಿದ ಆಲಯವೇ.ದಕ್ಷಿಣ ಭಾರತ ವಿಧರ್ಮಿಯರ ಧಾಳಿಗೆ ಗುರಿಯಾದಾಗ ಶ್ರೀ ರಂಗದ ರಂಗನಾಥ ಸ್ವಾಮಿಯ ಉತ್ಸವ ವಿಗ್ರಹವನ್ನು ಇಲ್ಲಿಗೆ ತಂದು ರಕ್ಷಿಸಿದ್ದಾಗಿ ಚರಿತ್ರೆ, ಕೋಯಿಲ್ ಮಹಾತ್ಮೆಗಳು ಹೇಳುತ್ತವೆ. ಹಾಗಾಗಿ ಇದು ರಂಗನಾಯಕ ಮಂಟಪವೆಂದು ಹೆಸರಾಯಿತೆಂಬ ವಿವರದ ತಾಮ್ರ ಫಲಕವನ್ನು ಇಲ್ಲಿ ಹಾಕಲಾಗಿದೆ. ಅದರ ದಕ್ಷಿಣಕ್ಕೆ ಅನ್ನಾ ಊಂಜಲ್ (ಹಂಸತೂಲಿಕಾ ಮಂಟಪ) ಎತ್ತರದ ವೇದಿಕೆಯಲ್ಲಿ ನಿರ್ಮಾಣವಾದ ಸಾಳುವ ನರ



ಸಿಂಹನ ಕಾಲದ ಮಂಟಪ. ಇಲ್ಲಿ ಒಂದೊಮ್ಮೆ ದೇವರಿಗೆ ಉಯ್ಯಾಲೆ ಸೇವೆ ಜರಗುತ್ತಿತ್ತು. ನಂತರ ಇಲ್ಲಿ ಆಸ್ಥಾನ ಮಂಟಪ ನಿರ್ಮಿಸಿ ಇಡೀ ನಿರ್ಮಾಣವನ್ನು ಹೊರಭಾಗಕ್ಕೆ ವಿಸ್ತರಿಸಲಾಯಿತು.ಇದು ನಡೆದದ್ದು ಅಳಿಯ ರಾಮರಾಯನ ತಮ್ಮ ತಿರುಮಲರಾಯನ ಕಾಲದಲ್ಲಿ.ಈ ಮಂಟಪದಲ್ಲಿ ಆರ್ಕಾಟು ನವಾಬನ ಕಾಲದಲ್ಲಿ ಸೇವೆ ಮಾಡಿದ ನವಾಬನ ಮಂತ್ರಿ ಲಾಲಖೇಮ ರಾಮ (ತ್ರೋದರಮಲ್) .ಆತನ ತಾಯಿ ಮೋಹನದೇವಿ, ಹೆಂಡತಿ ಪಿತಾಬೀಬಿ ವಿಗ್ರಹಗಳಿವೆ. ಬ್ರಹ್ಮೋತ್ಸವದ ಧ್ವಜಾರೋಹಣ ಸಂದರ್ಭದಲ್ಲಿ ಸ್ವಾಮಿ ಉಭಯನಾಯಕಿಯರೊಡನೆ ಇಲ್ಲಿ ಆಸೀನರಾಗಿ ಪರ್ಯವೇಕ್ಷಿಸುವರು. ಇದರ ಉತ್ತರಕ್ಕೆ ಎಂದರೆ ಆಲಯದ ಪ್ರತಿಮಾ ಮಂಟಪದ ಎದುರಿಗೆ ಧ್ವಜಸ್ತಂಭ ಮಂಟಪವಿದೆ. ಇಲ್ಲಿ ಆಲಯದ ಬಲಿಪೀಠ ಧ್ವಜಸ್ತಂಭಗಳು ಇವೆ. ಇದಾದ ನಂತರ ಬೆಳ್ಳಿಯ ಬಾಗಿಲಿನಿಂದ ಒಳಕ್ಕೆ ಹಾದು ಆಲಯದ ಪ್ರದಕ್ಷಿಣಾ ಮಂಟಪಕ್ಕೆ ಬರಬೇಕು. ಬಯಲಿನಲ್ಲಿ ನಿಂತಿದ್ದ ಬಲಿಪೀಠ ಧ್ವಜಸ್ತಂಭಗಳಿಗೆ ನೆರಳನ್ನು ನೀಡುವ 20 ಕಂಬಗಳ ಈ ಮಂಟಪ ನಿರ್ಮಾಣದ ಬಗ್ಗೆ ಯಾವ ಶಾಸನವೂ ಇಲ್ಲ. ಇಡೀ ಆಲಯದಲ್ಲಿ ಎಲ್ಲಿಯೂ ಇಲ್ಲದೆ, ಇಲ್ಲಿ ಮಾತ್ರವೇ ಬಾಲದಲ್ಲಿ ಗಂಟೆ ಕಟ್ಟಿದ ಆಂಜನೇಯ ವಿಗ್ರಹದ ಕಂಬದ ಆಧಾರದಲ್ಲಿ ಈ ಮಂಟಪವನ್ನು ಸಾಳುವ ನರಸಿಂಹರಾಯನ ಕಾಲದಲ್ಲಿ ಆಲಯದಲ್ಲಿ ಪೂಜೆಯ ಜವಾಬ್ದಾರಿ ಹೊತ್ತು ಹನ್ನೆರಡು ವರ್ಷ ಸೇವೆ ಸಲ್ಲಿಸಿದ ಕನ್ನಡದ ವ್ಯಾಸರಾಯ ನಿರ್ಮಿತವೆಂದು ಕೆಲವರ ವಾದ, ಧ್ವಜ ಸ್ತಂಭದ ಎದುರಿಗೆ ಸಂಪಂಗಿ ಪ್ರದಕ್ಷಿಣೆಯ ಉತ್ತರಕ್ಕೆ ಅಯಿನಾಮಹಲ್ ಇದೆ. ಈ ಮಂಟಪದ ನಿರ್ಮಾಣ ವಿವರಗಳನ್ನು ತಿಳಿಸುವ ಯಾವ ಶಾಸನವೂ ಇಲ್ಲ.ಎರಡು ಭಾಗವಾಗಿರುವ ಈ ಮಂಟಪದಲ್ಲಿ ಪಶ್ಚಿಮದ ಕೋಣೆ ಕನ್ನಡಿಗಳಿಂದ ತುಂಬಿದ್ದು ಸ್ವಾಮಿಯನ್ನು ಉಭಯನಾಯಕಿಯರಾದ ಶ್ರೀದೇವಿ ಭೂದೇವಿಯರೊಂದಿಗೆ ಉಯ್ಯಾಲೆಯಲ್ಲಿ ಆಸೀನಗೊಳಿಸಿ ತೂಗಿದಾಗ ಇಲ್ಲಿನ ಕನ್ನಡಿಗಳಲ್ಲಿ ಸಾವಿರಾರು ಮೂರ್ತಿಗಳು ಕಂಡು ಬಂದು ಸ್ವಾಮಿ 'ಸಹಸ್ರ ಶೀರ್ಷಾ ಪುರುಷಃ' ಎಂಬ ಪುರುಷಸೂಕ್ತ ಸಾಕಾರ ವಾಗುತ್ತದೆ. ಸಂಪಂಗಿ ಪ್ರದಕ್ಷಿಣೆಯಲ್ಲಿ ತಿರುಮಲರಾಯ ಮಂಟಪದ ಪಶ್ಚಿಮಕ್ಕೆ ಪ್ರದಕ್ಷಿಣಾ ಪಥದಲ್ಲಿ ಹೊರ ಪ್ರಾಕಾರದ ಗೋಡೆಗೆ ಹೊಂದಿಕೊಂಡಂತೆ ಕೋಣೆಗಳು ಇವೆ. ಈಗ ಕಲ್ಯಾಣೋತ್ಸವಗಳು ನಡೆಯುವುದು ಮಧ್ಯದಲ್ಲಿರುವ ವೈಭವದ ಮಂಟಪದಲ್ಲಿ ನಂತರ ಪಶ್ಚಿಮಕ್ಕಿರುವ ಮಂಟಪಗಳು ದೇವಾಲಯದ ಉಗ್ರಾಣಕ್ಕೆ ಬಳಕೆಯಾಗಿವೆ. ಉತ್ತರದ ಮಂಟಪಗಳಲ್ಲಿ ಸ್ವಾಮಿಯ ಪ್ರಸಾದ 'ಲಾಡು' ಗಳನ್ನು ಸಿದ್ಧಪಡಿಸಲಾಗುತ್ತದೆ. ಇದರ ಸನಿಹದಲ್ಲಿಯೇ ಹೂವಿನ ಕೋಣೆ, ದಾಸ್ತಾನು ಕೋಣೆ, ದಾಸ್ತಾನು ಕೋಣೆಗಳಿವೆ.

ಧ್ವಜಸ್ತಂಭ ಮಂಟಪದ ನಂತರ ಸಿಗುವ ಬೆಳ್ಳಿಯ ಬಾಗಿಲಿನ ಮೂಲಕ ಪ್ರದಕ್ಷಿಣಾ ಪಥಕ್ಕೆ ಬಂದರೆ ಅಲ್ಲಿ ಕಿರಿದಾದ ವರದರಾಜಸ್ವಾಮಿ ಆಲಯವಿದೆ. ಇದರ ಹಿಂಭಾಗದಲ್ಲಿ ಸ್ವಾಮಿಯ ನಿವೇದನೆಗಳ ಪಾಕಶಾಲೆ ಇದ್ದು ಅದನ್ನು 'ಪೋಟ್ಟು' ಎಂದು ಕರೆಯುತ್ತಾರೆ. ವರದ ಹಸ್ತವಿರುವ ಸ್ವಾಮಿಯ ವಿಗ್ರಹ ವರದರಾಜಸ್ವಾಮಿ ಆಲಯದಲ್ಲಿದೆ. ಪೋಟ್ಟುವಿನಲ್ಲಿ ಶ್ರೀನಿವಾಸನ ತಾಯಿ ವಕುಳಮಾಲಿಕೆಯ ವಿಗ್ರಹವಿದೆ. ರಜತದ್ವಾರದಿಂದ ಒಳಬಂದರೆ ತಿರುಮಾಮಣಿ ಮಂಟಪದೊಡನೆ ಕೂಡಿದ ಆಲಯದ ಗರುಡ ಮಂಟಪ. ಇದರ ಹೊರಗೆ ಗೋಪುರದಲ್ಲಿ ರಂಗನಾಥಸ್ವಾಮಿ ಶಯನ ಭಂಗಿಯಲ್ಲಿರುವ ವಿಗ್ರಹವುಂಟು. ರಜತದ್ವಾರದ ಬಲಗಡೆಗೆ ತುಸು ಎತ್ತರದಲ್ಲಿ ನರಸಿಂಹಸ್ವಾಮಿ ಆಲಯ. ಇವುಗಳ ನಡುವೆ ಪ್ರದಕ್ಷಿಣಾಪಥ. ಇಲ್ಲಿ ಪೋಟ್ಟು - ಪಾಕಶಾಲೆಯ - ಮುಂದೆ ಬಂಗಾರದ ಬಾವಿಯಿದೆ. ಎರಡನೆಯದು ರಾಮಲಕ್ಷ್ಮಣ ವಿಗ್ರಹ ಕೋಣೆ. ಇದರ ಮುಂಭಾಗದಲ್ಲಿ ಯಾತ್ರಿಕರಿಗೆ ತೀರ್ಥ ಶಠಾರಿ ನೀಡಲಾಗುತ್ತದೆ. ಮೂರನೆಯ ಕೋಣೆ ಅರ್ಚಕರ ಬಳಕೆಯದು. ಇದಕ್ಕೆ ಎದುರಾಗಿ ಪ್ರದಕ್ಷಿಣಾಪಥದ ಉತ್ತರದಲ್ಲಿಯೂ ಇಂತಹವೇ ಮೂರು ಕೋಣೆಗಳುಂಟು. ದೇವರ ಸೇವೆಯ ಪರಿಕರದ ಕೋಣೆಗಳು. ಪ್ರದಕ್ಷಿಣಾಪಥದ ಆಗ್ನೇಯದಲ್ಲಿ ಪಾಕಶಾಲೆ - ಪೋಟ್ಟು

ಇದ್ದರೆ ನೈರುತ್ಯದಲ್ಲಿ ಕಲ್ಯಾಣಮಂಟಪವಿದೆ. ಈಗ ಯಾತ್ರಿಕರು ಕಾಣಿಕೆ ನೀಡುವ ಹುಂಡಿಯ ಸಂಗ್ರಹದ ಚಿಲ್ಲರೆ ನಾಣ್ಯಗಳ ಎಣಿಕೆಗೆ ಬಳಸುವ ಕೋಣೆಯನ್ನಾಗಿಸಲಾಗಿದೆ. ಪ್ರದಕ್ಷಿಣಾಪಥದ ದಕ್ಷಿಣದಲ್ಲಿ ಹುಂಡಿಯ ಕಾಣಿಕೆಗಳನ್ನು ವರ್ಗೀಕರಿಸಿ ಲೆಕ್ಕ ಕಟ್ಟುವ ಪರಕಾಮಣಿ ಕೋಣೆಯನ್ನಾಗಿಸಿದೆ. ಇಲ್ಲಿ ಉತ್ತರದಲ್ಲಿ ಮೊದಲಿಗೆ ವಿಮಾನ ವೆಂಕಟೇಶ್ವರನ್ನು ದರ್ಶಿಸುವ ವೇದಿಕೆಯಿದೆ. ನಂತರ ಆಲಯದಲ್ಲಿ ಹುಂಡಿಯ ಎದುರಿಗಿರುವ ಅನ್ನಮಾಚಾರ್ಯರ ಸಂಗೀತ ಭಂಡಾರ ಅದರ ಬದಿಯಲ್ಲಿ ಭಗವದ್ರಾಮಾನುಜರ ಮಂದಿರ ಇವೆ.ನಂತರದ ಎರಡು ಕೋಣೆಗಳನ್ನು ಸುತ್ತಿ ಬರುವಾಗ ನರಸಿಂಹಸ್ವಾಮಿ ಆಲಯದ ಪ್ರದಕ್ಷಿಣೆಯಾಗುವುದು.

ಪ್ರದಕ್ಷಿಣಾಪಥದಲ್ಲಿ ಮುಖ್ಯಾಲಯ, ಹೊರಭಾಗದಲ್ಲಿ ಪೂರ್ವಕ್ಕೆ ಪಶ್ಚಿಮಾಭಿಮುಖವಾಗಿ ಸ್ವಾಮಿಗೆ ಕೈಜೋಡಿಸಿ ನಿಂತಿರುವ ಗರುಡ ವಿಗ್ರಹವಿರುವ ಗರುಡಮಂಟಪ. ಇದನ್ನು ಒಳಗೊಂಡ ಕಂಬಗಳಿಂದ ಕೂಡಿದ ಭಿತ್ತಿಗಳಿಲ್ಲದ ತಿರುಮಾಮಣಿ ಮಂಟಪ. ಇದರ ಪಶ್ಚಿಮ ಭಾಗಕ್ಕೆ ಬಂಗಾರದ ಬಾಗಿಲು. ಬಂಗಾರದ ಬಾಗಿಲಿನ ಎಡಭಾಗದಲ್ಲಿ ಆಲಯದ ಗಂಟೆಗಳು.ಇದರಿಂದಾಗಿಯೇ ಇದಕ್ಕೆ ತಿರುಮಾಮಣಿ ಮಂಟಪ ಎಂದು ಹೆಸರು. ಇದನ್ನು ಚಂದ್ರಗಿರಿಯ ಮಲ್ಲಣ್ಣನು ನಿರ್ಮಿಸಿದನು. ಇದರ ವಾಯುವ್ಯ ದಿಸೆಯಲ್ಲಿ ವಿಭಾಗ ಮಾಡಿದ ಬಯಲು ಕೋಣೆಯಲ್ಲಿ ಯಾತ್ರಿಕರು ದೇವರಿಗೆ ಕಾಣಿಕೆ ಸಮರ್ಪಿಸುವ ಹುಂಡಿಯಿದೆ.


ತಿರುಮಾಮಣಿ ಮಂಟಪದಿಂದ ಬಂಗಾರದ ಬಾಗಿಲಿನ ಮೂಲಕ ಒಳಬಂದರೆ ಆಲಯದ ಮುಖಮಂಟಪ. ಇದು ಸ್ವಾಮಿಯ ಲಘುದರ್ಶನ ಕೇಂದ್ರ. ಇದರ ನಂತರ ರಾಮರ್ ಮೇಡೈ ಎಂಬ ಅಂತರಾಳ. ಮೊದಲಿಗೆ ಇಲ್ಲಿಂದ ಹೊರಹೋಗಿ ಆಲಯದ ಒಳಗೇ ಪ್ರದಕ್ಷಿಣೆ ಮಾಡಬಹುದಾಗಿತ್ತು ಎನ್ನುವ ಅಭಿಪ್ರಾಯವಿದೆ. ಮಧ್ಯಕಾಲದಲ್ಲಿ ಉತ್ತರ ದಕ್ಷಿಣಗಳಲ್ಲಿ ಗೋಡೆ ಎಬ್ಬಿಸಿ ಜಗಲಿಯನ್ನುಂಟುಮಾಡಿ ಆಲಯದ ಇತರ ವಿಗ್ರಹಗಳಿಗೆ ಎಡೆಮಾಡಲಾಯಿತು. ಈಗ ಇಲ್ಲಿ ಯಾವ ವಿಗ್ರಹಗಳು ಇಲ್ಲ. ಪ್ರದಕ್ಷಿಣಾಪಥ ಗರ್ಭಗುಡಿಯ ಸುತ್ತ ಇದ್ದು ಅದರ ಬಾಗಿಲು ತಿರುಮಾಮಣಿ ಮಂಟಪದ ಹೊರಗಡೆಯಿದ್ದು ಅದನ್ನು ವೈಕುಂಠ ಪ್ರದಕ್ಷಿಣೆ ಎನ್ನುವರು.ವೈಕುಂಠ ಏಕಾದಶಿಯಂದು ಮಾತ್ರವೇ ಈ ಪ್ರದಕ್ಷಿಣಾ ಮಾರ್ಗದಲ್ಲಿ ಆಲಯವನ್ನು ಸುತ್ತಿಬರಲು ಅವಕಾಶ. ರಾಮರ್‌ಮೇಡೈ ನಂತರ ಶಯನ ಮಂಟಪ. ನಿತ್ಯ ರಾತ್ರಿ ಸ್ವಾಮಿಯನ್ನು ಚಿನ್ನದ ತೊಟ್ಟಿಲಿನಲ್ಲಿಟ್ಟು ಏಕಾಂತ ಸೇವೆಯನ್ನು ಮಾಡುವ ಮಂಟಪ. ಇಲ್ಲಿಂದ ಮುಂದೆ ಸುಮಾರು ಹತ್ತು ಅಡಿ ಎತ್ತರದ ಶ್ರೀ ವೆಂಕಟೇಶ್ವರಸ್ವಾಮಿ ನಿಂತಿರುವ ಗರ್ಭಗುಡಿ. ಈ ಗರ್ಭಗುಡಿಯ ಹೊಸ್ತಿಲನ್ನು ಕುಲಶೇಖರ ಪಡಿ ಎಂದು ಕರೆಯುವರು. ಅದನ್ನು ದಾಟಿ ಗರ್ಭಗುಡಿಗೆ ಅರ್ಚಕರ ವಿನಃ ಅನ್ಯರಿಗೆ ಪ್ರವೇಶವಿಲ್ಲ.

ಗರ್ಭಗುಡಿಯಲ್ಲಿ ನಿಂತಿರುವ ಸ್ವಾಮಿಯೊಡನೆ ಹಲವು ವಿಗ್ರಹಗಳಿವೆ. ಎಲ್ಲವು ಚರಮೂರ್ತಿಗಳು. ಸ್ವಾಮಿ ಪಾದದ ಬಳಿ ನಿಂತ ಅತಿ ಚಿಕ್ಕ ಭೋಗ ಶ್ರೀನಿವಾಸ. ಸಾಮವೈರಾಣಿ ಸಾವಿರವರ್ಷಗಳ ಹಿಂದೆ ಮಾಡಿಸಿ ನೀಡಿದ ಬೆಳ್ಳಿಯ ಮೂರ್ತಿ. ನಂತರ ಪ್ರತಿನಿತ್ಯ ಆಲಯದಲ್ಲಿ ಓಲಗ ನೀಡುವ ಕೊಲುವು ಶ್ರೀನಿವಾಸ ಗರ್ಭಗುಡಿಯಿಂದ ಹೊರಗಿರುವ ತಿರುಮಾಮಣಿ ಮಂಟಪದಲ್ಲಿ ಪ್ರತಿನಿತ್ಯ ಸ್ವಾಮಿಯ ಓಲಗ ನಡೆಯುತ್ತದೆ. ಅಲ್ಲಿ ಪಂಚಾಗ ಪಠಣವಾಗಿ ಹಿಂದಿನ ದಿನದ ಲೆಕ್ಕಗಳನ್ನು ಒಪ್ಪಿಸಲಾಗುವುದು. ಈ ಸಭೆಯ



## ಸಹಸ್ರ ದೀಪಾಲಂಕಾರ ಸೇವೆ

ಪ್ರತಿ ದಿನ ಸಾಯಂಕಾಲ 6 ಗಂಟೆಗೆ ತಿರುಮಲೆಯ ಆಲಯದ ಹೊರಗೆ ಇರುವ ಊಂಜಲ್ ಮಂಟಪದಲ್ಲಿ (ನಾದನೀರಾಜನ ಪಕ್ಕದಲ್ಲಿ) "ಸಹಸ್ರದೀಪಾ ಲಂಕಾರ ಸೇವೆ" ಅಂದರೆ "ಊಂಜಲ್ ಸೇವೆ" ನಡೆಸ ಲಾಗುತ್ತದೆ. ಶ್ರೀದೇವಿ ಭೂದೇವಿ ಸಮೇತವಾಗಿ ಮಲೆಯಪ್ಪ ಸ್ವಾಮಿಯು ಮೆರವಣಿಗೆಯಾಗಿ ಬಂದು ಸಹಸ್ರದೀಪ ಬೆಳ ಗಿಸಿದ ಮಂಟಪದಲ್ಲಿ ಊಂಜಲ್ ಸೇವೆಯಲ್ಲಿ ಪಾಲ್ಗೊಳ್ಳುತ್ತಾರೆ. ಅರ್ಜಿತ ಸಲ್ಲಿಸಿದ ಭಕ್ತರು ಕೂಡಾ ಈ ಸೇವೆಯಲ್ಲಿ ಪಾಲ್ಗೊಳ್ಳಬಹುದು. ಅರ್ಜಿತ ಭಕ್ತರು ಇಲ್ಲದಿದ್ದರೂ ಪ್ರತಿ ದಿನ ಸಾಯಂಕಾಲ ಈ ಸೇವೆ ನಡೆಯುತ್ತದೆ. "ಸಹಸ್ರ ದೀಪಾಲಂಕಾರ" ಸೇವೆಯ ನಂತರ ಮಹಾಪ್ರದಕ್ಷಿಣೆ ಮಾರ್ಗದಲ್ಲಿ ಶ್ರೀಸ್ವಾಮಿಯವರ ಮೆರವಣಿಗೆ ನಡೆಯುತ್ತದೆ. ಆದರೆ ಪ್ರತಿ ತಿಂಗಳು ರೋಹಿಣಿ ನಕ್ಷತ್ರದಂದು ರುಕ್ಮಿಣಿ ಶ್ರೀಕೃಷ್ಣರಿಗೆ , ಪುನರ್ವಸು ದಿನದಂದು ಶ್ರೀ ಸೀತಾರಾಮ ಲಕ್ಷ್ಮಣ ಸ್ವಾಮಿಯವರಿಗೆ ಸಹಸ್ರ ದೀಪಾಲಂಕಾರ ಸೇವೆ ನಡೆಯುತ್ತದೆ. ಆರುದ್ರ ನಕ್ಷತ್ರದ ದಿನ ಶ್ರೀ ಮಲೆಯಪ್ಪ ಸ್ವಾಮಿಯ ಜೊತೆ ಎದುರಿಗೆ ಮತ್ತೊಂದು ಪಲ್ಲಕಿಯ ಮೇಲೆ ಶ್ರೀ ರಾಮಾನುಜರ ವಿಗ್ರಹದ ಮೆರವಣಿಗೆ ನಡೆಯುತ್ತದೆ.





ಅಧ್ಯಕ್ಷತೆ ಓಲಗ ಶ್ರೀನಿವಾಸನದು. ಸ್ವರ್ಣ ಸಿಂಹಾಸನದಲ್ಲಿ ಸ್ವರ್ಣ ಶ್ವೇತ ಛತ್ರಗಳಡಿಯಲ್ಲಿ ಮೂಲ ವಿರಾಟ್ ಸ್ವಾಮಿಯೊಡನೆ ಸುವರ್ಣ ಸಂಬಂರಧ ಸೂತ್ರ ಹೊಂದಿದ ಓಲಗ ಶ್ರೀನಿವಾಸನ ದರ್ಬಾರ್ ಇದು. ಮೂರನೆಯ ಚರ ವಿಗ್ರಹ - ಉಗ್ರ ಶ್ರೀನಿವಾಸ - ಕೈಶಿಕ ದ್ವಾದಶಿಯ ದಿನ (ಕಾರ್ತೀಕ ಮಾಸದ ಉತ್ಥಾನ ದ್ವಾದಶಿ) ಸೂರ್ಯ ಹುಟ್ಟುವ ಮುನ್ನ ಮೆರವಣಿಗೆ ಬಂದು ಆಲಯಕ್ಕೆ ಹಿಂದಿರುಗುವ ಶ್ರೀ ಭೂಸಹಿತ ಮೂರ್ತಿ. ಜೊತೆಗೆ ಪ್ರತಿ ಉತ್ಸವ ಮೆರವಣಿಗೆಯಲ್ಲಿ ಪಾಲ್ಗೊಂಡು ಗರ್ಭಗುಡಿಯಿಂದ ಹೊರೆಗೆ ಸ್ವಾಮಿಗೆ ನಡೆಯುವ ಎಲ್ಲ ಪೂಜೆಗಳನ್ನು ಸ್ವೀಲಿಸುವ ಮೂರ್ತಿ. ನಿತ್ಯೋತ್ಸವ, ವಾರೋತ್ಸವ, ಪಕ್ಷೋತ್ಸವ, ಸಂವತ್ಸರೊತ್ಸವ ಇತ್ಯಾದಿ ಹಲವಾರು ಪೂಜೆಗಳು ನೆರವೇರುತ್ತವೆ. ಬ್ರಹ್ಮೋತ್ಸವಗಳಲ್ಲಿ ಪ್ರತಿನಿತ್ಯ ವಿವಿಧ ವಾಹನಗಳಲ್ಲಿ ಹೊರಬರುವ ಸ್ವಾಮಿ, ಪ್ರತಿನಿತ್ಯ ಕಲ್ಯಾಣ ಸೇವೆ ಸ್ವೀಕರಿಸುವ ನಿತ್ಯಕಲ್ಯಾಣ ಪಚ್ಚತೋರಣ ಮೂರ್ತಿ. ಈತನನ್ನು ಮಲೆಯಪ್ಪಸ್ವಾಮಿ ಎಂದು ಕರೆಯುತ್ತಾರೆ. ಒಟ್ಟು ಈ ಐದು ಮೂರ್ತಿಗಳನ್ನು 'ಪಂಚಬೇರ' ಎಂದು ಕರೆಯುವರು, ಇದರೊಂದಿಗೆ ಶ್ರೀಕೃಷ್ಣ (ಬಾಲ ಕೃಷ್ಣ), ರುಕ್ಮಿಣೀ ವಿಗ್ರಹಗಳೂ, ಸೀತಾರಾಮಲಕ್ಷ್ಮಣ ಹನುಮ ವಿಗ್ರಹಗಳೂ (ಇವು ಹೊರಗೆ ಸ್ವಾಮಿ ತೀರ್ಥ ನೀಡುವ ಮಂಟಪದಲ್ಲಿವೆ.) ಆಜ್ಞಾಪಾಲಕ ಹನುಮಂತನ ವಿಗ್ರಹವೂ ಉಂಟು.

ವರ್ಷಕ್ಕೆ ಒಮ್ಮೆ ನವರಾತ್ರಿಯಲ್ಲಿ ನಡೆಯುವ ಒಂಭತ್ತು ದಿನಗಳ ಬ್ರಹ್ಮೋತ್ಸವ ತಿರುಮಲೆಯಲ್ಲಿ ನಡೆಯುವ ಅತಿ ವೈಭವದ ಉತ್ಸವ ಇತಿಹಾಸಕಾಲದಲ್ಲಿ ಒಂದು ವರ್ಷಕ್ಕೆ ಹತ್ತು ಬ್ರಹ್ಮೋತ್ಸವಗಳು ನಡೆಯುತ್ತಿದ್ದಂತೆ ತಿಳಿಸುವ ಶಾಸನ ಉಂಟು. ಮಿಕ್ಕಂತೆ ವಾರ್ಷಿಕ ಉತ್ಸವಗಳು - ಪ್ಲವೋತ್ಸವ (ತೆಪ್ಪೋತ್ಸವ), ವಸಂತೋತ್ಸವ, ಪದ್ಮಾವತಿ ಪರಿಣಯ, ವೈಕುಂಠಏಕಾದಶಿ, ಆಣಿವರ ಆಸ್ಥಾನ (ಕರ್ಕಾಟಕ ಸಂಕ್ರಾಂತಿಯ ಹೊತ್ತಿಗೆ ನಡೆಯುವ ವಾರ್ಷಿಕ ಲೆಕ್ಕ ಪತ್ರಗಳ ದಿನಗಳ ಉತ್ಸವ), ಅಧ್ಯಯನೋತ್ಸವ, ಕೋಯಿಲ್ಆಳ್ವಾರ್ ತಿರುಮಂಜನ ಮುಂತಾದವುಗಳು ಇದರೊಂದಿಗೆ ಪ್ರತಿದಿನದ ಸುಪ್ರಭಾತ, ಅರ್ಚನೆ, ತೋಮಲಸೇವೆ, ಕಲ್ಯಾಣೋತ್ಸವ, ಡೋಲೋತ್ಸವ, ನಿತ್ಯ ನೆರೆವೇರುತ್ತವೆ. ವರ್ಷದ ಎಲ್ಲ ದಿನಗಳಲ್ಲೂ ಯಾತ್ರಿಕರ ಅತಿ ಸಂದಣಿಯಿಂದ ಶೋಭಿಸುವ ಒಂದು ಆಲಯವೆಂದರೆ ಅದು ತಿರುಮಲೆ. ಸ್ವಾಮಿಯ ಭಕ್ತೆಯಾದ ತರಿಗೊಂಡ ವೆಂಗಮಾಂಬ ಹೆಸರಿನ ಅನ್ನಸತ್ರವಿದ್ದು ಬರುವ ಯಾತ್ರಿಕರಿಗೆ ಉಚಿತ ಭೋಜನ ಸೌಕರ್ಯವಿದೆ.

# ಏಕಾಂತಸೇವೆ




"ಏಕಾಂತಸೇವೆ" "ಪಾನ್ಪು ಸೇವೆ" "ಪವಳಿಂಪುಸೇವೆ" (ಶಯನ ಸೇವೆ) ಎಂದು ಹೇಳುತ್ತಾರೆ. ತಿರುಮಲೆ ಸ್ವಾಮಿಯ ದೇವಸ್ಥಾನದಲ್ಲಿ ಪ್ರತಿದಿನ ನಡೆಯುವ ಕಾರ್ಯಕ್ರಮದಲ್ಲಿ ಕೊನೆಯ ಸೇವೆ ಏಕಾಂತಸೇವೆ, ಏಕಾಂತ ಸೇವೆಗೆ ಸಮಯವಾದಲ್ಲಿ ಸರ್ವ ದರ್ಶನವನ್ನು ನಿಲ್ಲಿಸುತ್ತಾರೆ.

ಶಯನ ಮಂಟಪದಲ್ಲಿ ಬೆಳ್ಳಿ ಸರಪಳಿಯಿಂದ ಇಳಿಬಿಟ್ಟ ಬಂಗಾರದ ರೇಷ್ಮೆ ಮಂಚದ ಮೇಲೆ ಭೋಗ ಶ್ರೀನಿವಾಸ ಮೂರ್ತಿಯನ್ನು ಮಲಗಿಸುತ್ತಾರೆ.

ರಾಮುಲವಾರಿ ಮೇಡದಲ್ಲಿ ತಾಳ್ಳಪಾಕ ವಂಶಸ್ಥರು ಒಬ್ಬರು ಜೋಗುಳ ಹಾಡು ಅಥವಾ ಲಾಲಿಹಾಡು ಹಾಡಲು ಸಿದ್ಧವಾಗಿರುತ್ತಾರೆ. ಅದೇ ಸಮಯದಲ್ಲಿ ಮಾತೃಶ್ರೀ ತರಿಗೊಂಡ ವೆಂಗಮಾಂಬ ಕಡೆಯವರಿಂದ ಆರತಿ ತಟ್ಟೆ ಬರುತ್ತದೆ.

ಅನ್ನಮಯ್ಯ ವಂಶಸ್ಥರು "ಜೊ ಅಚ್ಯುತಾನಂತ ಜೊ ಜೊ ಮುಕುಂದಾ".......! ಎಂದು ಹಾಡು ಹಾಡುತ್ತಾ ಇರುವಾಗ ತರಿಗೊಂಡ ವೆಂಗ ಮಾಂಬ ಮುತ್ತಿನ ಆರತಿ ನಡೆಯುತ್ತದೆ. ಇದರ ನಂತರ ಬಂಗಾರದ ಬಾಗಿಲನ್ನು ಮುಚ್ಚುತ್ತಾರೆ.



## ತಿರುಮಲೆ
## ಶ್ರೀ ವೆಂಕಟೇಶ್ವರ ಸ್ವಾಮಿಯವರ ನವರಾತ್ರಿ ಬ್ರಹ್ಮೋತ್ಸವಗಳು
## 2020 ಅಕ್ಟೋಬರ್ 16 ರಿಂದ 24 ರ ವರೆಗೆ

**16-10-2020**
ಶುಕ್ರವಾರ
ಹಗಲು: ವಜ್ರಕವಚಾದ್ಯಾಭರಣಗಳೊಂದಿಗೆ
ಬಂಗಾರು ತಿರುಚ್ಚಿ ಉತ್ಸವ
ರಾತ್ರಿ: ದೊಡ್ಡಶೇಷವಾಹನ

**17-10-2020**
ಶನಿವಾರ
ಹಗಲು: ಚಿಕ್ಕಶೇಷವಾಹನ
ರಾತ್ರಿ: ಹಂಸವಾಹನ

**18-10-2020**
ಭಾನುವಾರ
ಹಗಲು: ಸಿಂಹವಾಹನ
ರಾತ್ರಿ:
ಮುತ್ತಿನಚಪ್ಪರವಾಹನ

**19-10-2020**
ಸೋಮವಾರ
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಸರ್ವಭೂಪಾಲವಾಹನ

**20-10-2020**
ಮಂಗಳವಾರ
ಹಗಲು: ಪಲ್ಲಕ್ಕಿಯಲ್ಲಿ
ಮೋಹಿನೀಅವತಾರೋತ್ಸವ
ರಾತ್ರಿ: ಗರುಡವಾಹನ

**21-10-2020**
ಬುಧವಾರ
ಹಗಲು: ಹನುಮದ್ವಾಹನ
ರಾತ್ರಿ: ಗಜವಾಹನ

**22-10-2020**
ಗುರುವಾರ
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ

**23-10-2020**
ಶುಕ್ರವಾರ
ಹಗಲು: ಸ್ವರ್ಣ ರಥೋತ್ಸವ
ರಾತ್ರಿ: ಅಶ್ವವಾಹನ

**24-10-2020**
ಶನಿವಾರ
ಹಗಲು: ಚಕ್ರಸ್ನಾನ
ರಾತ್ರಿ: ತಿರುಚ್ಚಿ ಉತ್ಸವ

# ತಿರುಮಲೆಯ ಮಹಾಪ್ರಸಾದಗಳು

-ಪ್ರೊ ॥ಸಿ. ಗೋವಿಂದಾಚಾರ್





ಸರ್ವೇಶ್ವರನಾದ ಶ್ರೀನಿವಾಸಸ್ವಾಮಿಯನ್ನು ಪ್ರತಿನಿತ್ಯವೂ ಗಂಧ,ಪುಷ್ಪ,ಧೂಪ, ದೀಪ ನೈವೇದ್ಯ ಗಳಿಂದ ತೃಪ್ತಿಪಡಿಸುವ ಧಾರ್ಮಿಕ ವಿಧಿ ಅನಾದಿ ಕಾಲದಿಂದಲೂ ಬಂದಿದೆ. "ಯುಕ್ತಾಹಾರ" ಎಂದು ಗೀತೆಯಲ್ಲಿ ಹೇಳುವಂತೆ ಶ್ರೀಶನಿಗೆ ನಿವೇದಿಸಿದ ಸಾತ್ವಿಕ ಆಹಾರವು ಭಕ್ತನಿಗೆ ಮಹಾಪ್ರಸಾದವೇ ಆಗುವುದು. ಇದು ಒಂದು ಯಾಗವಿದ್ದಂತೆ. ಕಟ್ಟು ನಿಟ್ಟಾದ ಪೂಜಾವಿಧಿಗಳು, ವೈಭವೋತ್ಸವಗಳು, ಇತರ ಧಾರ್ಮಿಕ ಚಟುವಟಿಕೆಗಳು, ನಿರ್ವಂಚಿತ ಆಲಯಾಡಳಿತ - ಮುಂತಾದ ಕಾರಣಗಳಿಂದ ಸರ್ವಾಂಗೀಣ ಅಭಿವೃದ್ಧಿ ಸಾಧ್ಯವಾಗಿ ಇಡಿ ಭಾರತದಲ್ಲೇ 'ತಿರುಪತಿ' ಎಂಬ ಪದ ಮನೆ ಮಾತಾಗಿದೆ. ಪಾಶ್ಚಾತ್ಯರಿಂದಲೂ 'ವರ್ಲ್ಡ್ಸ್ ರಿಚೆಸ್ಟ್ ಗಾಡ್' ಎಂದು ಗುರು ತಿಳಿಸ ಲ್ಪಟ್ಟಿರುವ ಏಕೈಕ ದಿವ್ಯ ಕ್ಷೇತ್ರವಿದು.

ಹಿಂದಿನ ಕಾಲದಲ್ಲಿ ನಿವೇದನೆಗಳನ್ನು 'ಸಂಧಿ' ಎಂದು ಕರೆಯುತ್ತಿದ್ದರು. ಉತ್ಸವಗಳು ಹೆಚ್ಚಿದಂತೆ ಪೂಜಾವಿಧಿಗಳು ಅದರಲ್ಲೂ ನಿವೇದನೆಗಳ ಸಂಖ್ಯೆಯೂ ಹೆಚ್ಚುವುದು. ಸಿಂಗಯದಣ್ಣಾಯಕನ ಕಾಲದಲ್ಲಿ ಒಂದು ವರ್ಷದಲ್ಲಿ ಸುಮಾರು 430 ಉತ್ಸವಗಳು ಜರುಗಿ ಶ್ರೀನಿವಾಸನು ಅಂದೇ 'ನಿತ್ಯೋತ್ಸವಸ್ವಾಮಿ' ಆದ.

**ತಿರುಪ್ಪೋನಕಂ - ದೀರ್ಘ ಇತಿಹಾಸ :**

ಅನ್ನಪ್ರಸಾದವೇ ಪ್ರಾಚೀನವಾದ ನಿವೇದನೆ. ಆ ಕಾಲದಲ್ಲಿ ಕಳ್ವರ್ ಬುಡಕಟ್ಟಿಗೆ ಸೇರಿದ ಪುಳ್ಳಿದೊರೆ ಆಳ್ವಿಕೆಯಲ್ಲಿ ಅನ್ನವನ್ನು ಹುಣಿಸೆ ಹಣ್ಣಿನೊಂದಿಗೆ ಕಲಸಿ ಮುತ್ತುಗದೆಲೆಯಲ್ಲಿಟ್ಟು ವೇಂಗಡದೇವರಿಗೆ ನಿವೇದಿಸಲಾಗುತ್ತಿತ್ತು. ಇಂದಿಗೂ ತಮಿಳು ನಾಡಿನ ಕೆಲವು ಹಳ್ಳಿ ಗಾಡಿನಲ್ಲಿರುವ ಪ್ರಾಚೀನವಾದ ದೇವಸ್ಥಾನಗಳಲ್ಲಿ ಈ 'ಪಚ್ಚಪುಳಿ' ಸೇರಿಸಿದ ಅನ್ನಪ್ರಸಾದವನ್ನು ನಿವೇದಿಸುವ ವಾಡಿಕೆ ಇದೆ. ಆದಿವಾಸಿಗಳಾದ ವಡ್ಡರು, ಕುರುವರು, ವೇಂಗಡ ದೇವರನ್ನು ತಮಗೆ ತೋರಿದಂತೆ ಆರಾಧಿಸಿ ಹಣ್ಣು ಗೆಡ್ಡೆ ಗೆಣಸುಗಳನ್ನು ನಿವೇದಿಸುತ್ತಿದ್ದರು. ' ಸಾಮವೈರಾಣಿ ಕಾಲದಲ್ಲಿ ಶ್ರೀಶನಿಗೆ ವ್ಯಂಜನ ರಹಿತವಾದ ಅನ್ನಪ್ರಸಾದದ ನಿವೇದನೆ ಮೂಡಿಬಂತು. 18 ಬಾರಿ ಕುಟ್ಟಿದ ಭತ್ತದಿಂದ ಬಂದ ಅಕ್ಕಿಯಿಂದ ಮಾಡಿದ ಅನ್ನ ತುಂಬಾ ಪವಿತ್ರ ಎಂಬ ಪ್ರಬಲ ನಂಬಿಕೆಯೂ ಇತ್ತು. 11 ನೆ ಶತಮಾನದ ಸುಮಾರಿಗೆ ಅನ್ನದ ಜೊತೆಗೆ ತುಪ್ಪವನ್ನು ಸೇರಿಸಿ ಒಡೆದ ಬೇಳೆಗಳಿಂದ ತಯಾರಾದ ವ್ಯಂಜನಗಳು ಮೂಡಿ ಬಂದುವು. ಶೀಘ್ರದಲ್ಲೇ ತರಕಾರಿ ಮೊಸರು ಇದರಲ್ಲಿ ಸೇರಿ ಸಂಪೂರ್ಣ ಹಾಗೂ ಶ್ರೇಷ್ಠವಾದ ಊಟವೇ ಆಯಿತು. ಹಳೆ ತಮಿಳು ಭಾಷೆಯಲ್ಲಿ ಈ ದಿವ್ಯ ಭೋಜನವನ್ನು 'ತಿರುಪ್ಪೋನಕಂ' ಎಂದು ಕರೆಯಲ್ಪಟ್ಟಿತು. ಸಂತ ಶ್ರೇಷ್ಠರು ಈ ಮೃಷ್ಟಾನ್ನವನ್ನು ವಿವಿಧ ರೀತಿಯಲ್ಲಿ ಕೊಂಡಾಡಿರಿತ್ತಾರೆ.

ಎ) ಶಾಲ್ಯೋದನ ಬೆಣ್ಣೆಕಾಯಿಸಿದ ತುಪ್ಪ ಚಿನ್ನದ ಹರಿವಾಣದಲ್ಲಿ ಭೋಜನ-ಶ್ರೀಪಾದ ರಾಜರು.

ಬಿ) ಷಡುರಸದನ್ನಕ್ಕೆ ನಲಿದಾಡುವ ಜಿಹ್ವೆ ಕಡುರುಚಿಗೊಂಡರೆ ಆ ರುಚಿ ನಿನ್ನದಯ್ಯಾ - ಕನಕದಾಸರು.

ಸಿ) ಅಟ್ಟುಂಡು ಮಿಕ್ಕಿದೆಲ್ಲವ ಎನಗೆ ಹಾಕಿಸೊ, ಪೊಂಬಟ್ಟಲೊಳಗಿನ ಹಾಲು ಉಚ್ಚಿಷ್ಟಹಾಕಿಸೋ - ಪುರಂದರವಿಠಲ.

ಡಿ) ನೈಯಿಡೈ ನಲ್ಲದೋರ್ ಶೋರುಮ್ - ಪೆರಿಯಾಳ್ವಾರರು.

ಇ) ಶ್ರೀನಿವಾಸನೇ ನೀನು ಈ ಮೃಷ್ಟಾನ್ನವನ್ನುಂಡು ಉಳಿದ ಶೇಷ ಪ್ರಸಾದವನ್ನು ತಿನ್ನುವ ನಾವೇ ಧನ್ಯರು, ನಿನ್ನ ದಾಸರಯ್ಯಾ. ಉಡುತ್ತು ಕಳೈಂದನಿನ್‌ಪೀತಹ ವಾಡೈಯುಡುತ್ತ ಕಲತ್ತ ದುಂಡು - ಪೆರಿಯಾಳ್ವಾರರು.



ವೀರನರಸಿಂಗ ಯಾದ ವರಾಯನ ಕಾಲದಲ್ಲಿ (1262 AD) ಇದನ್ನು 'ಅಮುದಪ್ಪಡಿ' ಎಂದು ಕರೆಯುತ್ತಿದ್ದರು. ರಂಗನಾಥಯಾದವರಾಯನ ಕಾಲದಲ್ಲಿ (1354) ಇಂಥಾ ನಿವೇದನೆಗಾಗಿ ಒಂದು ಕಲಂ ಅಕ್ಕಿ (ಇಂದಿನ ಅಳತೆಯಲ್ಲಿ ಸುಮಾರು ಎರಡು ಕ್ವಿಂಟಾಲ್) ತರಕಾರಿ, ತುಪ್ಪ, ಮೆಣಸು, ಉಪ್ಪು, ವೀಳೇದೆಲೆಗಾಗಿ ವೆಂಕಟೇಶನಿಗೆ ದಾನ ಬಂದಿತ್ತು. ತುಪ್ಪ ರಹಿತವಾದ ಅನ್ನಪ್ರಪಸಾದವನ್ನು ನಿವೇದಿಸಕೊಡದೆಂದು ಅರಸಕಟ್ಟಳೆ ಇತ್ತು. ಒಂದು ದಶಕದ ನಂತರ ತಿರುಕಣ್ಣ ಮಡ್ಯೆ ಎಂಬ ಸಿಹಿ ಅನ್ನಪ್ರಸಾದ, ಅಪ್ಪಪ್ಪಡಿ (52 ಅಪ್ಪಗಳು) ನಿವೇದನೆಗಾಗಿ ದಾನಗಳು ಬರತೊಡಗಿದವು. ಅನ್ನದ ಜೊತೆ ಹೆಸರು ಬೇಳೆಯ ತೊವ್ವೆ, ಒಡೆದ ಕಾಳುಗಳಿಂದ ಸುಂಡಲ್, ಪಚಡಿ ಮುಂತಾದ ವ್ಯಂಜನಗಳು ಬಂದುವು. ಇವೇ 'ಪರುಪ್ಪವಿಯಲ್ ತಿರುಪ್ಪೋನಕಂ'. ಮಂತ್ರ ಪುಷ್ಪ ವಿಧಿಯಾದನಂತರ ಶ್ರೀಶನಿಗೆ ತಿರುಪ್ಪೋನಕಂ, ವ್ಯಂಜನಗಳು, ವಕ್ಷಸ್ಥಳದಲ್ಲಿರುವ ಅಲಮೇಲುಮಂಗೈ ಅಮ್ಮನವರಿಗೆ ಅಪ್ಪಪಡಿ ನಿವೇದನೆ ಮಾಡಲು ಸಿಂಗಯ ದಣ್ಣಾಯಕನು ಕಟ್ಟಳೆ ಮಾಡಿದ್ದ. ಕಲಂ, ಪಡಿ, ಮರಕ್ಕಲ್, ಸೂಲಿಗೆ, ಅಳುಕ್ಕು, ಉಳುಕ್ಕು - ಮುಂತಾಗಿ ನಿರ್ದಿಷ್ಟವಾದ ಅಳತೆ ಮಾನಕಗಳು 14 ನೆ ಶತಮಾನದ ಆರಂಭದಲ್ಲಿ ಕಂಡುವು. ತೊವ್ವೆ, ಸಾರು, ಪಲ್ಯಗಳು, ಪಾಯಸ, ಉಪ್ಪಿನಕಾಯಿ ಮೊದಲುಗೊಂಡ ಅಲಂಕಾರದ ಅಡಿಗೆ - 'ಅಲಂಕಾರ ತಿರುಪ್ಪೋನಕಂ' ಉದಯಿಸಿತು. ಭಕ್ತರ ಸಂಖ್ಯೆ ಹೆಚ್ಚಿದಂತೆಲ್ಲಾ ಅಲಂಕಾರದ ಅಡಿಗೆ - 'ಅಲಂಕಾರ ತಿರುಪ್ಪೋನಕಂ' ಉದಯಿಸಿತು. ಭಕ್ತರ ಸಂಖ್ಯೆ ಹೆಚ್ಚಿದಂತೆಲ್ಲಾ ಅಂಕಾರದ ಅಡಿಗೆ ನಿರ್ವಹಣೆ ಪೂರೈಕೆಯ ಹೊರೆ ಹೆಚ್ಚಿತು. ಇದರಿಂದಾಗಿ ಕಲಸಿದ ಅನ್ನಪ್ರಸಾದಗಳು ಬಂದುವು. ಪ್ರಥಮವಾಗಿ ದಧ್ಯೋದನ, ಕ್ರಮೇಣ ಪೊಂಗಲ್‌ಗಳು, ಇವು 'ತಿರುಪ್ಪೋಲಕಂ' ಎಂದು ಕರೆಯಲ್ಪಟ್ಟುವು. ಸಾಳುವ ನರಸಿಂಹನು ದಧ್ಯೋದನ ನಿವೇದನೆಯಲ್ಲಿ ಹಾಲು ಮೊಸರಿಗಾಗಿ 40 ಹಸುಗಳನ್ನು ಆಲಯಕ್ಕೆ ನೀಡಿದ್ದ. ತಿರುಮಂಜನವಾದ ಮೇಲೆ ನಿವೇದನೆ ಮಾಡುವ ಮೊಸರನ್ನದ ಕನಿಷ್ಠ ಪ್ರಮಾಣವನ್ನು ನಿಗದಿಪಡಿಸಲಾಯಿತು.ಶುಂಠಿ ಸೇರ್ಪಡೆ ಹಾಗೂ ಬೆಲ್ಲದ ನೀರಿನಿಂದ ಚುಮುಕಿಸಿದ ದಧ್ಯನ್ನ ಇನ್ನಷ್ಟು ಭೋಗ್ಯವಾಯಿತು. ಕುಲಶೇಖರಪಡಿಯ ಮೇಲಿಟ್ಟು ನಿವೇದಿಸಲ್ಪಟ್ಟ ದಧ್ಯನ್ನ ಇನ್ನಷ್ಟು ಪವಿತ್ರವಾಯಿತು. 14 ನೆ ಶತಮಾನದವರೆಗೂ ಶುದ್ಧಾನ್ನ ಹಾಗೂ ಕಲೆಸಿದ ಅನ್ನ ಪ್ರಸಾದಗಳು ಸಮತುಲಿತ ಆಹಾರವೆಂದು ಪರಿಗಣಿಸಲ್ಪಟ್ಟುವು.

ದಪ್ಪಕ್ಕಿ, ಕುಸುಬಲಕ್ಕಿಯಿಂದ ಅನ್ನ ಪ್ರಸಾದಗಳನ್ನು ತಯಾರಿಸಿ ನಿವೇದಿಸಿದ್ದ ಕಾಲವೂ ಇತ್ತು. ಶ್ರೀನಿವಾಸನಿಗೆ ನಿವೇದನೆಯಾದ ಮೇಲೆ ಮಹಾದ್ವಾರದ ಎದುರುಗಡೆ ಇರುವ ಅಂಜನೇಯನಿಗೆ ನಿವೇದಿಸಲಾಗುತ್ತಿತ್ತು. ''ಈ ದಪ್ಪಕ್ಕಿ ಮಿಡ್ಡಿ ಅನ್ನ ನನಗೆ ಹಿಡಿಸದು, ನಾನು ನಿರ್ಗಮಿಸುವೆನು'' ಎಂದು ಹೇಳಿ ಹೊರಟ ಹನುಮನನ್ನು ಶ್ರೀಶನು ತಡೆದು 'ನಿನಗೆ ಒಳ್ಳೆಯ ಅಕ್ಕಿಯಿಂದ ಮಾಡಿದ ಪ್ರಸಾದ ನಿವೇದಿಸಲಾಗುವುದು ಎಲ್ಲಿಯೂ ಹೋಗ ಬೇಡ' ಎಂದು ಹೇಳಿ ಕಾಲಿಗೆ ಬೇಡಿ ಹಾಕಿದ ಎಂಬ ಸ್ವಾರಸ್ಯಕಥೆ ಇದೆ.

ವಿಜಯನಗರದರಸರ ಕಾಲಕ್ಕೆ ರುಚಿಯಲ್ಲಿ ಭಾರಿ ಮಾರ್ಪಾಡಾಗಿ ಹಚೆ ತಿಂಡಿಗಳು, ಕರಿದ ತಿಂಡಿಗಳು, ಕಡಲೆ, ಕಡಲೆ ಕಾಯಿಯಿಂದ ಮಾಡಿದ ಉಂಡಿಗಳು (ಮಣಿಪರ್ಪು ಪಣ್ಯಾರ) ಬಂದುವು. ಶ್ರೀನಿವಾಸನು ಕಡಲೆಪುರಿ ಪ್ರಿಯನುಕೂಡ ಶುಕ್ರವಾರದಂದು 'ಹರಿಭರೆ' ಎಂಬ ಹುರಿಗಡಲೆ ಸಕ್ಕರೆಪುರಾಣಿ (ಕಲ್ಯಾಣಸೇವೆ) ಯನ್ನು ನಿವೇದಿಸುತ್ತಿದ್ದರು. ಅನ್ನಪ್ರಸಾದ ಭಕ್ಷ್ಯ ಭೋಜ್ಯಗಳ ಸಂಖ್ಯೆ ಮುವ್ವತ್ತಕ್ಕೇರಿತು. ಶ್ರೇಷ್ಠ ಗುಣಮಟ್ಟದ ಅಕ್ಕಿಯಿಂದ ಮಾಡಿದ ರಾಜಾನ್ನ ತಿರುಪ್ಪೋನಕಂ, ತೊವ್ವೆ, ಪಲ್ಯ, ಸುಂಡಲ್ ಮುಂತಾದ ವ್ಯಂಜನಗಳಿಂದ ಕೂಡಿದ ಪರುಪ್ಪವಿಯಲ್ ತಿರುಪ್ಪೋನಕಂ, ವೆಣ್‌ಪೊಂಗಲ್, ತಿರುಕಣ್ಣಮಡ್ಯೆ, ಹೋಮಗಳಿಗಾಗಿ 'ಚರು' , 5 ರೀತಿಯ ಓಗರಗಳು - ಪುಳಿಯೋಗರೆ, ಎಳ್ಳೋಗರೆ, ಉಳುಂದೋಗರೆ, ಕಡುಗೋಗರೆ ಮತ್ತು ತೈರೋಗರೆ, ಪಾಲೇಡುಕೊಳಂಬು ಅಥವ ತೇರೊಟ್ಟಿ ಪಾಲ್ (ಹಾಲುಕೋವ) ಅಪ್ಪ, ಅತಿರಸ, ಖಾರ/ಸಿಹಿ ಶೀಡೆ (ಗೋಲಿಯಂತಿರುವ ತಿಂಡಿ) ಮನೋಹರ (ಬೆಲ್ಲದ ಮಣಿಕೊಂಬು ತಿಂಡಿ) ಕರ್ಜಿಕಾಯಿ (ಕೊಬ್ರಿಸಕ್ಕರೆಯನ್ನು ಹಿಟ್ಟಿನೊಳಗಿಟ್ಟು ಕರಿದ ಕಡುಬು) ಅವಲಕ್ಕಿ, ಪೂರಿ, ಇಡ್ಲಿ, ವಡೆ, ದೋಸೆ, ಗೋಧಿಯ ಸಣ್ಣರವೆಯಿಂದ ಮಾಡಿದ ಸೀರ (ಕೇಸರಿ ಭಾತು) ಸಾಂಬಾರ ಎಳ್ಳುಂಡಿ, ಅಕ್ಕಾರ ವಡಿಶಲ್ ಎಂಬ ಪಾಯಸ, ಪಂಚಾಮೃತ, ತೇಂಗೊಳಲು, ಜನ್ನುಪ್ಪಡಿ, ಬೆಟನಿಕ್ಕಾಯಿ ಇತ್ಯಾದಿ. ಆ ಕಾಲದಲ್ಲಿಯು ಪಾಕಶಾಸ್ತ್ರ ಪ್ರವೀಣರು ಇದ್ದರೆಂಬುದಕ್ಕೆ ಇವು ಸಾಕ್ಷೀ ಭೂತ ವಾಗಿವೆ. ಸಂತರ ದೃಷ್ಟಿಯಲ್ಲಿ ಇವುಗಳ ಭೋಗ್ಯತೆಯನ್ನು ನೋಡೋಣ.



ಎ) ನೈವೇದ್ಯ
ಮೃದು ಭಕ್ಷ್ಯವರ ಪೊಂಗಲು
ಅತಿರಸ ಮನೋಹರ, ಅತಿ ರುಚಿ ಅನ್ನ
ಫಲವು - ಪ್ರಸನ್ನ ವೆಂಕಟದಾಸರು.

ಬಿ)ಅಪ್ಪವು ಅತಿರಸ ತುಪ್ಪ ಚಿನ್ನಿ ಪಾಲು ಸವಿಯು
ಸಕ್ಕರೆಯೊಳಗೊ ಸಕ್ಕರೆಯು ಸವಿಯೊಳಗೊ, ಸವಿಯು, ಸಕ್ಕರೆಯು
ಎರಡೂ ಜಿಹ್ವೆಯೊಳಗೊ - ಕನಕದಾಸರು.

ಸಿ) ಪೆರಿಯಾಳ್ವಾರರು ತಾವು ಯಶೋದೆಯಂತೆ ಭಾವಿಸಿಕೊಂಡು ಕೃಷ್ಣನಿಗೆ ಸ್ನಾನ ಮಾಡಲು ಬಗೆ ಬಗೆಯ ತಿಂಡಿಗಳ ಆಕರ್ಷಣೆಯನ್ನು ಮಾಡಿರುತ್ತಾರೆ.1) ಅಪ್ಪವನು ಕೊಡುವೆನು ಬಾರಪ್ಪ (ಪೆ.ಆ.ತಿ.ಮೊ. 2-3-5), 2) ಅಪ್ಪ ಕಜ್ಜಾಯ ಶಿತ್ತುಂಡೆ ಹಾಲಿನಲ್ಲಿ ಕಲ್ಲು ಸಕ್ಕರೆಯನ್ನು ಕಲಸಿ ನಿನಗೋಸ್ಕರ ಕಾಯಿಸಿ ಇಟ್ಟಿರುವೆನು, ಸ್ನಾನಕ್ಕೆ ಬಾರಪ್ಪ ಕೃಷ್ಣಾ - ಅಪ್ಪಂ ಕಲನ್ದು ಶಿತ್ತುಂಡ್ಯೆ ಅಕ್ಕಾರಮ್ ಪಾಲಿಲ್ ಕರನ್ದ್ 2-4-5,3) ಬಿಳು ಪಾದ ಸಕ್ಕರೆಯ ಪಾಕದೊಂದಿಗೆ ಸೇರಿದ ಲಡ್ಡು ಅದರೊಂದಿಗೆ ಶೀಡ್ಯೆ ಎಳ್ಳುಂಡೆಗಳನ್ನು ಬೇರೆ ಬೇರೆ ಪಾತ್ರೆಗಳಲ್ಲಿಟ್ಟಿರುವೆನು ಬಾರಪ್ಪ. ಕನ್ನಲಿ ಲಡ್ಡುವತ್ತೋಡು ಶೀಡ್ಯೆ ಕಾರೆಳ್ಳಿನುಣ್ಡ್ಯೆ ಕಲಂದಿಟ್ಟು - 2-9.

ಡಿ) ತಿರುಕಣ್ಣಮಡ್ಯೆ, ಪಂಚದಾರ ಪೊಂಗಲ್ - ಇವೆರಡು ಆಂಡಾಳ್ ಹೇಳಿರುವ 'ಕೂಡಾರೈವೆಲ್ಲುಂ' ಎಂಬ ಭಕ್ಷ್ಯವನ್ನು ಹೋಲುವುವು.

ವಿಜ್ಞಾನಕ್ಕಿಂತ ಬಲವು, ಬಲಕ್ಕಿಂತ ಅನ್ನವೇ ಹೆಚ್ಚಂತೆ. ಇದೇ ಅನ್ನಬ್ರಹ್ಮ ಯಜ್ಞಗಳಲ್ಲೆಲ್ಲಾ ಪ್ರಮುಖ ಹಾಗೂ ಕಡ್ಡಾಯವಾದುದು. ಅನ್ನದಾನವಿಲ್ಲದ ಯಜ್ಞ ತಾಮಸಯಜ್ಞವೆಂದು ಗೀತಾಚಾರ್ಯನೇ ಹೇಳಿರುತ್ತಾನೆ. ಅನ್ನದಾನ ಮಾಡಿದವನು ಉಳಿದೆಲ್ಲ ದಾನವನ್ನು ಮಾಡಿದವವನಾಗುವನು ಎಂದು ತೈತ್ತಿರೀಯೋಪನಿಷತ್ ಹೇಳಿದೆ. ಇದು ಎಲ್ಲರಿಗೂ ಮನದಟ್ಟಾಗುವಂತೆಯೋ ಏನೋ ತಿ.ತಿ.ದೇ. ಅನ್ನದಾನ ಯೋಜನೆಯನ್ನು ಹಮ್ಮಿಕ್ರೊಂಡಿದೆ. ಏಪ್ರಿಲ್ 80 ರಲ್ಲಿ ಆರಂಭವಾದ ಈ ಯೋಜನೆ 'ಶ್ರೀವೆಂಕಟೇಶ್ವರ ನಿತ್ಯನ್ನದಾನ ಟ್ರಸ್ಟ್ 85' ವತಿಯಿಂದ ನಿತ್ಯವು 20,000 ಯಾತ್ರಾರ್ಥಿಗಳಿಗೆ ಊಚಿತ ಭೋಜನವನ್ನು ನೀಡುತ್ತಿದೆ. ವಿವಿಧ ಪ್ರಸಾದ ಹಾಗೂ ಅನ್ನದಾನಕ್ಕಾಗಿ ಸಾಲಿಯಾನ ತಿ.ತಿ.ದೇ. 20,000 ಕ್ವಿಂಟಾಲ್‌ಗಳಷ್ಟು ಶ್ರೇಷ್ಠ ಮಟ್ಟದ ಸೋನಮಸೂರಿ ಅಕ್ಕಿಯನ್ನೂ ಸುಮಾರು 700 ಕ್ವಿಂಟಾಲ್ ಉದ್ದು, ಕಡಲೆ ಮತ್ತು ಹೆಸರು ಬೇಳೆಗಳನ್ನು ಕೊಳ್ಳು ವುದು.ಇದಕ್ಕಾಗಿ ಭಕ್ತರಿಂದ ಬರುವ ಶುಲ್ಕವೇ ಇದಕ್ಕೆ ಬಂಡವಾಳ. ಇಂದು (2012) ತಿರುಮಲೆಯ ಸ್ವಾಮಿ ಪುಷ್ಕರಿಣಿಯ ಎದುರಿಗೆ ನಾಲ್ಕು ಊಟದ ಕೋಣೆಗಳಲ್ಲಿ ಏಕಕಾಲದಲ್ಲಿ 4000 ಮಂದಿ ಭೋಜನ ಮಾಡಲವಕಾಶವಿರುವ ಮಾತೃಶ್ರೀ ವೆಂಗಮಾಂಬ ಅನ್ನದಾನ ಭವನದಲ್ಲಿ ಪ್ರತಿದಿನ 40 - 50 ಸಾವಿರ ಮಂದಿ ಭೋಜನ ಸ್ವೀಕರಿಸುತಂತಾಗಿದೆ. ಈ ಯೋಜನೆಯು ಆಲಯದ ಪ್ರಾಚೀನ ಪರಂಪರೆಯನ್ನೇ ಅವಲಂಭಿಸಿದೆ. ಆ ಕಾಲದಲ್ಲಿ ಯಾತ್ರಿಕರಿಗೆ ವಸತಿ ಊಟಗಳಿಗೆ ಅನುಕೂಲ ಕಡಿಮೆಯಾದ್ದರಿಂದ ಗುಡಿಯಲ್ಲಿ ದೊರಕುವ ಪ್ರಸಾದವೇ ಮೂಲಾಧಾರವಾಗಿತ್ತು. ಭಾರಿ ಉತ್ಸವ / ಜಾತ್ರೆಗಳಲ್ಲಿ 4000 ಭಕ್ತರು ಗುಡಿಯಲ್ಲೇ ಸಂತೃಪ್ತಿಯಾಗಿ ಪ್ರಸಾದಗಳನ್ನು ಪಡೆಯಲು ಸಾಧ್ಯವಾಗುತ್ತಿತ್ತು. ಅರವೀಟಿ ಕೊಂಡ ರಾಜನ ಕಾಲದಲ್ಲಿ (16 ನೆ ಶತಮಾನ) 2000 ಭಕ್ತರಿಗೆ ಉಚಿತ ಭೋಜನ ಏರ್ಪಾಡಾಗಿತ್ತು. ಶ್ರೀನಿವಾಸನಿಗೆ ಪಿರಮಿಡ್ ಆಕಾರದಲ್ಲಿ ಅನ್ನರಾಶಿಯನ್ನು ಮಾಡಿ ಅಪ್ಪ, ಅತಿರಸ, ವ್ಯಂಜನಗಳನ್ನು ಅದರೊಂದಿಗಿಟ್ಟು ನಿವೇದಿಸುತ್ತಿದ್ದರು. ಈ ಸೇವೆಯೇ 'ತಿರುಪ್ಪಾವಡ' ಈ ಪ್ರಸಾದಗಳನ್ನು ಸಮೀಪದ ನೆರ್ಕುಗ್ರಾಮ ಜನರಿಗೆ ವಿತರಣೆ ಮಾಡಲಾಗುತ್ತಿತ್ತು. ರಾಜನಂತೆ ಪ್ರಜೆಗಳು ಎಂಬಂತೆ ಗ್ರಾಮವಾಸಿಗಳು ನಿವೇದನೆಗಾಗಿ ಆಲಯಕ್ಕೆ ಉದಾರವಾಗಿ ದಾನ ಮಾಡಲಾರಂಭಿಸಿದರು. ಇದು ಅನ್ನ ಸಂತರ್ಪಣೆಯ ಆರಂಭ. ಅಕ್ಕಿ, ಹೆಸರು ಬೇಳೆ, ತುಪ್ಪ, ಸಾಸಿವೆ, ಎಣ್ಣೆ ಉಪ್ಪು, ಹರಿಶಿನ ಮೆಣಸು - ಇವೇ ಈ ಸೇವೆಯಲ್ಲಿ ನಿವೇದನೆಗಾಗಿ ಉಪಯೋಗಿಸಲ್ಪಡುವ ಪರಿಕರಗಳು. ಇವೆಲ್ಲವೂ ದಾನರೂಪದಲ್ಲಿ ಆಲಯ ಸೇರಿತು.

ಶುಚಿಯಾಗಿಯೂ ಶಾಸ್ತ್ರೋಕ್ತವಾಗಿಯೂ ನೈವೇದ್ಯಗಳನ್ನು ತಯಾರಿಸುತ್ತಿದ್ದುದರಿಂದ ಸಾಮಾನ್ಯವಾಗಿ ಯಾತ್ರಾರ್ಥಿಗಳಿಗೆ, ವಿಶೇಷವಾಗಿ ಸಂಪ್ರದಾಯಸ್ಥರಿಗೆ ಇವು ಪ್ರಿಯವಾಗಿ ಸರ್ವರೂ ಸ್ವೀಕರಿಸುತ್ತಿದ್ದರು. ಯಾತ್ರಾರ್ಥಿಗಳ ಆಶ್ರಮಗಳು ಹುಟ್ಟಿಕೊಂಡವು. ಉತ್ಸವಗಳು ಪೂಜೆಗಳೂ ನಿವೇದನೆಗಳೂ ಹೆಚ್ಚಾದವು. ದೇವಸ್ಥಾನದ ಷಟ್ಕಾಲ ಪೂಜೆಯಲ್ಲಿ ದಿನಕ್ಕೆ ಆರು ನಿವೇದನೆಗಳು ವಿಧಿಸಲ್ಪಟ್ಟವು. ಇವೇ ಸಂಧಿತಿರುಪೋನಕಂ ಉದಾ : ಎ)ಉದಯ ಕಾಲ ಸಂಧಿಯಲ್ಲಿ ನವನೀತ, ಬಿ) ಅರುಣೋದಯ ಸಂಧಿ ರಾಜಾನ್ನ ದಧ್ಯನ್ನ, ಸಿ) ಪೂರ್ವಾಹ್ನ ಮಂತ್ರಾರ್ಚನಾ ನಂತರ ಚರು, ದಧ್ಯನ್ನ, ಡಿ) ಮಧ್ಯಾಹ್ನ - ಅನ್ನಪ್ರಸಾದ, ತಿರುಕಣ್ಣಮಡ್ಯೆ, ಅತಿರಸ, ಸುಖಿಯ, ಇ) ಸಾಯಂಕಾಲ ಸಂಧಿ - ಪೊಂಗಲ್, ಪಾಯಸ, ಅಪ್ಪ, ದೋಸೆ, ಎಫ್)ಅರ್ದಜಾಮ ಸಂಧಿ - ಹಾಲು ಖೋವ, ಕಲ್ಲುಸಕ್ಕರೆ, ಹಣ್ಣುಗಳು. ಅಪ್ಪಪಡಿ ನಿವೇದನೆಯನ್ನು ಅಭಿಷೇಕ ವಾದ ಮೇಲೆ ವಕ್ಷಸ್ಥಳದಲ್ಲಿರುವ ಅಲರ್‌ಮೇಲ್‌ಮಂಗೈ ಅಮ್ಮನವರಿಗೆ ಮಾಡಬೇಕೆಂದು ಹಲವಾರು ದಾನಗಳು ಬಂದುವು.

ದರ್ಬಾರ್ ಶ್ರೀನಿವಾಸನಿಗೆ ಅನ್ನ ಹಾಗೂ ಸಕ್ಕರೆ ಪೊಂಗಲ್, ವಸಂತೋತ್ಸವದಲ್ಲಿ ಕೇಸರಿಭಾತ್ ನಿವೇದನೆ ವಿಧಿಸಲ್ಪಟ್ಟುವು. ವಿಜಯ ನಗರದರಸರ ಕಾಲದಲ್ಲಿ ಇವು 'ಸಂಧಿ ಸಮರ್ಪಣೆ' ಎಂದು ಕರೆಯಲ್ಪಟ್ಟಿತು. ಸಿಂಗಣ್ಣ, ರೇಚಯ್ಯ ದಣಾಯಕರಿಂದ ಸಿತಕರಗಂಡ (ಅವರ ಬಿರುದುಗಳಲ್ಲೊಂದು ) ಸಂಧಿಯಲ್ಲಿ (1328) ತಿರುಪ್ಪೋನಕಂ ನಿವೇದನೆಯನ್ನು 32 ಬ್ರಾಹ್ಮಣರಿಗೆ ನೀಡಬೇಕೆಂದು ಕಟ್ಟು ಪಾಡಿತ್ತು. ಹೀಗೆಯೇ ಬುಕ್ಕರಾಯ ಸಂಧಿ, ನರಸಿಂಹರಾಯಸಂಧಿ. ಬಹುನಿವೇದನೆಗಳಿಗಾಗಿ ವೈಭವ ಪೂರಿತವಾದ ದಾನಗಳು ಬರತೊಡಗಿದುವು. ವಿಜಯ ಗಂಡ ಗೋಪಾಲನು ದೇವಸ್ಥಾನಕ್ಕೆ ಭೂಮಿಯನ್ನು ದಾನವಾಗಿ ಕೊಟ್ಟನು. ಪ್ರಸಾದಗಳಿಗಾಗಿ ಶುಲ್ಕ ಸ್ವೀಕರಿಸುವ ವ್ಯವಹಾರ ಕಂಡುಬಂದಿತು. ಹೆಚ್ಚಿನ ದಾನ ದತ್ತಿಗಳ ಮೂಲಕ ನಿವೇದನೆಯ ಕಲಾಪಗಳು ಹೆಚ್ಚಾದುವು. ಪ್ರಸಾದಗಳು ಆಲಯಾರ್ಚಕರಿಗೂ ಇತರ ಸಿಬ್ಬಂದಿ ವರ್ಗದವರಿಗೆ ಸಂಪೂರ್ಣ ಆಹಾರವಾಗುತ್ತಿತ್ತು. ಇವರ ಮೇಲೆ ಸಹಾನುಭೂತಿ ತೋರಿದವರಲ್ಲಿ ಕಾಳತ್ತಿದೇವ ಮತ್ತು ತಿರುವೆಂಗಳ ನಾಥರು (12-13 ನೆ ಶತಮಾನ) ಮೊದಲಿಗರು. ನಿವೇದನೆ ಆದ ನಂತರ ಪ್ರಸಾದದಲ್ಲಿ ಸ್ವಲ್ಪ ಭಾಗವನ್ನು ಯಾತ್ರಾರ್ಥಿಗಳಿಗೆ ಹಂಚಿ ಮಿಕ್ಕದ್ದನ್ನು ಅವರವರಲ್ಲೇ ಹಂಚಿಕೊಳ್ಳಲು ಅವಕಾಶವಾಗಿ ಮಾರುವ ಯತ್ನವೂ ನಡೆಯಿತು. ಸಾಳುವ ನರಸಿಂಹನ ಕಾಲದಲ್ಲಿ (14 ನೆ ಶತಮಾನ) 1500 ಬ್ರಾಹ್ಮಣರಿಗೆ ಪ್ರಸಾದ ವಿತರಣೆ ಪುಕ್ಕಟೆ ಆಗುತ್ತಿತ್ತು. ತಿರುಕಣ್ಣಮಡೈ (ಸಕ್ಕರೆ ಪೊಂಗಲ್) ಪ್ರಸಾದದಲ್ಲಿ ಸ್ವಲ್ಪ ಭಾಗವನ್ನು ಆಲಯ ಸೇವಕರಿಗೆ ಹಂಚಲಾಗುತ್ತಿತ್ತು. ಇದನ್ನು ಅಕ್ಕಳಿ ಮಂಡೈ ಎಂದು ಕರೆಯುತ್ತಿದ್ದರು.

ವೆಂಕಟೇಶ್ವರನ ಆಲಯದಲ್ಲಿ ಪ್ರಸಾದ ಮಾರಾಟವನ್ನು 15 ನೆ ಶತಮಾನದ ಸುಮಾರಿಗೆ ಗುರುತಿಸಬಹುದು. ಇದು ಕ್ರಮೇಣ ಮಿರಾಸಿ ಪದ್ಧತಿ ಎಂದೆನಿಸಿಕೊಂಡಿತು. ಇದರ ಪ್ರಕಾರ ನಿವೇದಿಸಿದ ಪ್ರಸಾದಗಳಲ್ಲಿ ಮುಕ್ಕಾಲು ಭಾಗ (3/4) ಆಲಯ ಸೇವಕರಿಗೆ, ಇನ್ನುಳಿದ ಕಾಲುಭಾಗ (1/4) ಸೇವಾಕರ್ತನಿಗೆ (ದಾನಿಗೆ) ಕೊಡಬೇಕು ಇದು ಕ್ರಮಬದ್ಧ ಹಾಗೂ ಹಕ್ಕು ಬಾಧ್ಯತೆಯ ವಿಷಯವಾಯಿತು. ಮುಕ್ಕಾಲು ಭಾಗ ಪ್ರಸಾದದಲ್ಲಿ ಅವರವರ ಭಾಗಕ್ಕೆ ಬಂದ ಪ್ರಸಾದವನ್ನು ಒಟ್ಟಾಗಿ ಸೇರಿಸಿ ಆಲಯದಲ್ಲೇ ಅಥವ ಹೊರಗೆ ಮಾರುವ ವ್ಯವಸ್ಥೆ ಕಂಡು ಬಂದಿತು. ಆಲಯಕ್ಕೂ ಆಲಯ ಸೇವಕರಿಗೂ ಇದು ಒಳ್ಳೆಯ ಆದಾಯದ ಮೂಲವಾಗಿತ್ತು. ಪರಿಚಾರಕರು, ಉಭಯವೇದ ವಿದ್ವಾಂಸರು, ಸಂಗೀತ ನೃತ್ಯ ಕಲಾವಿದರು ಇಂಥಾ ವ್ಯವಸ್ಥೆಯನ್ನೇ ಅವಲಂಬಿಸಿದ್ದರು. ಈ ಆದಾಯ ಅವರ ಜೀವನೋಪಾಯವೇ ಆಗಿತ್ತು. ದಾನಿಗೆ ಬಂದ 1/4 ಭಾಗ ಪ್ರಸಾದವನ್ನು ಅವನ ಇಚ್ಛೆಯಂತೆ ಉಪಯೋಗಿಸಿಕೊಳ್ಳಬಹುದಾಗಿತ್ತು. ಆಲಯ ಸೇವಕರಲ್ಲಿ ಕೆಲವರಿಗೆ ಸ್ಥಾನತ್ತಾರರ (ಸ್ಥಳವಂದಿಗರು) ಪಟ್ಟವಿತ್ತು. ನಂದನವನ ಮಠದ ಮುಲ್ಲೈತಿರುವೇಂಗಡ ಜೀಯರರ ಶಾಸನದ ಪ್ರಕಾರ ತಮಗೆ ಬಂದ 1/4 ಭಾಗದ ಪ್ರಸಾದವು 12 ಸ್ಥಾನತ್ತಾರರಿಗೆ ವಿನಿಯೋಗ ಮಾಡಬೇಕೆಂದು ಸೂಚನೆ ಇತ್ತು. ಇವರುಗಳು- ಜೀಯರ್, ಏಕಾಂಗಿ, ಆಚಾರ್ಯಪುರುಷ, ನಂಬಿಮಾರರು (ಆಲಯಾರ್ಚಕರು) ಪೋಟು ಸಿಬ್ಬಂದಿಗಳು (ಅಡುಗೆ ಮನೆ ಕೆಲಸಗಾರರು) ಪಾರ್ಪತ್ಯೇದಾರರು, ನಿರ್ವಾಹಕರು, ಗುಮಾಸ್ತರು, ಅಂಜನೇಯ ಗುಡಿ ಪರಿಚಾರಕರು ಮತ್ತು ವಾದ್ಯದವರು. ಕೆಳ ತಿರುಪತಿಯಲ್ಲಿ 4 ಮಂದಿ ಶ್ರೀವೈಷ್ಣವರು, ಮೂವರು ತಿರುಚ್ಚಾನೂರ್‌ಸಭೈಯರು, ಒಬ್ಬರು ನಂಬಿಮಾರರು, ಇಬ್ಬರು ಕೋಯಿಲ್ ಕೇಳ್ವಿ, ಇಬ್ಬರು ಲೆಕ್ಕಿಗರು, ತಿರುಮಲೈಯಲ್ಲಿ 7 ಮಂದಿ ಶ್ರೀವೈಷ್ಣವರು 5 ಆಲಯ ಸಿಬ್ಬಂದಿಗಳು ಸ್ಥಾನತ್ತಾರರಾಗಿದ್ದರು. ಆಲಯ ಸೇವಕರಿಗೆ ನಗದು ಹಣ ಉಚಿತ ಭೋಜನ ಎರಡೂ ಲಭ್ಯವಾಗುತ್ತಿತ್ತು. ದಾನಿಗೆ ಬಂದ 1/4 ಪ್ರಸಾದ ಪದ್ಧತಿಯನ್ನು 'ವಿಟ್ಟವನ್ ವಿಳಕ್ಕಡು' ಎಂದು ಕರೆಯುತ್ತಿದ್ದರು. ಯಾತ್ರಿಕರ ಸಂಖ್ಯೆ ಹೆಚ್ಚಾದಾಗ 1/4 ಭಾಗ ಪ್ರಸಾದ ಸಾಲುತ್ತಿರಲಿಲ್ಲ. ಗೋವಿಂದರಾಜಸ್ವಾಮಿ ದೇವಸ್ಥಾನದಲ್ಲಿ ತಿರುಮಲೈನಂತೆಯೇ ನಿವೇದನೆಯಾದ ಪ್ರಸಾದವನ್ನು ಜೀವನಕ್ಕಾಗಿ ಅವರವರಲ್ಲಿ ವಿತರಿಸಿಕೊಂಡು ಮಾರಾಟ ಮಾಡಲು ಅನುಮತಿ ನೀಡಲಾಯಿತು. ಎರಡನೆ ಗೋಪುರದ ಬಳಿ ಪ್ರಸಾದಗಳ ಮಾರಾಟವಾಗುತ್ತಿದ್ದು ದನ್ನು ಇಲ್ಲಿ ಸ್ಮರಿಸಬಹುದು. ಆಲಯದ ಹೊರಗೆ ಮಾರಾಟಕ್ಕಾಗಿ ಅಧಿಕರಣ ವ್ಯವಸ್ಥೆ ಕಂಡು ಬಂದಿತು. 'ಪ್ರಸಾದಕ್ಕಾರರ್' ಎಂಬ ಗುತ್ತಿಗೆದಾರರು ಹುಟ್ಟಿಕೊಂಡರು. ಈ ವ್ಯವಸ್ಥೆಗೆ ಆಲಯದ ಅನುಮತಿಯೂ ದೊರೆಯಿತು. ನೋಂದಣಿ ಕ್ರಮವೂ ವಿಧಿಸಲ್ಪಟ್ಟಿತು. ಈ ಗುತ್ತಿಗೆದಾರರು ವರ್ಷಕ್ಕೆ ಒಂದು ನಿಗದಿ ಪಡಿಸಿದ ಮೊತ್ತವನ್ನು ಸಲ್ಲಿಸಿ ಪ್ರಸಾದ ಪಡೆಯುವವರ ಪರವಾಗಿ ಇವರು ಪ್ರಸಾದಗಳನ್ನು ಖರೀದಿಸಿಕೊಂಡು ಮಾರಿ ಲಾಭಗಳಿಸಿಕೊಂಡು ಬಿರುಸಿನ ವ್ಯಾಪಾರವನ್ನೇ ಆರಂಭಿಸಿ ಶೀಘ್ರದಲ್ಲೇ ಸಿರಿವಂತರಾದರು.

ಈ ವ್ಯವಸ್ಥೆಯು ದಿವ್ಯಸಾನ್ನಿಧ್ಯದಲುಂಟಾದ್ದರಿಂದ ನಿರ್ವಂಚನೆಯಿಂದ ವ್ಯವಹಾರಗಳು ಚೆನ್ನಾಗಿಯೇ ಸಾಗಿದುವು. ಸ್ಥಾನತ್ತಾರರಿಗೆ ಗುತ್ತಿಗೆದಾರರು ಉತ್ತೇಜನ ಕೊಡುತ್ತಿದ್ದರು. ಇವರ ಜೊತೆಗೆ ಕಿರಿಯ ಆಲಯಗಳು, ಅನ್ನ ಸತ್ರಗಳು, ಮಠಗಳು ವಿತರಣೆಯ ಸಾಧನೆಗಳಾದುವು. ರಾಮಾನುಜ ಕೂಟಕ್ಕೆ 10 ಪ್ರಸಾದಗಳನ್ನು ಇತರ ಸಂಸ್ಥೆಗಳಿಗೆ 20 ಪ್ರಸಾದಗಳನ್ನು ಕಳುಹಿಸುವ ಏರ್ಪಾಡಾ ಯಿತು. ಈ ವ್ಯವಹಾರಗಳಲ್ಲಿ ಸಾಳುವ ನರಸಿಂಹರಾಯನು ಮೇಲ್ವಿಚಾರಣೆಗಾಗಿ ಕಂದಾಡೈ ರಾಮಾನುಜ ಅಯ್ಯಂಗಾರ್ ಎಂಬ ಭಕ್ತರನ್ನು ನೇಮಿಸಿದ್ದ. ಸಿತಕರ ಗಂಡ ಮಠ, ತಿರುಮಳಿಶೈಪಿರಾನ್ ಮಠ, ನಂದನವನ ಮಠ, ಪೇಯಾಳ್ವಾರ್ ಮಠ ಮತ್ತು ಜೀಯಂಗಾರ್ ಮಠಗಳು ಅಂದು ಪ್ರಸಾದವಿತರಣೆ ಮತ್ತು ಧಾರ್ಮಿಕ ಚಟುವಟಿಕೆಗಳಲ್ಲಿ ಮಹತ್ತರವಾದ ಪಾತ್ರ ವಹಿಸಿದ್ದುವು. ಅಪ್ಪಂ, ಅತಿರಸ, ಪಾಯಸ ಪ್ರಸಾದಗಳನ್ನು ಮೊದಲ ಬಾರಿಗೆ ಮಾರಿ ಲಾಭಗಳಿಸಿದ್ದು ಪ್ರಥಮವಾಗಿ ರಾಮಾನುಜ ಕೂಟವೇ. ಪೂರ್ತ ಅಥವ ಒಡೆದ ಮಡಕೆಗಳಲ್ಲಿ ಪ್ರಸಾದವನ್ನು ಕೊಡುತ್ತಿದ್ದರು.



Edited and Published on behalf of T.T.Devasthanams by **Prof. K.Rajagopalan**, Phd.,
Chief Editor, T.T.D. and Printed at T.T.D. Press by **Sri P. Ramaraju,** M.A., Special Officer (Press & Publications ), T.T.D. Press, Tirupati - 517 507.

ತಿರುಮಲೆ ತಿರುಪತಿ ದೇವಸ್ಥಾನಗಳು



ತಿರುಮಲೆ
ಶ್ರೀ ವೆಂಕಟೇಶ್ವರ ಸ್ವಾಮಿಯವರ
ಬ್ರಹ್ಮೋತ್ಸವ
2020 ಸೆಪ್ಟೆಂಬರ್
19 ರಿಂದ 27 ರ ವರೆಗೆ



**26-09-2020 ಶನಿವಾರ**
**ರಾತ್ರಿ: ಅಶ್ವವಾಹನ**

**27-09-2020**
**ಭಾನುವಾರ**
**ರಾತ್ರಿ: ತಿರುಚ್ಚಿ ಉತ್ಸವ**
**ಧ್ವಜಾವರೋಹಣ**





designpsivaprasad

SAPTHAGIRI (KANNADA) ILLUSTRATED MONTHLY Published by Tirumala Tirupati Devasthanams
printing on 25-08-2020. Regd. with the Registrar of Newspapers under "RNI" No.10742, Postal Regd.No.TRP/14 - 2018-2020
Licensed to post without prepayment No.PMGK/RNP/WPP-04/2018-2020

